ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY DEBATES

ಬುಧವಾರ 6ನೇ ಆಗಸ್ಟ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10-20 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (**ಶ್ರೀ ಚಂದ್ರಶೇಖರ್ ಎಂ. ಮಾಮನಿ**) ಅವರು ಪೀಠವನ್ನು ಅಲಂಕರಿಸಿದ್ದರು.

ನಿಯಮ 69ರ ಮೇರೆಗೆ

ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳ ವಿಳಂಬ ಹಾಗೂ ಅಸಮರ್ಪಕ ಪುನರ್ವಸತಿಯಿಂದಾಗಿ ಬಾಗಲಕೋಟೆ ಪಟ್ಟಣದ ಮುಳುಗಡೆ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾಗಿ ನಾನು ಈಗಾಗಲೇ ತಮ್ಮ ಅನುಮತಿಯನ್ನು ಪಡೆದು ನಿಂತಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ವಿಳಂಬ ಹಾಗೂ ಅಸಮರ್ಪಕ ಪುನರ್ವಸತಿ ಮತ್ತು ಇತ್ತೀಚೆಗೆ ಬಂದ ಭಾರಿ ಪ್ರವಾಹದಿಂದಾಗಿ ಬಾಗಲಕೋಟೆ ನಗರದ ಮುಳುಗಡೆ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟ ಉಂಟಾಗಿರುತ್ತದೆ. ಅದರ ಜೊತೆಯಲ್ಲಿ ಬೀಳಗಿ ಜಮಖಂಡಿ, ಹುನಗುಂದ ತಾಲ್ಲೂಕಿನ ಕೆಲವು ಹಳ್ಳಿಗಳ ಪುನರ್ವಸತಿ ಜೊತೆ ಈ ಯೋಜನೆಯ ಅಡಿಯಲ್ಲಿ ಜಲ ವಿದ್ಯುತ್ ಯೋಜನೆಯನ್ನು ಅಳವಡಿಸಿದ್ದು ಅದನ್ನು ಕಾರ್ಯಗತಗೊಳಿಸದೆ ಟ್ಯಾಫ್ಕೋ ಸಂಸ್ಥೆಗೆ ನೀಡಲಾಗಿದ್ದು ಸದರಿ ಸಂಸ್ಥೆ ಕರ್ನಾಟಕ ಮತ್ತು ಆಂಧ್ರಪ್ರದೇಶದ ಮಧ್ಯೆ ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ ವಿವಾದ ಇರುವುದರಿಂದ ಆ ವಿವಾದ ಬಗೆಹರಿಯುವವರೆಗೆ ಜಲ ವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿರುವುದರಿಂದ ಈ ಯೋಜನೆಯು ನೆನೆಗುದಿಗೆ ಬಿದ್ದಿದೆ. ಇದು ಸಾರ್ವಜನಿಕ ಮಹತ್ವದ ವಿಚಾರವಾಗಿರುವುದರಿಂದ ನಾವು ಇದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅಪ್ಪಣೆಯನ್ನು ಕೇಳಿದಾಗ ತಾವು ಇದಕ್ಕೆ ಅಪ್ಪಣೆಯನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಪ್ರಮುಖವಾಗಿ ಮಹತ್ವ ಇರತಕ್ಕಂಥ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಬರತಕ್ಕಂಥ ಪ್ರತಿಯೊಂದು ಪ್ರಾಜೆಕ್ಟ್‌ಗಳ ಬಗ್ಗೆ ಕೂಡ ನಾನು ಹೇಳಿದ್ದೆ. ಅದರ ಬಗ್ಗೆ ವಿಶೇಷವಾಗಿ ಬೇರೆ ಚರ್ಚೆಗೆ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ನೀರಾವರಿ ಇಲಾಖೆಯ ಬೇಡಿಕೆ ಬಂದಾಗ ಆಗ ನಾನು ಮಾತನಾಡುತ್ತೇನೆ. ಆದರೆ ಈಗ ತಕ್ಷಣ

ಈ ಒಂದು ಪುನರ್ವಸತಿ ಕೆಲಸ ಬೀಳಗಿಯಲ್ಲಾಗಲಿ, ಜಮಖಂಡಿ ತಾಲ್ಲೂಕಿನಲ್ಲಿ ಆಗಲೀ, ಹುನಗುಂದದ ಕೆಲವು ಭಾಗದಲ್ಲಿ ಆಗಲೀ, ಮತ್ತು ಬಾಗಲಕೋಟೆಯಲ್ಲಾಗಲಿ ಇದು ಯಾವರೀತಿಯಾಗಿ ನಡೆದಿದೆ? ಅದರ ಜೊತೆಯಲ್ಲಿ ಆಲಮಟ್ಟಿ ಕೆಲಸವೂ ಕೂಡ ಎಷ್ಟರಮಟ್ಟಿಗೆ ಸಮರ್ಪಕವಾಗಿ ನಡೆದಿದೆ? ಮೊನ್ನೆ ನಾಗೇಗೌಡರು ಒಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಕೆಲವು ಕ್ಯಾಸೆಟ್‌ಗಳನ್ನು ತೋರಿಸಿ ಉಳಿದ ಕೆನಾಲ್ ಕೆಲಸಗಳು ಎಷ್ಟು ಪ್ರಗತಿ ಹೊಂದಿವೆ ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟರು. ಅದೂ ಅಲ್ಲದೆ ಮಾಹಿತಿಯನ್ನು ಕೊಟ್ಟ ಮರುದಿವಸವೇ 1999ರಲ್ಲಿ ಈ ಯು.ಕೆ.ಪಿ. ಪ್ರಾಜೆಕ್ಟ್‌ನ್ನು ಮುಗಿಸುತ್ತೇನೆ ಎಂದು ಸ್ಟೇಟ್‌ಮೆಂಟ್ ಕೊಟ್ಟರು. ಮುಗಿಸುತ್ತೇನೆ ಎಂದು ಹೇಗೆ ಹೇಳಿದರೂ ಏನೋ? ಅದನ್ನು ಕನ್‌ಸ್ಟ್ರಕ್ಟ್ ಮಾಡಿ ಮುಗಿಸುತ್ತೇನೆ ಎಂದು ಹೇಳಿದರೋ ಅಥವಾ ಅದಕ್ಕೆ ಸಮಾಧಿ ಮಾಡುತ್ತೇನೊ ಎಂದು ಹೇಳಿದರೊ ಗೊತ್ತಾಗುತ್ತಿಲ್ಲ. ಏಕೆಂದರೆ ಅವರು ಕೊಟ್ಟಂಥ ಅಂಕಿಅಂಶವನ್ನು ನೋಡಿಕೊಂಡು ಎಷ್ಟರಮಟ್ಟಿಗೆ ಕೆಲಸ ಉಳಿದಿದೆ, ಇನ್ನು ಎಷ್ಟು ಸರ್ವೆ ಮಾಡತಕ್ಕಂಥದ್ದು ಇದೆ, ಎಷ್ಟು ಹಣವನ್ನು ಈ ನಾಲ್ಕು ತಿಂಗಳಿನಲ್ಲಿ ಖರ್ಚು ಮಾಡಿದ್ದಾರೆ ಎನ್ನತಕ್ಕಂಥ ಮಾಹಿತಿಯನ್ನು ಇಟ್ಟುಕೊಂಡು ಅವರು ಉತ್ತರವನ್ನು ಕೊಟ್ಟಿದ್ದರೆ ಸರಿ. ಆದರೆ, ಅವರಿಗೆ ಯಾವಾಗಲೂ ಸ್ವಲ್ಪ ತರಾತುರಿ. ಟಿ.ವಿ. ಪ್ರೆಸ್, ರೇಡಿಯೋ ವರದಿಗಾರರು ಎದುರು ಇದ್ದರೆ ಸಾಕು ಅವರಿಗೆ ಅಟ್ರಾಕ್ಷನ್ ಆಗಿ ಪದೇ ಪದೇ ಪುರುಸೊತ್ತು ಇಲ್ಲದೇ ಹೇಳುತ್ತಲೇ ಇರುತ್ತಾರೆ. ಆ ಒಂದು ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟರು. ಸುಮಾರು ಎರಡು ವರ್ಷಗಳಲ್ಲಿ ಯು.ಕೆ.ಪಿ.ಯನ್ನು ಕಟ್ಟಿಸಿ ಪುನರ್‌ವಸತಿ ಕಾರ್ಯವನ್ನು ಸಂಪೂರ್ಣವಾಗಿ ಮುಗಿಸುತ್ತೇವೆ ಎನ್ನುವ ಅವರ ಹೇಳಿಕೆ ಎಲ್ಲಾ ಪತ್ರಿಕೆಗಳಲ್ಲಿ ಸಭೆ ನಡೆದ ದಿವಸವೇ ಸಾಯಂಕಾಲ ಬಂದಿದೆ. ಆದರೆ, ಅಲ್ಲಿ ವಾಸ್ತವಿಕ ಸ್ಥಿತಿ ಏನಿದೆ ಎಂದು ಬಾಗಲಕೋಟೆಯಲ್ಲಿ ಈಗಿರತಕ್ಕಂಥ ಕಮಿಷನ್‌ರವರೆ ಹೇಳಿದ್ದಾರೆ. ಇವತ್ತಿನ ದಿವಸ ಅಲ್ಲಿ ಎಷ್ಟು ಹಾನಿಯಾಗುತ್ತಿದೆ? ಬಾಗಲಕೋಟೆ ಪುನರ್‌ವಸತಿ ನಗರದಲ್ಲಿ ನಡೆಯತಕ್ಕಂಥ ರಸ್ತೆ ಕಾಮಗಾರಿಗಳು ಇರಬಹುದು, ಅಥವಾ 77 ಸೆಂಟರ್‌ಗಳಲ್ಲಿ ಕೊಡತಕ್ಕಂಥ ಸವಲತ್ತುಗಳೇ ಇರಬಹುದು, ಅವುಗಳ ಕೆಲಸ ಯಾವ ಮಟ್ಟದಲ್ಲಿ ನಡೆದಿದೆ ಎಂಬ ಬಗ್ಗೆ ಸ್ಪಷ್ಟವಾಗಿ ಅವರು ಪತ್ರಿಕೆಗಳಿಗೆ ಏನು ಹೇಳಿದ್ದಾರೆಂದರೆ? " series of scandals involving the Government Agencies, contract works and middlemen have been unearned in the execution of Rs. 410/- crores Re-settlement project for being displayed by the Upper Krishna Irrigation Project. The Government has referred only one fraud involving the public Works Department to the C.O.D., for investigation. The rest are being hushed up. The Commissioner for Rehabilitation and resettlement Mr. S.B. Jamdar submitted a report to the Government two months ago listing the gross irregularities encompassing the public Works Department, Urban Development Department and the Karnataka Electricity Board." ಈ ಮೂರು ಇಲಾಖೆಗಳ ಬಗ್ಗೆ ಅವರು ಹೇಳಿದ್ದಾರೆ. ಪಿ.ಡಬ್ಲ್ಯೂ.ಡಿ.,

ಅರ್ಬನ್ ಡೆವಲಪ್‌ಮೆಂಟ್, ಬಾಗಲಕೋಟೆ ಟೌನ್‌ನಲ್ಲಿ ಆಗತಕ್ಕಂಥ ರಸ್ತೆಗಳ ಬಗ್ಗೆ, ಮನೆಗಳ ಬಗ್ಗೆ, ಲೇ-ಔಟ್ ಬಗ್ಗೆ ಯಾವ ರೀತಿ ಹಣ ದುರುಪಯೋಗವಾಗುತ್ತಿದೆ ಎಂದು ವರದಿ ಕೊಟ್ಟಿದ್ದಾರೆ. ಆಮೇಲೆ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಯಾವ ರೀತಿ ಅಸಮರ್ಪಕವಾಗಿ ಕೆಲಸ ಮಾಡಿದ್ದಾರೆಂದೂ ಹೇಳಿದ್ದಾರೆ. ಆದರೆ, ಇದರ ಬಗ್ಗೆ ಯಾವುದಕ್ಕೂ ಕೂಡ ರೆಫರೆನ್ಸ್ ಮಾಡಿಲ್ಲ. ಒಂದು ಎಕ್ಸೆಪ್‌ಷನ್ ಏನೆಂದರೆ, ಪಿ.ಡಬ್ಲ್ಯೂ.ಡಿ. ನಲ್ಲಿ ಆಗಿರತಕ್ಕಂಥ ಕೆಲವು ಇರ್‌ರೆಗ್ಯುಲಾರಿಟೀಸ್‌ಗಳನ್ನು ಮಾತ್ರ ಸಿ.ಓ.ಡಿ.ಗೆ ರೆಫರ್ ಮಾಡಿದ್ದಾರೆ. ಬಾಕಿ ಯಾವುದನ್ನೂ ಮಾಡಿಲ್ಲ. ಒಬ್ಬ ಪ್ರಾಮಾಣಿಕ ಅಧಿಕಾರಿ ಮತ್ತು ಒಳ್ಳೆಯ ಕೆಲಸ ಮಾಡತಕ್ಕಂಥ ವ್ಯಕ್ತಿ ಅಲ್ಲಿದ್ದು, ಅಲ್ಲಿನ ನ್ಯೂನತೆಗಳನ್ನು ಕಂಡುಹಿಡಿದು ರೆಫರ್‌ಮಾಡಿದಾಗ ಸರ್ಕಾರ ಕ್ರಮ ಜರುಗಿಸಲಿಲ್ಲವೇಕೆಂದು ನಮಗೆ ಸಂಶಯ ಬರುತ್ತದೆ. ಅದರ ಮೇಲೆ ಅವರು ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ? ಈ ರೀತಿಯ ವಿಳಂಬ ನೀತಿಯಿಂದ ಮುಂದಿನ ಕೆಲಸಗಳೂ ನಿಂತುಹೋಗುತ್ತವೆ. ಮುಂದೆ ಆಗತಕ್ಕಂಥ ಕಾರ್ಯಗಳ ಮೇಲೂ ಇದರ ಪರಿಣಾಮ ಬೀಳುತ್ತದೆ. ಮತ್ತೆ ಅವರು ಮುಂದೆ ಏನು ಹೇಳಿದ್ದಾರೆಂದರೆ? "Athough I have sought the suspension of many of these officers, they are still working in the same posts." ಇದು ನಾನು ಹೇಳಿದ ಮಾತಲ್ಲ. ನಾನು ಹೇಳಿದ್ದರೆ, ಅವರು ಏನು ಹೇಳುತ್ತಿದ್ದರು? ನಾವು ನ್ಯಾಯವಾದ ಬೇಡಿಕೆಗಳು ಮತ್ತು ನ್ಯಾಯವಾದ ಅನಿಸಿಕೆಗಳನ್ನು ಇಟ್ಟರೂ ಅವರು ಕ್ರಮ ತೆಗೆದುಕೊಳ್ಳುವುದಿಲ್ಲ. ಹಿಂದೆ ವಿ.ಸಿ. ಚಾನಲ್ ವಿಷಯದ ಬಗ್ಗೆ ಮಾತನಾಡುತ್ತಾ ಅದನ್ನು ಸದನದ ಮೂಲಕವೇ ಲೋಕಾಯುಕ್ತಕ್ಕೆ ರೆಫರ್ ಮಾಡಿ, ಆ ರೀತಿ ಮಾಡಿದರೆ ನಮಗೂ ಅನುಕೂಲವಾಗುತ್ತದೆ, ಅಲ್ಲಿ ಅಪ್ ಟು ಡೇಟ್ ಕೆಲಸ ಆಗುತ್ತದೆ ಎಂದು ಹೇಳಿದ್ದೆ. ಅದಕ್ಕೆ ನಾವು ಚಾಲೆಂಜ್ ಮಾಡುತ್ತೇವೆ, ನೀವೇ ಹಾಕಿ ಎಂದು ಹೇಳಿದರು. ನಾನು ಮಾಡುವುದು ನನಗೆ ಗೊತ್ತಿದೆ. ಇನ್ ಸೈಡ್ ದಿ ಹೌಸ್ ನಾನು ಅವರನ್ನು ಕೇಳಿದ್ದು ಎಕೆಂದರೆ? ಅವರ ಗಮನಕ್ಕೂ ಬಂದು ಅವರ ಕನ್‌ಸೆಂಟ್‌ನಿಂದ ಹೋದರೆ, ರೆಕಾರ್ಡ್ಸ್ ಹೋಗುತ್ತದೆ, ಸುಲಭ ಆಗುತ್ತದೆ, ಎಲ್ಲಾ ಅಧಿಕಾರಿಗಳನ್ನು ಕರೆಸುವುದಕ್ಕೆ ಆಗುತ್ತದೆ, ಇಲ್ಲವೆಂದರೆ ನಾವು ಅಪ್ ಟು ಡೇಟ್ ಮಾಹಿತಿಗಾಗಿ ಬೆನ್ನು ಹತ್ತಬೇಕಾಗುತ್ತದೆ. ಅದಕ್ಕೆ ನಾವು ಹೇಳಿದ್ದು ಪತ್ರಿಕೆಯಲ್ಲೂ ಬಂತು, ನಾನು ನೋಡಿದ್ದೇನೆ. ಯಾವ ದೃಷ್ಟಿಯಿಂದ ಬಂತೋ ಗೊತ್ತಾಗಲಿಲ್ಲ. ಆದರೆ, ನಾನು ಹೇಳಿದ ಉದ್ದೇಶವೇನೆಂದರೆ, ಅವರು ಇಲ್ಲಿಂದ ರೆಫರ್ ಮಾಡಿದರೆ, ಅಂಥ ಕೆಲಸಗಳಿಗೆ ನಾವು ನಾಳೆ ಹೋಗಿ ಹೇಳುವುದಕ್ಕೆ ಅನುಕೂಲವಾಗುತ್ತದೆ; ಮತ್ತು ಎಲ್ಲಾ ರೆಕಾರ್ಡ್ಸ್‌ನ್ನು ತರಿಸಿಕೊಳ್ಳುವುದಕ್ಕೂ ಸುಲಭ ಆಗುತ್ತದೆ. ಇಲ್ಲವೆಂದರೂ, ವೈಯಕ್ತಿಕವಾಗಿ ನಾನು ಹೋಗಿ ಮಾತನಾಡಬಹುದು ಎಲ್ಲರಿಗೂ ಹಕ್ಕು ಇದೆ. ನಾನು ಒಬ್ಬನೇ ಅಲ್ಲ. Any man can go to Lokayukta and file an affidavit and file a complaint. ಆದರೆ, ಸದನ ಇದ್ದಾಗ, ಸದನದಲ್ಲಿ ಇದನ್ನು ಎತ್ತಿದಾಗ ಅದರ ಮಹತ್ವವನ್ನು ತಿಳಿದುಕೊಂಡು ಅವರು ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಕೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ. ಕನಿಷ್ಟ ಪಕ್ಷ, ಇವತ್ತು ಅವರ ಅಧಿಕಾರಿಗಳೇ ಹೇಳುತ್ತಿದ್ದಾರೆ. ಏನು ಹೇಳುತ್ತಿದ್ದಾರೆ? Although I have sought for suspension of many of these officers, they are

still working in the same posts". ಅಂದರೆ, ನಾನು ಕಂಪ್ಲೆಂಟ್ ಮಾಡಿದರೂ ಕೂಡ, ಆ ಜನ ಅದೇ ಜಾಗದಲ್ಲಿ ಕೆಲಸ ಮಾಡುತ್ತಿದ್ದಾರೆ, ಎಂದರೆ ನಾನು ಏನು ಮಾಡಲಿ? ನಾನು ಅಸಹಾಯಕನಾಗಿದ್ದೇನೆ ಎನ್ನತಕ್ಕಂಥ ಮಾತನ್ನು ನಿಮ್ಮ ಅಧಿಕಾರಿಗಳೇ ಹೇಳಿದ್ದಾರೆ. ಇದು ಟೈಮ್ಸ್ ಆಫ್ ಇಂಡಿಯಾದಲ್ಲಿ ಎರಡನೇ ಜುಲೈನಲ್ಲಿ ಬಂದಿರಬಹುದು. ಇದರ ಫೋಟೋಸ್ಟ್ಯಾಟ್ ಕಾಪಿ ಮಾಡಿಸಿಯೇ ಮಾನ್ಯ ಮಂತ್ರಿಯವರಿಗೆ ಕೊಡುತ್ತೇನೆ. ಅವರು ಏನು ಹೇಳಿದ್ದಾರೆಂದರೆ. "Although I have sought the suspension of many of the officers, they are still working in the same posts, he said. Only some belonging to the Bagalkote Development Authority have been suspended. However, he said, in some cases, we have registered criminal cases and the police have filed Charge-sheets" Mr. Jamdaar, said. ಫರ್ದರ್ ಈ ಬಿ.ಡಿ.ಎ, ಬಗ್ಗೆ ಏನು ಹೇಳಿದ್ದಾರೆಂದರೆ, "In the case of Public Works Department, tenders were approved for construction of roads in the new town, each kilometre of road work has been estimated to cost anything between 52 lakhs and 63 lakhs, while it should not have been more than 20 lakhs to 25 lakhs, Mr. Jaamdar said. It is hard to believe that the inflated tenders were passed without the knowledge of the higher officers". This has been stated by no less than a person of Commissioner Grade, Mr. Jaamdar. ಯಾರು ಅಲ್ಲಿ ಕೆಲಸ ಮಾಡುತ್ತಿದ್ದಾರೆ? ಯಾರು ಆ ಸ್ಥಳದಲ್ಲಿ ಇದ್ದಾರೆ ಅವರೇ, ಈ ರೀತಿ ಕೆಲಸಗಳನ್ನು ನಡೆಸಿದ್ದಾರೆ ಇದರ ಬಗ್ಗೆ ಆ್ಯಕ್ಷನ್ ತೆಗೆದುಕೊಳ್ಳಿ ಎಂದು ಹೇಳಿದರೂ ಕೂಡ ಇಲ್ಲಿಯವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎನ್ನುವ ವಿಷಾದವನ್ನು ಅವರು ವ್ಯಕ್ತಪಡಿಸಿದ್ದಾರೆ. ಈ ಪರಿಸ್ಥಿತಿ ಇರುವಾಗ, ಅಲ್ಲಿ ಬಹಳ ಒಳ್ಳೆಯ ರೀತಿಯಿಂದ ಮತ್ತು ಸಮರ್ಪಕವಾಗಿ ಕೆಲಸ ನಡೆದಿಯೆಂದು ಅವರು ಹೇಳುತ್ತಿದ್ದಾರೆ. ಅದು ಹೇಗೆ? ಅವರು 77 ಸೆಂಟರ್‌ಗಳನ್ನು ಮಾಡಿದರೂ ಕೂಡ ಅಲ್ಲಿ ಯಾವ ಬೇಸಿಕ್ ಸೌಲಭ್ಯಗಳು ಕೂಡಾ ಇಲ್ಲ. 10x10 ಅಡಿಗಳ ಜಾಗದಲ್ಲಿ ಜಿಂಕ್ ಶೀಟ್ ಹಾಕಿ ಶೆಡ್ಡುಗಳನ್ನು ಅಲ್ಲಿ ಹಾಕಿದ್ದಾರೆ. ಇವತ್ತಿನ ದಿವಸ ಸುಮಾರು 8 ಸಾವಿರದ 160 ಫ್ಯಾಮಿಲಿಗಳು ಅಲ್ಲಿ ಇವೆ. 8,160 families will have to be rehabilitated in 177 centres. ಇದರಲ್ಲಿ ಇನ್ನೂ ಕೆಲವು ಕಡೆ ರೀಹೆಬಿಲಿಟೇಷನ್ ಪ್ರೋಗ್ರಾಮ್‌ಗೆ ಲ್ಯಾಂಡ್ ಅಕ್ವೆಸಿಷನ್ ಆಗಿದೆ. ಇದಕ್ಕೆ ಸುಮಾರು 970 ಕೋಟಿ ರೂಪಾಯಿಗಳು ಬೇಕಾಗಿದೆ. ಅದರಲ್ಲಿ 243 ಕೋಟಿ ರೂಪಾಯಿಗಳ ಲ್ಯಾಂಡ್ ಅಕ್ವೆಸಿಷನ್ ಪ್ರೋಗ್ರಾ ಇನ್ನೂ ಅರ್ಧದಲ್ಲಿ ನಡೆಯುತ್ತಿದೆ. ಹೀಗೆ ಒಂದು ಕಡೆ, ನಾವು ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಆದರೆ, ಇನ್ನೊಂದು ಕಡೆ ಅವರುಗಳಿಗೆ ಯಾವ ರೀತಿ ಮನೆಗಳನ್ನು ಕಟ್ಟಿಸಿ ಸೌಲಭ್ಯಗಳನ್ನು ಕೊಡಬೇಕಾಗಿತ್ತೋ ಆ ರೀತಿ ಕಟ್ಟಿಸಿ ಕೊಟ್ಟಿಲ್ಲ. ಹಳ್ಳಿಯಲ್ಲಿರತಕ್ಕಂಥ ಜನರ ಅಪೇಕ್ಷೆ ತಮಗೆ ಗೊತ್ತಿದೆ. ನೇರವಾಗಿ ಇಲ್ಲಿನ ಹಾಗೆ ಎರಡು ಕೊಠಡಿ ಮಾಡಿಕೊಂಡು ಸ್ಟೌವ್ ತಂದು ಅಡಿಗೆ ಮಾಡಿಕೊಂಡು ಎಲ್ಲಾದರೂ ಕೆಲಸಕ್ಕೆ ಹೋಗಿ ಸಾಯಂಕಾಲ

ವಾಪಸ್ ಬರುವ ಹಾಗೆ ಅಲ್ಲಿ ಇರುವುದಿಲ್ಲ. ಅವರುಗಳಿಗೆ ದನಕರುಗಳು ಇರುತ್ತವೆ, ಕುರಿಗಳು ಇರುತ್ತವೆ, ಎತ್ತುಗಳು ಇರುತ್ತವೆ, ಕುಂಟೆ ನೇಗಿಲು ಇಡುವುದಕ್ಕೆ ಜಾಗಗಳಾದರೂ ಬೇಕಲ್ಲಾ? ಯಾವ ರೀತಿಯಾಗಿ ತಮ್ಮ ಮನೆ ಮುಂದೆ ಈ ಕೃಷಿಗೆ ಸಂಬಂಧಪಟ್ಟ ವಸ್ತುಗಳನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇದೆಯೋ ಅದೇ ರೀತಿಯಾಗಿ ಅವರಿಗೆ ಅನುಕೂಲ ಮಾಡಿಕೊಡಬೇಕು. ಅದನ್ನೂ ಕೂಡ ಮಾಡಿಲ್ಲ. ಎಲ್ಲರಿಗೂ ಕೊಟ್ಟ ಹಾಗೆ 30x40 ಅಡಿಗಳು ಸಿಟಿಗಳಲ್ಲಿ, ಟೌನ್‌ಗಳಲ್ಲಿ ಯಾವರೀತಿಯಾಗಿ ಕೊಡುತ್ತಾರೋ ಬಿಡಿಎ ನಲ್ಲಿ ಹೇಗೆ ಕೊಡುತ್ತಾರೋ ಹಾಗೆ ಕೊಟ್ಟು ನೀನು ಅಲ್ಲಿ ಮನೆಕಟ್ಟಿಕೊಂಡು ಇರು ಅಂದರೆ ಆತನು ಕಿಚನ್‌ನಲ್ಲಿ ಎತ್ತುಗಳು ಕೊಟ್ಟಿಗೆಯನ್ನು ಮಾಡಿಕೊಳ್ಳಬೇಕೆ? ಆತನು ಕುರಿಗಳನ್ನು ಬೆಡ್‌ರೂಂ ನಲ್ಲಿ ಕೊಟ್ಟಿಕೊಳ್ಳಬೇಕೆ? ಮತ್ತು ಟೆಂಪ್ರವರಿ ಆಗಿ ಕೊಟ್ಟವರಿಗಂತೂ 10x10 ಅಡಿಗಳ ಶೆಡ್ ಮಾತ್ರ. ಅದು ಜಿಂಕ್‌ಶೀಟ್‌ನದ್ದು. ಅದು ಹೀಗೆ ಇರುತ್ತದೆ ಎಂದು ನಿಮಗೂ ಗೊತ್ತಿದೆ. ಇವೊತ್ತು ಆಲಮಟ್ಟಿ ಎತ್ತರವನ್ನು ಸುಮಾರು 514 ಫೀಟ್‌ಗೆ ಏರಿಸಿದರೆ, ಸಹಜವಾಗಿಯೇ ನೂರಾರು ಹಳ್ಳಿಗಳು ಅಂದರೆ ಸುಮಾರು 235 ಹಳ್ಳಿಗಳು ಸಬ್‌ಮರ್ಜ್ ಆಗುತ್ತವೆ ಎಂದು ಗೊತ್ತಿದ್ದರೂ ಕೂಡ ಮುಂದಾಲೋಚನೆಯಿಂದ ನೀವು ಕ್ರಮವನ್ನು ಏಕೆ ತೆಗೆದುಕೊಂಡಿಲ್ಲ? ಇನ್ನು ಗೇಟ್ ಕುಳಿತ ಮೇಲಂತೂ ಅದರ ಸ್ಥಿತಿಯೇ ಬೇರೆ ಅದನ್ನು ಆದಷ್ಟು ಬೇಗನೆ ಕೂಡಿಸಬೇಕೆಂದು ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಚರ್ಚೆ ಮಾತನಾಡುತ್ತಾ ಇದ್ದಾರೆ. ಸುಮಾರು 254 ಹಳ್ಳಿಗಳು ಮುಳುಗಡೆಯಾಗುತ್ತವೆ ಎಂಬ ಮಾತನ್ನು ಹೇಳಿದ್ದಾರೆ. ಈಗಾಗಲೇ ನೂರಾರು ಹಳ್ಳಿಗಳು ಮುಳುಗಡೆಯಾಗುತ್ತಿವೆ ಎಂಬ ಮಾತನ್ನೂ ಹೇಳಿದ್ದಾರೆ. ಇವೆರಡೂ ಕೂಡ ಸರಿಯಾದ ಅಂಕಿಅಂಶಗಳು ಅಲ್ಲ. ಅವರು ಅವರಿಗೆ ಸಿಕ್ಕಿರತಕ್ಕಂಥ ಮಾಹಿತಿಗಳ ಪ್ರಕಾರ ಹೇಳಿದ್ದಾರೆ. ಅದು ತಪ್ಪು ಎಂದು ನಾನು ಹೇಳಲು ಹೋಗುವುದಿಲ್ಲ. ಒಟ್ಟು ಫುಲ್‌ಸ್ಟೋರೇಜ್ ಆದಾಗ 154 ಹಳ್ಳಿಗಳು ಮುಳುಗಡೆಯಾಗುತ್ತವೆ. ಅಂದರೆ 524ಮೀಟರ್‌ಗೆ ನೀರು ಬಂದು ನಿಂತಾಗ 154 ಹಳ್ಳಿಗಳು ಮುಳುಗಡೆಯಾಗುತ್ತವೆ. 509 ಮೀಟರ್‌ಗೆ ನಾವು ಕಾಂಕ್ರೀಟ್ ಹಾಕಿರುವುದು. ಪ್ರವಾಹ ಬರುತ್ತಾ ಇರುವುದು 512ಕ್ಕೆ. 512ಕ್ಕೆ ಪ್ರವಾಹ ಬಂದಿದ್ದರಿಂದ ಮುಳುಗಡೆಯಾಗಿರತಕ್ಕಂಥ ಹಳ್ಳಿಗಳು 31 ಮಾತ್ರ. ನಾವು 40 ಹಳ್ಳಿಗಳಿಗೆ ಪುನರ್‌ವಸತಿಯನ್ನು ಪ್ರಾಪರ್ ಆಗಿ ಮಾಡಿದ್ದೇವೆ. ತಾವು ಯಾವ ವಿಚಾರದಲ್ಲಿ ಅಲಿಗೇಶನ್ ಮಾಡಿದ್ದೀರಿ ಅದಕ್ಕೆ ಆಮೇಲೆ ರಿಪ್ಲೈ ಮಾಡುತ್ತೇನೆ. ಇವೊತ್ತು 514ಕ್ಕೆ ಬಂದಾಗ ಮಾತ್ರ ಬಾಗಲಕೋಟೆಗೆ ಟಚ್ ಆಗುವುದು. 515ಕ್ಕೆ ಬಂದಾಗ ಬಾಗಲಕೋಟೆಗೆ ಒಳಗಡೆ ಬರತಕ್ಕಂಥಾದ್ದು. ಇನ್ನೂ ಅಲ್ಲಿಯವರೆಗೆ ಹೋಗಿಲ್ಲ. ಒಂದು ಲಕ್ಷದ 36 ಸಾವಿರ ಕ್ಯೂಸೆಕ್ಸ್ ನೀರು ಪಾಸ್ ಆದಾಗಲೂ 512ರ ಮೇಲೆ 513ರ ಮೇಲೆ ಕ್ರಾಸ್ ಆಗಿಲ್ಲ. ಆದ್ದರಿಂದ 512-513ಕ್ಕೆ ಮುಳುಗಡೆಯಾಗತಕ್ಕಂಥವು 44 ಹಳ್ಳಿಗಳು ಎಂದು ಎಸ್ಟಿಮೇಟ್ ಮಾಡಿದ್ದೇವೆ. ಬಾಕಿ ಟಚ್ ಆಗುವಂಥ ಉಳಿದ ಹಳ್ಳಿಗಳಿಗೆ, ನಾವು ರಿ-ಹೆಬಿಲಿಟೇಶನ್ ಮಾಡಿದ್ದೇವೆ. ಈ ಫಿಗರ್ಸ್‌ನ್ನು ಸ್ವಲ್ಪ ಸರಿ ಮಾಡಿಕೊಂಡರೆ ವಿರೋಧಪಕ್ಷದ ನಾಯಕರಿಗೆ ಅನುಕೂಲವಾಗುತ್ತದೆ ಎಂದು ಹೇಳಿ ಈ ಮಾತುಗಳನ್ನು ಹೇಳಿದ್ದೇನೆ. ಬೇರೆ ದೃಷ್ಟಿಯಿಂದ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಹತ್ತಿರ ಇರತಕ್ಕಂಥ ಅಂಕಿಅಂಶಗಳನ್ನು ನಾನು ಹೇಗೆ ಕಲೆಕ್ಟ್ ಮಾಡಿದ್ದೇನೆ ಅಂದರೆ, ಕೃಷ್ಣ ಕಣಿವೆ ಯೋಜನೆಯ ವಸ್ತುಸ್ಥಿತಿ ವರದಿ ಏನಿತ್ತು ಅದು ಮತ್ತು ಹಿಂದೂ ಪತ್ರಿಕೆಯಲ್ಲಿ ಬಂದಿರತಕ್ಕ ವರದಿ. "Government to Seek Rs 600 crores for UKP" 3rd July news report. "Team is holding discussions with the officials concerned with Rehabilitation and Resettlement Works in the project, Mr. Jamdar said. All the 94 villages which would be affected after raising of the dam height to 524 metres and impounding of water, 54 villages would be submerged affecting about 25,200 families. In the remaining 41 villages, which would be submerged partially, another 23,136 families would be affected". ಈ ಎಲ್ಲ ಮಾಹಿತಿ ಕಲೆಕ್ಟ್ ಮಾಡಿಯೇ ನಾನು ಹೇಳುತ್ತಾ ಇದ್ದೇನೆ. 94 ಒಂದು, 41 ಒಂದು, 35 ಒಂದು, ಹೀಗೆ ಇವೆಲ್ಲಾ ಹಳ್ಳಿಗಳನ್ನು ಸೇರಿಸಿದರೆ, ಅದು ಎಷ್ಟಾಗುತ್ತದೆ ಎಂದು ನೋಡಿ. ಇವು ನೀವು ಕೊಟ್ಟಂಥವು ಮತ್ತು ನಿಮ್ಮಲ್ಲಿಂದ ಬಂದಂಥ ಫಿಗರ್ಸ್. ಅದರ ಬಗ್ಗೆಯೇ ನಾನು ಹೇಳುತ್ತಾ ಇದ್ದೇನೆ. ಒಂದು ಪಾರ್ಶಿಯಲಿ ಮುಳುಗಬಹುದು, ಇನ್ನೊಂದು ಪೂರ್ಣ ಮುಳುಗಿ ಹೋಗಬಹುದು. ಒಂದು ಹಳ್ಳಿಯ ಕೆಲವು ಸರ್ವೆ ನಂಬರ್ಸ್ ಹೋಗಬಹುದು, ಕೆಲವು ಮನೆಗಳು ಹೋಗಬಹುದು. ಒಟ್ಟಾರೆ ನೀವು 600 ಕೋಟಿ ರೂಪಾಯಿಗಳ ಯೋಜನೆಯನ್ನು ವರ್ಲ್ಡ್ ಬ್ಯಾಂಕ್‌ಗೆ ಪ್ರಾಜೆಕ್ಟ್ ಮಾಡಿ ಈ ಪ್ರಾಜೆಕ್ಟ್‌ನ್ನು ಕಳುಹಿಸಿದ್ದೀರಿ. ಮತ್ತು ಈ ಸ್ಟೇಟ್‌ಮೆಂಟ್ ಸರಕಾರದ ವತಿಯಿಂದ ಬಂದಿದೆ. ನನ್ನ ವತಿಯಿಂದ ಇದು ಬಂದಿಲ್ಲ. ಆದ್ದರಿಂದ, ದಯಮಾಡಿ ನೀವು ಕೊಟ್ಟಂಥ ಸ್ಟೇಟ್‌ಮೆಂಟ್‌ನ್ನು ಕೂಡ ವೆರಿಫೈ ಮಾಡಿ. ಹಾಗೆಯೇ ಇದರ ಅಥೆಂಟಿಸಿಟಿಯ ಬಗ್ಗೆ ಏಕೆ ಹೇಳುತ್ತಾ ಇದ್ದೇನೆ ಅಂದರೆ, ಕಮಿಶನರ್‌ರವರೇ ಈ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಸುಮಾರು 600 ಕೋಟಿ ರೂಪಾಯಿ ಹಣವನ್ನು, ವರ್ಲ್ಡ್ ಬ್ಯಾಂಕ್‌ನಿಂದ ಕೇಳಿದಕ್ಕಾಗಿ ಈ ಮಾತನ್ನು ಹೇಳುತ್ತಾ ಇದ್ದೇನೆ. ಅದಕ್ಕಾಗಿ ನಾನು ಪರೀಕ್ಷೆ ಮಾಡಿಕೊಳ್ಳುವುದಕ್ಕಿಂತಲೂ ನೀವು ಕೊಟ್ಟಂಥ ಅಂಕಿ ಅಂಶಗಳೇನಿವೆ, ಅವುಗಳನ್ನು ನಿಮ್ಮ ಅಧಿಕಾರಿಗಳು ಒಮ್ಮೆ ಕುಳಿತು ಇದೇ ಕರೆಕ್ಟ್ ಎಂದು ಹೇಳಿಕೊಟ್ಟರೆ ನಾವು ಅದನ್ನೇ ಹೇಳುತ್ತೇವೆ. ಆದರೆ, ಇವೊತ್ತು ನಾವು ಹೆಚ್ಚುಕಡಿಮೆ ನೋಡಿದಾಗ ಈ ಪರಿಸ್ಥಿತಿ ಅಲ್ಲಿದೆ. ಅಂತೂ ಈ ಕೆಲಸ ಸರಿಯಾಗಿ ನಡೆದಿಲ್ಲ ಎಂಬ ಬಗ್ಗೆ ನಿಮ್ಮ ಅಧಿಕಾರಿಗಳೂ ಕೂಡ ಹೇಳಿದ್ದಾರೆ. ನಾವಂತೂ ಅನೇಕ ಸಾರಿ ಹೇಳಿದ್ದೇವೆ. ಏಕೆಂದರೆ ಇದರಲ್ಲಿ ಬಹಳಷ್ಟು ಮಿಸ್ ಅಪ್ರೋಪ್ರಿಯೇಷನ್ಸ್ ಇದೆ. ಅಲ್ಲಿ ಕೆಇಬಿ ಅಧಿಕಾರಿಗಳು, ಪಿಡಬ್ಲೂಡಿ ಅಧಿಕಾರಿಗಳು, ಆಮೇಲೆ ಸಂಬಂಧಪಟ್ಟಂಥ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು, ಮುಂತಾಗಿ ಕಳಪೆ ಕೆಲಸಗಳನ್ನು ಮಾಡಿದ್ದಾರೆ. ಅಂತೆಯೇ ಎಸ್ಟಿಮೇಟ್‌ನ್ನು ಹೆಚ್ಚಿಗೆ ಮಾಡಿದ್ದಾರೆ. ನೀವು ಲೆಕ್ಕ ಹಾಕಿನೋಡಿ ಒಂದು ಕಿ.ಮೀ ರೋಡ್‌ಗೆ 52 ಲಕ್ಷ ರೂಪಾಯಿಗಳಿಂದ 65 ಲಕ್ಷ ರೂಪಾಯಿಗಳವರೆಗೆ ಎಸ್ಟಿಮೇಟ್ ಮಾಡಬೇಕು ಅಂದರೆ, ಅದು ಎಂಥ ರೋಡ್ ಆಗಬೇಕು? ನಿಮ್ಮ ಎಕ್ಸ್‌ಪ್ರೆಸ್ ರೋಡ್ ಆಯಿತು. ಮೈಸೂರು - ಬೆಂಗಳೂರು ಎಕ್ಸ್‌ಪ್ರೆಸ್ ರೋಡ್‌ಗೂ ಆ ಎಸ್ಟಿಮೇಟ್‌ನ್ನು

ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದಕ್ಕೆ ಇದನ್ನು ಕಂಡೆಮ್ ಮಾಡಿದ್ದು ಯಾರು? ನಾನು ಮಾಡಿಲ್ಲ. Your own department man. ಅದಕ್ಕೆ ಅವರು ಆಧಾರವನ್ನು ಕೊಟ್ಟಿದ್ದಾರೆ. ನಾನು ಇಷ್ಟೆಲ್ಲಾ ಕಂಡುಹಿಡಿದು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ, ಬದಲಾವಣೆ ಮಾಡಿ ಎಂದು ಹೇಳಿಕೊಟ್ಟರೂ ಕೂಡ ಕೆಲವರಿಗೆ ಮಾತ್ರ ಅಲ್ಲಿಂದಲ್ಲೇ ಜಾಗವನ್ನು ಬದಲಾವಣೆ ಮಾಡಿದ್ದಾರೆಯೇ ಹೊರತಾಗಿ ಏನು ಆ್ಯಕ್ಷನ್ ತೆಗೆದುಕೊಂಡಿಲ್ಲ ಎಂಬ ಮಾತನ್ನು ಮತ್ತು ವ್ಯಥೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ನಾನು ಸ್ಪಷ್ಟವಾಗಿ ಕೇಳುತ್ತೇನೆ. ಇಷ್ಟೊಂದು ತಾವು ರಿವ್ಯೂ ಮಾಡುತ್ತಾ ಇರುತ್ತೀರಿ. ಅನೇಕ ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತೀರಿ. ಹೀಗಿರುವಾಗ ಇದು ಏಕೆ ತಮ್ಮ ಗಮನಕ್ಕೆ ಬಂದಿಲ್ಲ? ಅಥವಾ ಇದು ತಪ್ಪು ಇದೆ ಎಂದು ತಿಳಿದುಕೊಳ್ಳಿ. ತಪ್ಪು ಇದ್ದರೆ ನೋಡಿ ಪತ್ರಿಕೆಯಲ್ಲಿ ನೀವು ಈ ರೀತಿಯಾಗಿ ವರದಿ ಮಾಡಿದ್ದೀರಿ, ಕಮೀಷನರ್ ಆಗಿ ಈ ತಪ್ಪು ವರದಿಯನ್ನು ಏಕೆ ಕೊಟ್ಟಿದ್ದೀರಿ? ಎಂಬ ಬಗ್ಗೆ ಅವರ ಮೇಲಾದರೂ ಏನಾದರೂ ಆ್ಯಕ್ಷನ್ ತೆಗೆದುಕೊಳ್ಳಬಹುದಲ್ಲ? ಇವರು ಅವರು ಹೇಳಿದ್ದು ಸರಿ ಇಲ್ಲ ಎಂದು ಹೇಳುತ್ತಾರೆ. ನಾವು ಸರಿ ಇದೆ ಎಂದು ಹೇಳುತ್ತೇವೆ. ಅಲ್ಲಿರತಕ್ಕಂಥ ಜನರು ಕೂಡ ಇದೇ ವಾದವನ್ನು ಮಾಡುತ್ತಾರೆ. ಆ ಭಾಗದಲ್ಲಿರತಕ್ಕಂಥ ಎಲ್ಲಾ ಶಾಸಕರು, ಜನಪ್ರತಿನಿಧಿಗಳು, ಎಲ್ಲರೂ ಇದೇ ವಾದವನ್ನು ಮಾಡುತ್ತಾರೆ. ಆದ್ದರಿಂದ ಆ ವಾದಕ್ಕೆ ನೀವು ಮನ್ನಣೆ ಕೊಟ್ಟು ಏಕೆ ಎನ್‌ಕ್ವಯರಿ ಮಾಡಿಸಲಿಲ್ಲ? ಅದರ ಮೇಲೆ ಕ್ರಮವನ್ನು ಏಕೆ ತಾವು ತೆಗೆದುಕೊಂಡಿಲ್ಲ? ಅದಕ್ಕಾಗಿ ಇವೊತ್ತು ಆ ಅಧಿಕಾರಿಗಳ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ನೀವು ಯಾವ ಮುಲಾಜಿಗೆ ಸಿಕ್ಕಿಬಿದ್ದಿದ್ದೀರೋ ಗೊತ್ತಿಲ್ಲ, ಆದರೆ ಅಂಥವರನ್ನು ಸಸ್ಪೆಂಡ್ ಮಾಡಲಿಲ್ಲ, ಅಥವಾ ನೇರವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಇದು ಕೂಡ ಒಂದು ದೊಡ್ಡ ಸ್ಕ್ಯಾಮ್. ರಿ-ಸೆಟಲ್‌ಮೆಂಟ್‌ಗೆ ಒಂದು ಸ್ಕಾಮ್. ಅದಕ್ಕಾಗಿ ಈ ಸ್ಕಾಮ್‌ನಲ್ಲಿ ಯಾರ್‍ಯಾರು ಇದ್ದಾರೆ, ಅವರೆಲ್ಲರಿಗೂ ಹೊರಗೆ ಹಾಕಿ. ಅದಕ್ಕಾಗಿಯೇ ನಾನು ಪದೇ ಪದೇ ಕೇಳುವುದು. ನಾನು ಕೇಳಿದಾಗ ಚಾಲೆಂಜ್ ಎಂದು ಇವರು ಅದನ್ನೇ ಒಂದು ದೊಡ್ಡದಾಗಿ ಮಾಡುವುದು. ಇವರು ಹೆದರಿಕೊಂಡರು ಎಂದು ಹೇಳುವುದು. ನಾವೇನು ಅವರ ಬಗ್ಗೆ ಹೆದರಿಕೊಂಡಿದ್ದೇವೋ? ಲಂಚವನ್ನು ಹೊಡೆದಿದ್ದೇವೋ? ನಾವು ಕೇಳತಕ್ಕಂಥಾದ್ದು ನಿಮ್ಮಲ್ಲಿ ಇರತಕ್ಕಂಥ ದುಡ್ಡನ್ನು ಸದುಪಯೋಗ ಮಾಡಿಕೊಳ್ಳಿ, ಅದನ್ನು 2000 ಇಸವಿಯೊಳಗಾಗಿ ಅದರ ಉಪಯೋಗವಾಗ ಬೇಕು. ಆ ರೀತಿಯಾಗಿ ಮಾಡಿ ಎಂದು ಹೇಳಿದರೆ, ನಮಗೆ ಪದೇ ಪದೇ ನೀವು ಧೈರ್ಯ ಇದ್ದರೆ ನೋಡಿ ಎಂದು ಹೇಳುತ್ತೀರಿ. ಧೈರ್ಯ ಇದ್ದರೆ ನಾವೇನು ಮಾಡಬೇಕು? ತಲವಾರ್ ತೆಗೆದುಕೊಂಡು ನಿಮಗೆ ಹೊಡೆಯೋಣವೆ? ನಿಮ್ಮ ತಲೆ ತೆಗೆಯೋಣವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದು ತಿಂಗಳ ಹಿಂದೆ ನಾನು ಕೂಡ ಬಾಗಲಕೋಟೆಗೆ ಹೋಗಿದ್ದೆ. ಬಾಗಲಕೋಟೆ ಪುನರ್‌ವಸತಿ ನಗರ ಮಾಡಿದ್ದೀರಿ ಅದನ್ನು ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಅವರು ಹೇಳಿದಂತೆ 1 ಕಿ.ಮೀ.ಗೆ 60 ಲಕ್ಷ ರೂಪಾಯಿಗಳ ಖರ್ಚು ತೋರಿಸಿ ಡ್ರಾ ಮಾಡಿದ್ದಾರೆ. ಆಸ್ಫಾಲ್ಟ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಇದಕ್ಕೆ ಯಾರ

ಸಾಕ್ಷಿಯೂ ಬೇಡ. ನಾನು ಒಬ್ಬ ಜವಾಬ್ಧಾರಿ ಇರತಕ್ಕಂಥ ಶಾಸಕ. ಆದರೆ ಇವೊತ್ತು ಅಲ್ಲಿ ಆಸ್ಪಾಲ್ಟ್ ಆಗಿಲ್ಲವಾದರೂ ದುಡ್ಡು ಡ್ರಾ ಮಾಡಿಕೊಂಡಿದ್ದಾರೆ. ಇದಕ್ಕಿಂತ ಏನು ಪುರಾವೆ ಬೇಕು? ಒಂದು ಕಡೆ ನೀವು ದಾಖಲೆ ಬೇಕು, ಸಾಕ್ಷಿ ಬೇಕು ಎಂದು ಹೇಳುವವರು ಇಂಥ ಪುರಾವೆಗಳು ಸಿಕ್ಕಾಗ ಅಂಥವರಿಗೆ ಬರೆ ಎಳೆದು ಮನೆಗೆ ಕಳುಹಿಸಿದ್ದೀರಾ? ಇದಕ್ಕಿಂತ ಹಗಲುದರೋಡೆ ಬೇರೆ ಬೇಕೆ? ಆಸ್ಪಾಲ್ಟ್ ಮಾಡಿದ್ದೇವೆಂದು ಹೇಳಿ ಒಂದು ಕಿ.ಮೀ.ಗೆ 60 ಲಕ್ಷ ರೂಪಾಯಿಗಳನ್ನು ಡ್ರಾ ಮಾಡುವುದಾದರೆ, ಈ ಅಧಿಕಾರಿಗಳಿಗೆ ಮಾನಮರ್ಯಾದೆ ಏನಾದರೂ ಇದೆಯೇ? ಅಧಿಕಾರಿಗಳಿಗೆ, ಸರಕಾರಕ್ಕೆ ಏನಾದರೂ ಭಯ ಇದೆಯೇ? ದಯಮಾಡಿ ತಾವು ಉತ್ತರ ಕೊಡುವಂಥ ಕಾಲದಲ್ಲಿ ಇದು ಸತ್ಯವೋ ಅಲ್ಲವೋ ಎಂದು ಹೇಳಬೇಕು. ಅಲ್ಲಿ ಆಸ್ಪಲ್ಟ್ ಆಗಿದೆಯೇ ಎಂದು ಹೇಳಬೇಕು. ಇದರ ಬಗ್ಗೆ ಇನ್‌ಫರ್ಮೇಶನ್ ಕೊಡಿ. ಉತ್ತರವನ್ನು ಏನೋ ಒಂದು ರೀತಿಯಲ್ಲಿ ಕೊಡುವುದು ಸರಿಯಲ್ಲ. ನಾನಂತೂ ನೋಡಿಕೊಂಡು ಬಂದಿದ್ದೇನೆ. ಒಂದು ತಿಂಗಳ ಹಿಂದಿನ ಮಾತನ್ನು ನಾನು ಹೇಳುತ್ತಾ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ : ಸುಮಾರು 2-3 ದಿವಸಗಳಿಂದ ಆ ಭಾಗದಲ್ಲಿ ಆದ ಅಪಾಯದ ಬಗ್ಗೆ ಇವೊತ್ತು ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ. ರಿ-ಹೆಬಿಲಿಟೇಶನ್ಸ್, ರಿ-ಸೆಟಲ್‌ಮೆಂಟ್ ಪ್ರೊಗ್ರಾಂಸ್ ಬಗ್ಗೆ, ಅಥವಾ ನ್ಯಾಚುರಲ್ ಕೆಲಾಮಿಟೀಸ್ ವಿಚಾರದಲ್ಲಿ ಸರಕಾರ ಏನು ಸಹಾಯ ಮಾಡಿದೆ ಮುಂತಾಗಿ ಎಲ್ಲವೂ ಕೂಡ ಬೇಕಲ್ಲ? ಈ ಇಲಾಖೆಯಿಂದ ಪರ್‌ಮೆನೆಂಟ್ಲಿ ಆಗತಕ್ಕಂಥ ಕೆಲಸ ಒಂದು. ಎರಡನೆದು ರಿಲೀಫ್ ವರ್ಕ್ಸ್. ನ್ಯಾಚುರಲ್ ಕೆಲಾಮಿಟೀಸ್‌ನಲ್ಲಿ ಕೊಡತಕ್ಕಂಥ ರಿಲೀಫ್ ಕೆಲಸಗಳು. ಆ ಕೆಲಸಗಳು ಕೂಡ ಆಗಬೇಕಲ್ಲವೆ ? ತಾತ್ಪೂರ್ತಿಕವಾಗಿ ರೆವಿನ್ಯೂ ಇಲಾಖೆಯಿಂದ ಆಗಬೇಕಾದ ಕೆಲಸ. ಅದನ್ನೂ ಕೂಡ ಮಾಡಬೇಕು. ನೀವು ಏನು ಮಾಡಿದ್ದೀರಿ? ಅಫ್‌ಕ್ಟೆಡ್ ಎಷ್ಟು ಕುಟುಂಬಗಳನ್ನು ರಿ-ಸೆಟಲ್ ಮಾಡಿಸಿದ್ದೀರಿ? ಸಹಾಯ ಮಾಡಿದ್ದೀರಿ? ಅದೆಲ್ಲಾ ಬರಬೇಕಲ್ಲ? ತಾವು ಇವೊತ್ತಿನ ಪತ್ರಿಕೆಯಲ್ಲಿ ನೋಡಿರಬಹುದು. “ ಆಲಮಟ್ಟಿ ಜಲಾಶಯ ಅಪಾಯ ಮಟ್ಟದಲ್ಲಿ . Krishna Receding - Five Village marooned. ಆಮೇಲೆ ಬಿಜಾಪುರದಲ್ಲಿ 40 ಗ್ರಾಮಗಳು ಈಗಾಗಲೇ ಸಬ್‌ಮರ್ಜ್ ಹಂತದಲ್ಲಿವೆ. ಆಮೇಲೆ Almatti Dam Continues to Raise. Floods recedes in Belgaum District, ಬೆಳಗಾಂ ಜಿಲ್ಲೆಯಲ್ಲಿ ಕೃಷ್ಣ ದಂಡೆಯಲ್ಲಿರತಕ್ಕಂಥ ಹಳ್ಳಿಗಳು, ತದನಂತರ ಬಿಜಾಪುರದಲ್ಲಿರತಕ್ಕಂಥ, ಅದು ಬಾಗಲಕೋಟೆ ಇರಬಹುದು, ಬೀಳಗಿ ಇರಬಹುದು, ಜಮಖಂಡಿಯ ಕೆಲವು ಹಳ್ಳಿಗಳು ಇರಬಹುದು. ಹುನಗುಂದದ ಕೆಲವು ಹಳ್ಳಿಗಳು ಇರಬಹುದು. ಇವೆಲ್ಲವನ್ನೂ ಕೂಡ ನೋಡಿ, ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದರ ಬಗ್ಗೆ ಚಿಂತನೆ ಮಾಡಿ, ಮಾಡುವುದನ್ನು ನೀವು ಬಿಟ್ಟಿದ್ದೀರಿ. ಅದನ್ನು ಬಿಟ್ಟು ನಾವು 2000 ಇಸವಿಯೊಳಗಾಗಿ ಸಂಪೂರ್ಣವಾಗಿ ಖರ್ಚು ಮಾಡುತ್ತೇವೆ ಎಂದು ಹೇಳುತ್ತೀರಿ.

10.50 ಎ.ಎಂ

(ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಹಿಂದೆ 20 ವರ್ಷಗಳಲ್ಲಿ ನಾವು 2-3 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ತಾವು ಎರಡೆ ವರ್ಷದಲ್ಲಿ 2 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಎಂದರೆ ಯಾರು ಮೇಲು ಸ್ವಾಮಿ? ನಾನು ನಿನ್ನೆ ಟಿ.ವಿ. ನೋಡುತ್ತಾ ಇದ್ದೆ ಎಕನಾಮಿಕ್ಸ್ ಮನಿ ಮ್ಯಾಟರ್ಸ್ ವಿಚಾರ ಬಂತು. 1947ರಲ್ಲಿ ಬಂಗಾರದ ಕಿಮ್ಮತ್ತು ಒಂದು ತೊಲಕ್ಕೆ 107 ರೂಪಾಯಿಗಳು ಈಗ 5,350 ರೂಪಾಯಿಗಳು ಅಂದರೆ 5 ಸಾವಿರ ಪಟ್ಟು ಹೆಚ್ಚಾಯಿತು. 1967ರಲ್ಲಿ ಖರ್ಚುಮಾಡಿದ ಹಣಕ್ಕೆ ಇವರು ಹೋಲಿಸುತ್ತಾರೆ. 1967ರಿಂದ70ರವರೆಗೆ ಬಂಗಾರದ ಕಿಮ್ಮತ್ತು, 400 ದಿಂದ 450 ರೂಪಯಿಗಳು ಇತ್ತು. ಆದ್ದರಿಂದ, ನಿಮ್ಮ ಈಗಿನ ಕೆಲಸಕ್ಕೆ ಅಂದಿನ ಕೆಲಸಕ್ಕೆ ಹೋಲಿಸಬೇಕು. ಫಿಜಿಕಲ್ ಟರ್ನ್ ಔಟ್‌ಗೆ ಹೋಲಿಸಬೇಡಿ. ಅದು ಬಿಟ್ಟು ಕಾಗದದ ನೋಟಿನ ಜೊತೆಗೆ ಹೋಲಿಸಿಕೊಳ್ಳಲಾಗುತ್ತದೆ. 2 ಸಾವಿರ ಕೋಟಿ ರೂಪಾಯಿಗಳು ನಾವು ಹಿಂದೆ ಖರ್ಚು ಮಾಡಿದ್ದೇವೆ. 2 ಸಾವಿರ ಕೋಟಿ ರೂಪಾಯಿಗಳು ಬರಿ ನೀವು ಕೆನಾಲ್ ಕೆದುರುವುದಕ್ಕೆ ಖರ್ಚು ಮಾಡಿದಿರಿ. ಹಿಂದೆ ಸಾವಿರಾರು ಕೋಟಿ ರಾಪಾಯಿಗಳನ್ನು ಖರ್ಚು ಮಾಡಿರಬಹುದು. 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಾರಾಯಣಪುರ (ಅಣೆಕಟ್ಟು) ಡ್ಯಾಮ್ ಕನ್‌ಸ್ಟ್ರಕ್ಷನ್ ಮಾಡಿದಿರಿ. ಇವತ್ತು ನಾವು 500 ಕೋಟಿ ರೂಪಾಯಿಗಳಲ್ಲಿ ಡ್ಯಾಮ್ ಕಟ್ಟಿಸಿದ್ದೆವು. 2 ಸಾವಿರ ಕೋಟಿ ರೂಪಾಯಿಗಳು ನೀವು ಕೆನಾಲ್ ಎತ್ತರ ಮಾಡುವುದರಲ್ಲಿ ಖರ್ಚು ಮಾಡಿದ್ದೀರಿ. ಆಲಮಟ್ಟಿ ಅಣೆಕಟ್ಟು ಎತ್ತರ ಮಾಡುವುದರಲ್ಲಿ ಉಳಿದರೆ, ಪೂರ್ತಿ ಹಣ ಎಲ್ಲಿ ಹೋಗಿ ಬಿಟ್ಟಿದೆ. ಒಂದು ಪೈಸೆ ಕೂಡ ಖರ್ಚು ಆಗಿಲ್ಲ. ಒಂದು ಸ್ಟೀಲ್ ತಂದಿಲ್ಲ, ಸಿಮೆಂಟ್ ತಂದಿಲ್ಲ. ನಿಮ್ಮ ಹಣಕ್ಕೆ ಫಿಜಿಕಲ್ ಅಚೀವ್ ಮೆಂಟಿಗೆ ಹೋಲಿಸಿಕೊಂಡರೆ ಅದು ಒಳ್ಳೆಯದು. ಆದರೆ ಯಾವಾಗಲೂ ಹೇಳುತ್ತೀರಿ ಹಿಂದಿನ ಸರ್ಕಾರ 20 ವರ್ಷಗಳಲ್ಲಿ 2 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ನಾವು 2 ವರ್ಷದಲ್ಲಿ 2 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು. ಆವಾಗ ಸಿಮೆಂಟ್ ಬೆಲೆ ಏನು ಇತ್ತು ಸ್ಟೀಲ್ ಬೆಲೆ ಏನು ಇತ್ತು, ಮತ್ತು ಜನರ ಕೂಲಿ ಆವಾಗ ಎಷ್ಟು ಕೊಡುತ್ತಿದ್ದರು, ಈಗ ಕೂಲಿ ಎಷ್ಟು ಕೊಡುತ್ತಿದ್ದಾರೆ ಇವೆಲ್ಲಾ ಲೆಕ್ಕ ಹಾಗಿ ನೀವು ಮಾತನಾಡಿದರೆ ಅದಕ್ಕೆ ಏನಾದರೂ ಒಂದು ಅರ್ಥ ಇರುತ್ತದೆ. ಆದರೆ ಪಬ್ಲಿಸಿಟಿಗೋಸ್ಕರ 1,250 ಕೋಟಿ ರೂಪಾಯಿಗಳ ಬಜೆಟ್ ಪ್ರಾವಿಷನ್ ಸುಮ್ಮನೆ ನೀವು ಇಟ್ಟಿದ್ದೀರಿ. ನಾವು ಇಷ್ಟು ಮಾಡಿದ್ದೇವೆ ನೀವು ಏನು ಮಾಡಿದ್ದೀರಿ ಎಂದ ಕೇಳುವುದು. ನಾಗೇಗೌಡರೆ ಹಿಂದೆ ಕನ್ನಂಬಾಡಿಗೆ ಬಹುಶಃ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಕೆ.ಆರ್. ಸಾಗರ್ ಕನ್‌ಸ್ಟ್ರಕ್ಷನ್‌ಗೆ ಖರ್ಚು ಮಾಡಿದ್ದು 3,4 ಕೋಟಿ ರೂಪಾಯಿಗಳೇನು? ಈಗ ಇವರು ಬರಿ ವಿಶ್ವೇಶ್ವರಯ್ಯನ ಕೆನಾಲ್ ರಿಪೇರಿ ಮಾಡುವುದಕ್ಕೆ 145 ಕೋಟಿ ರೂಪಾಯಿಗಳ ರಿವೈಜ್ಡ್ ಎಸ್ಟಿಮೇಟ್ ಮಾಡಿದ್ದಾರೆ. ಸ್ವಾಮಿ, ಅದಕ್ಕೆ ಇದಕ್ಕೆ ಎಷ್ಟು ವ್ಯತ್ಯಾಸ? ವಿಶ್ವೇಶ್ವರಯ್ಯನವರ ಕಾಲದಲ್ಲಿ ಕೇವಲ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಡ್ಯಾಮ್ ಕಟ್ಟಿಸಿದರು. ಆದರೆ ನಮ್ಮ ಕಾಲದಲ್ಲಿ 245 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಾವು ಆ ಡ್ಯಾಮ್ ರಿಪೇರಿ ಮಾಡಿಸಿದ್ದೇವೆಂದು ಶಹಬಾಸ್ ಗಿರಿಯನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ನೀವು ಅದಕ್ಕೆ ಶಹಬ್ಬಾಸ್ ಗಿರಿಯನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಫಿಜಿಕಲ್ ಟಾರ್ಗೆಟ್ಟು ಫಿಜಿಕಲ್ ಅಚೀವ್‌ಮೆಂಟ್ ಎನ್ನತಕ್ಕಂಥದ್ದು ಫಿಜಿಕಲ್ ಇಂಪ್ರೂವ್‌ಮೆಂಟ್ ಅದಕ್ಕೆ ಹೋಲಿಸಿದಾಗ ಆ ಕೆನಾಲ್‌ಗೆ ಆ ಕಾಲದಲ್ಲಿ ಖರ್ಚು ಮಾಡಿದ್ದು 50 ರಿಂದ 60 ಲಕ್ಷ ರೂಪಾಯಿಗಳು ಇದ್ದರೆ ಅದಕ್ಕೆ ಇವತ್ತು 250 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ ಇಟ್ಟುಕೊಂಡಿದ್ದಾರೆ. ಈಗಾಗಲೇ 6 ತಿಂಗಳಲ್ಲಿ 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕತಮ್ ಮಾಡಿದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಬರುತ್ತದೆ ನಾನು ಜೋರಾಗಿ ಮಾತನಾಡುತ್ತೇನೆ. ಹಾರಂಗಿ, ಹೇಮಾವತಿ, ಕಬಿನಿ ಇವೆಲ್ಲಾ ನಾನ್ ಪ್ಲಾನ್‌ನಲ್ಲಿ ಇರತಕ್ಕಂಥ ಕೆಲಸಗಳ ಆ ಕೆಲಸಗಳು ಮುಗಿದ ಮೇಲೆ ಇವತ್ತು ಹೆಚ್ಚಿನ ಹಣ ಕೊಟ್ಟಿರಬಹುದು. ಆದರೆ ನಿಮ್ಮ ಮಾತಿಗೆ ನಿಮ್ಮ ಕೃತಿಗೆ ಇನ್ನೂ ದೂರ ಇದೆ. ಏಕೆಂದರೆ 2 ವರ್ಷಗಳಲ್ಲಿ ತಾವು ಮುಗಿಸುತ್ತೇವೆಂದು ಹೇಳಿದಿರಿ. 2 ವರ್ಷಗಳಲ್ಲಿ ಮುಗಿಸುತ್ತೇವೆಂದು ಹೇಳಿದವರು ಏನು ಮಾಡಿದಿರಿ ಸ್ವಾಮಿ. ನಾನು ತೋರಿಸುತ್ತೇನೆ ಇದು ನನ್ನ ಡಾಕ್ಯುಮಂಟ್ ಅಲ್ಲ, ಅವರೇ ಕೊಟ್ಟಿರತಕ್ಕಂಥ ಡಾಕ್ಯುಮೆಂಟ್ಸ್. ಸುಮಾರು 8-10 ದಿವಸ ಹಿಂದೆ ಕೊಟ್ಟಿದ್ದಾರೆ. ಆರ ಅಂಡ್ ಆರ್.ನಲ್ಲಿ 1997-98ರಲ್ಲಿ 472 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಜುಲೈನಲ್ಲಿ ಖರ್ಚು ಮಾಡಿದ್ದು 35 ಕೋಟಿ 15 ಲಕ್ಷ ರೂಪಾಯಿಗಳು ಇದು ಲೇಟೆಸ್ಟ್ ಫಿಗರ್ ಜುಲೈ ಕೊನೆಗೆ 472 ಕೋಟಿ ರೂಪಾಯಿಗಳಲ್ಲಿ 35 ಕೋಟಿ 15 ಲಕ್ಷ ರೂಪಾಯಿಗಳು ಅಂದರೆ ಈಗಾಗಲೇ ಏಪ್ರಿಲ್, ಮೇ, ಈಗ ಜೂನ್ ತಿಂಗಳು ವರ್ಕಿಂಗ್ ಸೀಜನ್ ಹೋಯಿತು, ಈಗ ಮಳೆಗಾಲದ ಸೀಜನ್. ಆದರೂ ಕೂಡ ನಮ್ಮ ಲೆಕ್ಕಕ್ಕೆ 1/3 ವರ್ಷ ಹೋಯಿತು. 4 ತಿಂಗಳಲ್ಲಿ 472 ಕೋಟಿ ರೂಪಾಯಿಗಳಲ್ಲಿ ಎಷ್ಟು ಖರ್ಚು ಮಾಡಬೇಕಾಗಿತ್ತು, ಇವತ್ತು ಎಷ್ಟು ಖರ್ಚಾಗಿದೆ ಅಂದರೆ 35 ಕೋಟಿ ರೂಪಾಯಿಗಳು. ಆಮೇಲೆ ಕೆನಾಲ್, ಒಂದಕ್ಕೆ 150 ಕೋಟಿ ರೂಪಾಯಿಗಳ ಪ್ರಾವಿಜನ್ ಖರ್ಚು ಮಾಡಿದ್ದು ಎಷ್ಟು 43 ಕೋಟಿ ರೂಪಾಯಿಗಳು ಆಮೇಲೆ ವಲಯ 2 ರ ಕಾಲುವೆಯಲ್ಲಿ ಪ್ರಾವಿಜನ್ 140 ಕೋಟಿ ರೂಪಾಯಿಗಳು ನೀವು ಖರ್ಚು ಮಾಡಿದ್ದು 19 ಕೋಟಿ ರೂಪಾಯಿಗಳು. ಅಣೆಕಟ್ಟು ವಲಯದಲ್ಲಿ ಜೂನನಲ್ಲಿ 80 ಕೋಟಿ ರೂಪಾಯಿಗಳು ನೀವು ಖರ್ಚು ಮಾಡಿದ್ದು 15 ಕೋಟಿ ರೂಪಾಯಿಗಳು ಆಮೇಲೆ ಓ ಆ್ಯಂಡ್ ಎಂ. ಇದು ದುಡ್ಡು ಹೊಡೆಯತಕ್ಕಂಥದ್ದು, ಹಾಳಾಗತಕ್ಕಂಥದ್ದು, ಪೋಲು ಆಗತಕ್ಕಂಥದ್ದು, ಒ ಆ್ಯಂಡ್ ಎಂ. ಆಪರೇಷನ್ ಅಂಡ್ ಮೆಂಟೇನನ್ಸ್ ಒಂದು ಸೆಕ್ಷನ್ ಅದು, 58 ಕೋಟಿ ರೂಪಾಯಿಗಳನ್ನು ಅದಕ್ಕೆ ಇಟ್ಟಿದ್ದಾರೆ. ಅದು ಹೇಗೂ ಖರ್ಚಾಗುತ್ತದೆ. ಹೇಗೆಂದರೆ ಬರಿ ಬಿಲ್ಲುಗಳು ಮತ್ತು ಪರ್ಚೇಸ್‌ಗಳು. ಅವರು ಮಾರ್ಚ್ ತಿಂಗಳ ಅಂತ್ಯಕ್ಕೆ 10 ಜನ ಕಾಂಟ್ರಾಕ್ಟರ್‌ಗಳನ್ನು ಹಿಡಿದು ಒಬ್ಬೊಬ್ಬರಿಗೆ 2 ಕೋಟಿ ರೂಪಾಯಿಗಳ ಕೆಲಸ ಕೊಟ್ಟು ಕೆಲಸವನ್ನು ಮಾಡಿಸಿ ಬಿಡುತ್ತಾರೆ. ಆ ಕೆಲಸ ಯಾರಿಗಾದರೂ ಸಿಗದೆ, ಹೋದರೆ ಆ ಲೀಡರ್ಸ್‌ಗಳು, ಆ ಮುಖಂಡರುಗಳು, ಅಲ್ಲಿರತಕ್ಕಂಥ ಕೆಲವು ಜನ ಪಾಳೆಗಾರರು ಇದ್ದಾರೆ. ಅಲ್ಲಿ ಅವರ ಮಾತು ಕೇಳದೆ ಹೋದರೆ ಇಂಜನಿಯರ್‌ಗಳು ಅಲ್ಲಿ ಕೆಲಸ ಮಾಡುವಂತಿಲ್ಲ. ಅವರು

ಹೋಗಿ ಟೇಬಲ್ ಮೇಲೆ ಕುಳಿತು ಆರ್ಡರ್ ತರುತ್ತಾರೆ. ನನಗೆ 2 ಕೋಟಿ ರೂಪಾಯಿಗಳ ಬಿಲ್ಲು, ಬರಿ, ಏನಾದರೂ ಪರಚೇಸು ಮಾಡು. ಪ್ರಾವಿಜನ್ 58 ಕೋಟಿ ರೂಪಾಯಿ ಇದೆ. ಏನಾದರೂ ತೆಗೆದುಕೊಳ್ಳಿ, ಏಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಹಿಂದಿನ ಇಂಜನಿಯರರು ಮಾಡುತ್ತಿದ್ದರು. ನೀನು ಏಕೆ ಮಾಡುವುದಿಲ್ಲ.? ಹೀಗೆ ಹೆದರಿಸಿ ಕೆಲಸ ಮಾಡುತಕ್ಕಂಥ ಜನ ಅಲ್ಲಿದ್ದಾರೆ. ಅದನ್ನು ನಿಮ್ಮ ಗಮನಕ್ಕೆ ತಂದಿದ್ದಾರೆ. ನೀವು ಬಂದಾಗ ಪ್ರೊಟೆಸ್ಟ್ ಮಾಡಿದರು, ಈ ರೀತಿ ಆಗತಕ್ಕಂಥದ್ದು ಇದೆ. ಇವರ ಮೇಲೆ ಏನು ಕ್ರಮ ತೆಗೆದುಕೊಂಡಿರಿ, ಅಂಥವರನ್ನು ಜೈಲಿನೊಳಗಡೆ ಹಾಕಿ. ಅಲ್ಲಿ ಕೆಲವು ಜನ ಮುಖಂಡರ ಒಳಗಡೆ ಇಟ್ಟು ನೀವು ಕೆಲಸ ಮಾಡದೆ ಹೋದರೆ ಖಂಡಿತವಾಗಿ ಹೇಳುತ್ತೇನೆ. ಇದು ಉದ್ಧಾರ ಆಗುವುದಿಲ್ಲ. ಇವತ್ತು ದುಬೈ ಅಂದರೆ ಯು.ಕೆ.ಪಿ, ಇವತ್ತು ಡಾಕ್ಟರಾದವರು, ಇಂಜನಿಯರ್ ಆದವರು ಕೆಲವು ವ್ಯಾಪಾರಸ್ಥರು ಎಲ್ಲಿಗೆ ಹೋಗಿದ್ದಿ ಎಂದು ಕೇಳಿದರೆ ದುಬೈಗೆ ಹೋಗಿ ಗಳಿಸಿಕೊಂಡು ಬಂದೆವು ಎಂದು ಹೇಳುತ್ತಾರಲ್ಲಾ ಹಾಗೆ ಇವತ್ತು ಕೆಲವು ಇಂಜನಿಯರುಗಳು, ಕೆಲವು ಮುಖಂಡರುಗಳು ಕೆಲವು ಪುಢಾರಿಗಳು ಆ ಏರಿಯಾದಲ್ಲಿದ್ದು ಇದೇ ಅವರ ಕೆಲಸ. ಕಾಂಟ್ರಾಕ್ಟ್‌ದಾರರನ್ನು ಹೆದರಿಸುವುದು, ಇಂಜನಿಯರ್‌ಗೆ ಹೆದರಿಸುವುದು. ಆ ರೀತಿ ಹೆದರಿಸತಕ್ಕಂಥವರಿಗೆ ಬೆಂಬಲ ಕೊಡತಕ್ಕಂಥದ್ದನ್ನು ಸರ್ಕಾರದವರು ಮಾಡುತ್ತೀರಿ. ಇಲ್ಲಾ ಅಂದರೆ ಆ ಧೈರ್ಯ ಹೇಗ ಬರುತ್ತದೆ. 4 ಜನರಿಗೆ ಒಳಗಡೆ ಹಾಕಿ ಆಗ ಗೊತ್ತಾಗುತ್ತದೆ. ಯಾರು ಅಲ್ಲಿ ಬಂದು ಹೆಸರಿಸುತ್ತಾರೋ ಇಂತಹ 4 ಜನರಿಗೆ ಒಳಗಡೆ ಹಾಕಿಸಿದರೆ ಸುಲಲಿತವಾಗಿ ನಡೆಯುತ್ತದೆ. ಅವರು ಏನು ಮಾಡುತ್ತಾರೆಂದರೆ ಬಿಲ್ಲು ಜಾಸ್ತಿ ಮಾಡುವುದಕ್ಕೆ ಒತ್ತಾಯ ಮಾಡಿಸಿಕೊಳ್ಳುವುದು, ಹೆರ್‍ಯಾಸ್‌ಮೆಂಟ್ ಮಾಡುವುದು, ಇಲ್ಲವೆ ಹೊಡೆಯುತ್ತೇವೆಂದು ಹೇಳುವುದು. ಮಾನ, ಮರ್ಯಾದೆಗೆ ಅಂಜುವ ಕೆಲವು ರಿಟೈರ್ ಆಗತಕ್ಕಂಥ ಇಂಜನಿಯರ್‌ಗಳನ್ನು ಅಲ್ಲಿಗೆ ಹಾಕಿ ಬಿಡುತ್ತೀರಿ. ಅವರು ಆಗ ಏನು ಮಾಡುತ್ತಾರೆ ಅವರು ನಮ್ಮ ವೀರಪ್ಪನ್‌ಗೆ ಶರಣಾದಂತೆ ಆಗುತ್ತಾರೆ. 9 ಜನರು ಬದುಕಿ ಬರಲಿ ವೀರಪ್ಪನ್ ನನ್ನ ನಾವು ಬಿಟ್ಟು ಬಿಡುತ್ತೇವೆ ಜೀವದಾನ ಕೊಡುತ್ತೇವೆಂದು ಸರ್ಕಾರ ಹೇಗೆ ಹೇಳುತ್ತದೆ ಅದೇ ರೀತಿ ಕೆಲವು ಜನ ಅಲ್ಲಿ ವೀರಪ್ಪನಗಳು ಇದ್ದಾರೆ. ಓ ಅ್ಯಂಡ್ ಎಂ. ಗೆ 58 ಕೋಟಿ ರೂಪಾಯಿಗಳು ಈಗ ಸದ್ಯಕ್ಕೆ 10 ಕೋಟಿ ರೂಪಾಯಿಗಳನ್ನು ಮಾಡಿದಿರಿ. ಇದು ಬಿಲ್ಲು ತರುವುದು, ಒಯ್ಯುವುದು ಫಿಜಿಕಲ್ ಟರ್ನ್‌ಔಟ್ ಇಲ್ಲವೇ ಇಲ್ಲ. ಇದರಲ್ಲಿ ಏನೂ ಕೆದರುವುದು ಇಡುವುದು ಅಂತಹದ್ದು ಏನೂ ಇಲ್ಲ. ಬಿಲ್ಲು ಕೊಡುವುದು ದುಡ್ಡು ತೆಗೆದುಕೊಳ್ಳುವುದು. ಇದು ಯಾವತ್ತು ನಡೆದಿದೆ. ಇದರಲ್ಲಿ ಕೆಲಸ ಆಗದೆ ಹೆದರಿಸಿ ಬಿಲ್ಲು ಕೇಳತಕ್ಕಂಥ ಜನ ಇದ್ದಾರೆ. ಹಿಂದೆ ನಿಮ್ಮ ಕಾಲದಲ್ಲಿಯೂ ಇದು ನಡೆದಿದೆ ಇದನ್ನು ನೀವು ಒಪ್ಪಿಕೊಳ್ಳಿ. ಹಿಂದೆ ಇದಕ್ಕೆ ಎಷ್ಟು ಪ್ರಾವಿಜನ್ ಇತ್ತು ಇವತ್ತು ಎಷ್ಟು ಮಾಡಿದ್ದೀರಿ ಹೇಳಿ. ಇದನ್ನು ನೀವು ಒಪ್ಪಿಕೊಳ್ಳಿ. ಹಿಂದೆ ಯಾವ ಕಾಲದಲ್ಲೂ ಕೂಡ ಇಷ್ಟೊಂದು ಹಣ ಇಟ್ಟು ಲೂಟಿ ಮಾಡುವುದಕ್ಕೆ ಅಲೋ ಮಾಡಿಲ್ಲ.

SRI K.N. NAGEGOWDA : I am happy that you are bringing out. ತಾವು ಒಂದು ನಿಮಿರ್, ಯೀಲ್ಡ್ ಆಗಿ. ನಾನು ಅವರ ಒಂದು ಮಾತನ್ನು ಮಾತ್ರ ಒಪ್ಪಿದ್ದೇವೆ. ಓ ಅಂಡ್ ಎಂ ನಲ್ಲಿ ಏನಾಗುತ್ತದೆಂದು ಮಾನ್ಯ ಉಪಾಧ್ಯಕ್ಷರೆ ತಮಗೂ ಗೊತ್ತಿದೆ. ನಾನು ಪ್ರವಾಸ ಮಾಡಿದಂತಹ

ಕಾಲದಲ್ಲಿ ನೂರಾರು ಜನ ಕಂಟ್ರಾಕ್ಟರ್‌ನನ್ನು ಘೇರಾವು ಮಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ತಾವು ನೋಡಿದ್ದೀರಿ ಅವರು ಹೇಳಿದ್ದು ನಿಜ. ಓ ಅಂಡ್ ಎಂ ನಲ್ಲಿ ಕಳೆದ ಹತ್ತು ವರ್ಷಗಳಿಂದ ಇದೇ ರೀತಿ ನಡೆಯುತ್ತದೆ. not one or two years. This is the first time we have stopped this. ಮೊದಲ ಬಾರಿಗೆ ಓ ಅಂಡ್ ಎಂ ನಲ್ಲಿ ಇದನ್ನು ನಿಲ್ಲಿಸಬೇಕೆಂದು ವಿಚಾರ ಮಾಡಿ ಇದನ್ನು ನಿಲ್ಲಿಸಿ ಇಂಜಿನಿಯರ್ಸ್ ಸಸ್ಪೆಂಡ್ ಮಾಡಿ ಪೋಲೀಸರಿಗೆ ಹ್ಯಾಂಡ್ ಓವರ್ ಮಾಡುತ್ತೇವೆಂದು ಕ್ರಿಮಿನಲ್ ಕೇಸ್ ಮಾಡುತ್ತೇವೆಂದು ಹೇಳಿದ್ದೇವೆ. ಈ ಸಲ ಸ್ವಲ್ಪ ಕಡಿಮೆ ಮಾಡಿದ್ದೇವೆ. ಇನ್ನೂ ಕಡಿಮೆ ಮಾಡಬೇಕು. ಇದು ಒಂದು ಎರಡು ವರ್ಷದ್ದು ಅಲ್ಲ. ಓ ಅಂಡ್ ಎಂ ನಲ್ಲಿ ಹಣ ಹೊಡೆಯುವುದೇ ಕೆಲಸ ಬೇರೆ ಏನೂ ಕೆಲಸ ಇರಲಿಲ್ಲ. 50 ಕೋಟಿಯಲ್ಲಿ ಕೇವಲ ನೆಸೆಸಿಟಿ ಇದ್ದ ಕಡೆ ಮಾತ್ರ ಅದೂ ಕ್ಲೋಷರ್ ಪೀರಿಯಡ್‌ನಲ್ಲಿ ಮಾತ್ರ ಖರ್ಚು ಮಾಡಿದ್ದೇವೆ. ಪೂರ್ತಿಯಾಗಿ ಓ ಅಂಡ್ ಎಂ ಅನ್ನು ನಿಲ್ಲಿಸುತ್ತೇವೆ ಇದರಲ್ಲಿ ಯಾವುದೇ ಅನುಮಾನ ಬೇಡ. ಅಲ್ಲಿ ಪಾಳೆಗಾರಿಕೆ ಇದೆ ಇದರಲ್ಲಿ ಎರಡು ಮಾತೇ ಇಲ್ಲ. ಅವರು ಹೇಳಿದ್ದುದು ಸರಿಯಾಗಿದೆ. ಇಂಜನಿಯರ್ಸ್‌ಗಳನ್ನು ಹೆದರಿಸುತ್ತಾರೆ. ಕಂಟ್ರಾಕ್ಟರ್ಸ್‌ಗೆ ಅವರಿಗೂ ಬೆಂಬಲ ಇಲ್ಲ. ಇಂತಹವರು ವಿವರ ಕೊಡಲಿ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ನಾಗೇಗೌಡರು ಕಳೆದ 10 ವರ್ಷಗಳಿಂದ ಓ ಅಂಡ್ ಎಂ ನಲ್ಲಿ ಹಣ ಇಟ್ಟು ಈ ಹಣ ಹೊಡೆಯುವುದು ಲೂಟಿ ಮಾಡುವ ಕೆಲಸ ಪ್ರಾರಂಭವಾಗಿದೆ ಎಂದು ಹೇಳಿದರು. 1987ರಲ್ಲಿ ಜನತಾ ದಳ ಸರಕಾರವಿದ್ದಾಗ ಈ ಸಂಸ್ಕೃತಿ ಪ್ರಾರಂಭವಾಯಿತೇ?

ಶ್ರೀ ಕೆ.ಎನ್. ನಾಗೇಗೌಡ : ಈ ರೀತಿಯ ಜನಕ್ಕೆ ಪಾರ್ಟಿ ಸಂಸ್ಕೃತಿ ಅಲ್ಲ, ಹಣ ಹೊಡೆಯುವ ಕೆಲಸವನ್ನು ಪಕ್ಷದ ಸಂಸ್ಕೃತಿಯಲ್ಲಿಯೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸ್ವಲ್ಪ ತಿಳಿದುಕೊಳ್ಳಬೇಕು. ಕಳೆದ 10 ವರ್ಷಗಳಿಂದ ಹೆಚ್ಚೂ ಕಡಿಮೆ ಇಲ್ಲಿ ಲೋಪ ದೋಷ ಇದೆ ಎಂಬುದನ್ನು ತಾವು ಕಂಡು ಹಿಡಿದಿದ್ದೀರಿ. ತಮಗೆ ಧನ್ಯವಾದಗಳು. ಹಿಂದಿನ ಸರಕಾರ ಈ ಇಲಾಖೆಗೆ 5-6-7-8-10 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಇಟ್ಟಿರಲಿಲ್ಲ. 1994-95ರಲ್ಲಿ ಕೂಡ ಹತ್ತು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇತ್ತು. ಅಂದರೆ ಕಳೆದ ವರ್ಷ ನೀವು 45 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಈ ವರ್ಷ 50 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಎಲ್ಲಿ ಹಣ ಹೊಡೆಯುತ್ತಾರೆಂದು ಗೊತ್ತಿದ್ದು, ಅವಶ್ಯಕತೆ ಇಲ್ಲವೆಂದು ಗೊತ್ತಿದ್ದು ಇಟ್ಟಿದ್ದೀರಿ. ಅವಶ್ಯಕತೆ ಇದ್ದಲ್ಲಿ ಮಾಡಿ. Where there is necessity, you have to do it. You have every right to release and re-appropriate. ಅವಶ್ಯಕತೆ ಇದೆ ಎಂದು ವಿಶ್ವೇಶ್ವರಯ್ಯ ಕೆನಾಲ್‌ನಲ್ಲಿ ಪ್ರಾವಿಜನ್ ಇದ್ದದ್ದು 40 ಕೋಟಿ ರೂಪಾಯಿಗಳು ಆದರೆ ಹೆಚ್ಚು ಖರ್ಚು ಮಾಡಿದ್ದೀರಿ. 60-70 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನೆಸಸಿಟಿ ಇದೆ ಎಂದು ಮಾಡಿದ್ದೀರಿ. ಹಾಗೇ ಓ ಅಂಡ್ ಎಂ ನಲ್ಲಿ ಪ್ರಾವಿಜನ್ ಕಡಿಮೆ ಇದ್ದರೂ ಕೂಡ ನೆಸಸಿಟಿ ಇದ್ದರೆ ನಿಮ್ಮಲ್ಲಿ ರೀ ಅಪ್ರೋಪ್ರಿಯೇಟ್‌ಮಾಡಿಕೊಳ್ಳಲಿಕ್ಕೆ ಅವಕಾಶ ಇರುತ್ತದೆ ನಿಮಗೇನು

ತೊಂದರೆ ಇರುತ್ತದೆ. ಇವತ್ತು 58 ಕೋಟಿ ರೂಪಾಯಿಗಲು ಕಳೆದ ಸಲ 46 ಕೋಟಿ ರೂಪಾಯಿಗಳು ಅದರ ಹಿಂದೆ 25 ಕೋಟಿ ರೂಪಾಯಿಗಳು. ಕಳೆದ 10 ವರ್ಷಗಳ ಲೆಕ್ಕ ತೆಗೆಯಿರಿ. ಇದರ ಹಿಂದೆ ಅವರು ಬೇರೇನೂ ಕೆಲಸ ಮಾಡುವುದಿಲ್ಲ ಆ ಕಚೇರಿಗೆ ಮುತ್ತಿಗೆ ಹಾಕುವುದು ಅವರನ್ನು ಹೆದರಿಸುವುದು ಇಷ್ಟೇ ಅವರು ಮಾಡುತ್ತಾರೆ. ನೀವು ಯಾರನ್ನು ಕಳಿಸುತ್ತೀರೋ ನನಗೆ ಗೊತ್ತಿಲ್ಲ ಇಲ್ಲವೇ ಇವರನ್ನು ಗೂಂಡಾ ಕಾನೂನಿನಲ್ಲಿ ಹಾಕುತ್ತೀರೋ ನನಗೆ ಗೊತ್ತಿಲ್ಲ ಇಲ್ಲವೇ ಮತ್ತಾವುದಾದರೂ ಆ್ಯಕ್ಟ್ ಮಾಡಿ. ಇಲ್ಲದಿದ್ದರೆ ಯಾರೂ ಕೆಲಸ ಮಾಡುವುದಿಲ್ಲ. ಇದೇ ರೀತಿಯಾಗಿ ಕಾಲುವೆಗಳ ಕೆಲಸ ನಡೆಯುತ್ತಿದೆ. ಎಲ್ಲಿ ಸಾಫ್ಟ್ ಇರುತ್ತದೆ ಅಲ್ಲಿ ಹಾರ್ಡ್ ಮಾಡುತ್ತಾರೆ ಎಲ್ಲಿ ಹಾರ್ಡ್ ಇರುತ್ತದೆ ಅಲ್ಲಿ ಇನ್ನೂ ಹಾರ್ಡ್ ಮಾಡುತ್ತಾರೆ. ಈ ತರಹ ಮಾಡಿ ಆ ಬಿಲ್ ಬರಿ ಎಂದು ಹೇಳುತ್ತಾರೆ ಬರೆಯಲಿಲ್ಲವೆಂದರೆ ನೋಡು ಒಂದು ಹೆದರಿಸುತ್ತಾರೆ. ಈ ತರಹ ಆಗಿ ಒಂದು ರೀತಿಯಲ್ಲ ಲೂಟಿ ನಡೆದಿದೆ. ಇದನ್ನು ಕಣ್ಣಿನಲ್ಲಿ ಕಣ್ಣು ಇಟ್ಟು ನೋಡದೇ ಹೋದರೆ ಮುಂದೆ ಬಹಳ ತೊಂದರೆಯಾಗುತ್ತದೆಂದು ಹೇಳಬೇಕಾಗುತ್ತದೆ. ಮುಂದೆ ಇದರ ಪ್ರಾಜೆಕ್ಟ್ ಕಾಸ್ಟ್ ಏರುತ್ತಾ ಏರುತ್ತಾ ಹೋಗುತ್ತದೆ. ಇದನ್ನು ಕಂಟ್ರೋಲ್ ಮಾಡಬೇಕಾಗುತ್ತದೆ. ನಾವೇನೂ ಸ್ಪೀಡ್ ಮಾಡುತ್ತೇವೆಂದು ನೆಪ ಹೇಳುತ್ತೇವೆ ಆದರೆ ಅದು ಆಗಲಿಲ್ಲ. ಆದರೆ, ಈ ರೀತಿಯಾಗಿ ಬರೀ ಹಣ ಖರ್ಚು ಮಾಡಿದರೆ ಆ ಟಾರ್ಗೆಟ್‌ಗೆ ನಾವು ಅಚೀವ್‌ಮಾಡಿದ ಹಾಗಾಗುವುದಿಲ್ಲ. ಅದಕ್ಕೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಬಾಗಲಕೋಟೆ ಟೌನ್ ಡೆವಲಪ್‌ಮೆಂಟ್ ರಿಹ್ಯಾಬಿಲಿಟೇಷನ್ ಕಾರ್ಯಕ್ರಮಕ್ಕೆ ನೂರು ಕೋಟಿ ಇಟ್ಟಿದ್ದಾರೆ 4 ಕೋಟಿ ಖರ್ಚು ಮಾಡಿದ್ದಾರೆ. ಇನ್ನು ಒ ಅಂಡ್‌ಎಂ ಪರವಾಗಿಲ್ಲ 58 ಕೋಟಿ ರೂಪಾಯಿಗಳ ಪ್ರಾವಿಜನ್ ಇದ್ದು 10 ಕೋಟಿ ರೂಪಾಯಿಗಳು ಖರ್ಚಾಗಿದೆ. ರಿಹ್ಯಾಬಿಲಿಟೇಷನ್ ಪ್ರೋಗ್ರಾಂನಲ್ಲಿ ನೂರು ಕೋಟಿ ರೂಪಾಯಿಗಳು ಪ್ರಾವಿಜನ್ ಇದ್ದು 4 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಇತರೆ ಬಾಬತ್ತಿನಲ್ಲಿ 89 ಕೋಟಿ ರೂಪಾಯಿಗಳು. ಅದರಲ್ಲಿ 4 ಕೋಟಿ ರೂಪಾಯಿಗಳು ಖರ್ಚಾಗಿದೆ. ಇದೆಲ್ಲಾ ಜುಲೈ ಕೊನೆಯವರಿಗೆ ಆಗಿರುವುದು. ಈ ರೀತಿಯಾಗಿ ಕೆಲಸ ನಡೆದು 1999ರಲ್ಲಿ ಯು.ಕೆ.ಪಿ. ಪ್ರಾಜೆಕ್ಟ್ ಮುಗಿಸುತ್ತೇನೆ ಎನ್ನುವ ಹೇಳಿಕೆ ಕೊಟ್ಟಿದ್ದೀರಲ್ಲ ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ. ಈ ಅಂಕಿ ಅಂಶವನ್ನು ಸಮರ್ಥನೆ ಮಾಡಿಕೊಳ್ಳುವ ರೀತಿಯಲ್ಲಿ ಇರಬೇಕು ಇಲ್ಲವೇ ಫಿಸಿಕಲ್ ಕೆಲಸ ಟರ್ನ್ ಓವರ್ ಏನು ಇದೆ ಅದರಂತೆ ಮಾಡಬೇಕು. ಕೆಲವೇ ಕೆಲವು ಉದಾಹರಣೆ ಹೇಳುತ್ತೇನೆ ಎಲ್ಲವೂ ಹೇಳುವುದಕ್ಕೆ ಹೋಗುವುದಿಲ್ಲ. "ಆಲಮಟ್ಟಿ ಅಣೆಕಟ್ಟು ಸಂಬಂಧಿಸಿದ ಕೆಲಸಗಳು, ಇದಕ್ಕೆ ಸಂಬಂಧಿಸಿದಂತೆ ಅದರ ಕಾರ್ಯಕ್ರಮದ ಪ್ರಕಾರ ಸಿವಿಲ್ ಕೆಲಸಗಳು ಜೂನ್ 1998ರ ವೇಳೆಗೆ ಮುಗಿಸಲಾಗುವುದು ಗೇಟುಗಳನ್ನು ಕೂಡಿಸುವ ಕಾರ್ಯವನ್ನು ಜನವರಿ 1998ರಲ್ಲಿ ಪ್ರಾರಂಭ ಮಾಡಿ ಮಾರ್ಚ್ 1999 ರವರೆಗೆ ಪೂರ್ಣಗೊಳಿಸಲಾಗುವುದು ಆದರೆ, ಈ ಕಾರ್ಯಕ್ರಮಗಳನ್ನು ಮರು ಪರಿಷ್ಕರಿಸಿ ವಿವಿಧ ಕಾರ್ಯಗಳ ಸಮಯವನ್ನು ಕುಗ್ಗಿಸಿ 1997ರಲ್ಲಿ ಮಳೆಗಾಲದಲ್ಲಿ ಕೊನೆಯ ವೇಳೆಯೊಳಗೆ ನೀರನ್ನು ಶೇಖರಿಸಲು ಕಾರ್ಯಕ್ರಮವನ್ನು ಮುಖ್ಯ ಇಂಜನಿಯರ್, ಅಣೆಕಟ್ಟು ಇವರಿಗೆ ಮತ್ತು ಗೇಟ್ ಎಕ್ಸ್‌ಪರ್ಟ್ ಸಮಿತಿಗೆ ತಿಳಿಸಲಾಗಿದೆ ಎಂದು ಹೇಳಿದ್ದರು. ಅಂದರೆ, ನೀವು

ಈ ಪ್ರಪೋಸಲ್ಸ್ ಅನ್ನು ರೀ ಎಕ್ಸಾಮಿನ್ ಮಾಡುತ್ತಿದ್ದೀರಿ. ಗೇಟಿನ ಬಗ್ಗೆ ಕೂಡ ತಾವು ಯಾವ ರೀತಿಯಾಗಿ ಇದನ್ನು ಕೂಡಿಸಬೇಕು ಅದರ ಡಿಸೈನ್ ಹೇಗೆ ಎನ್ನುವ ಮಾತುಕತೆ ಕೂಡ ತಾವು ಮಾಡುತ್ತಿದ್ದೀರಿ. ಕೇಂದ್ರ ಸರಕಾರದವರು ತಮಗೆ ಹಿಂದೆ ದಿನಾಂಕ 17 ಜನವರಿ 1996ರಲ್ಲಿ ಕ್ಲಿಯರೆನ್ಸ್ ಕೊಟ್ಟಿದ್ದರು. ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಕೊಟ್ಟಿದ್ದರು ಅದರಲ್ಲಿ ಒಂದು ಮಾತ್ರನ್ನು ಹೇಳಿದ್ದಾರೆ. 4 ನೇ ಜುಲೈ 96ರಲ್ಲಿ M.K. Sinha has written the letter. "Reference is invited to your above referred letter vide.. UKP II Stage, Multi-purpose project received for techno economic approval. Project report has been examined by gate design department and they have cleared the gates design and sent subject to compliance of certain observations" ಸರ್ಟನ್ ಅಬ್ಸರ್ವೇಷನ್ ಮಾಡಿದ್ದಾರೆ. ಗೇಟ್ ಅನ್ನು ಯಾವ ರೀತಿಯಾಗಿ ಕೂರಿಸಬೇಕೆಂದು ಡಿಸೈನ್ ಅಪ್ರೂವ್ ಮಾಡಿಕೊಟ್ಟಿದ್ದಾರೆಂದು ಕೇಂದ್ರ ಸರಕಾರದವರು ತಮ್ಮ ಪತ್ರದ ಮುಖಾಂತರ ತಮಗೆ ತಿಳಿಸಿದ್ದಾರೆ. ಅದರ ಪ್ರಕಾರ ತಾವೇನು ಹೇಳುತ್ತೀರಿ ಎಂದರೆ ಮತ್ತೆ ಪುನಃ ರೀ ಎಕ್ಸಾಮಿನ್ ಮಾಡಿ ನಾವು ಗೇಟನ್ನು ಕೂಡಿಸುತ್ತೇವೆಂದು. ಅಂದರೆ ಈ ಡಿಸೈನ್ ಹೋಗಿ ಗೇಟ್ ತಯಾರಾಗಬೇಕು. ಗೇಟ್‌ಬಗ್ಗೆ ಜರ್ಮನಿಗೆ ಆರ್ಡರ್ ಕೊಟ್ಟಿದ್ದೇವೆಂದು ಮೊನ್ನೆ ಅವರು ಹೇಳುತ್ತಿದ್ದರು. ಜರ್ಮನಿಯಿಂದ ಇವೆಲ್ಲಾ ತಯಾರಾಗಿ ಬಂದು ಆಗಬೇಕೆಂದರೆ 1 ವರ್ಷದಲ್ಲಂತೂ ಇದು ಆಗಲಿಕ್ಕೆ ಸಾಧ್ಯವಿಲ್ಲ. 1997ರ ಅಂತ್ಯದಲ್ಲಿ ಮಾಡುತ್ತೇವೆಂದು ಅವರು ಹೇಳಿದ್ದಾರೆ. 1997ರ ಕೊನೆ ಎಂದರೆ ಆಗ ಮಳೆಗಾಲ ಕೊನೆಗೊಳ್ಳುವ ವೇಳೆಯ ಒಳಗಾಗಿ ಈ ನೀರನ್ನು ಶೇಖರಿಸಿ ಗೇಟನ್ನು ಕೂಡಿಸುತ್ತೇವೆಂದು ಹೇಳಿದ್ದಾರೆ. ಅದು ಎಷ್ಟರಮಟ್ಟಿಗೆ ಸಾಧ್ಯವಾದೀತು. ಗೊತ್ತಿದ್ದು ಏಕೆ ಹೀಗೆ ಹೇಳುತ್ತೀರಿ. ಇಂಡಿ ಶಾಖಾ ಕಾಲುವೆ 172 ಕಿಲೋ ಮೀಟರ್ ಉದ್ದ ಇದೆ. ಮೊದಲ ಹಂತದಲ್ಲಿ 64 ಕಿಲೋಮೀಟರ್ ಇದೆ. ಈಗಾಗಲೇ ವಿಶ್ವಬ್ಯಾಂಕ್ ನೆರವಿನಿಂದ ಈ ಕೆಲಸವನ್ನು ಕೈಗೆ ಎತ್ತಿಕೊಂಡಿದ್ದಾರೆ. ಆದರೆ, ಇನ್ನು 108 ಕಿಲೋ ಮೀಟರ್ ಆಗಬೇಕು. ಈಗ 64 ಕಿಲೋಮೀಟರ್ ಇನ್ನೂ ಪೂರ್ತಿಗೊಂಡಿಲ್ಲ. 108 ಕಿಲೋಮೀಟರ್ ಈ ಎರಡು ವರ್ಷದಲ್ಲಿ ಮುಗಿಯುವುದಕ್ಕೆ ಸಾಧ್ಯವಿಲ್ಲ. ಅದರ ಸರ್ವೆ ಇನ್ನು ಕೆಲವು ಕಡೆ ನಡೆದಿದೆ. ಅದರಲ್ಲಿ ಸುಮಾರು 22 ಕಿಲೋಮೀಟರ್ ಇನ್ನೂ ಸರ್ವೆಯಾಗಬೇಕು. ಅಂದರೆ ಕೆಲಸ ಪ್ರಾರಂಭ ಮಾಡುವುದಂತೂ ಬಿಟ್ಟುಬಿಡಿ. ಇನ್ನು 22 ಕಿಲೋಮೀಟರ್ ಅದರಲ್ಲಿ ಸರ್ವೆಯಾಗಬೇಕು. ಎಂದಾಗ ಎಷ್ಟರಮಟ್ಟಿಗೆ ಈ ಅವಧಿಯಲ್ಲಿ ಮುಗಿಯುತ್ತದೆ ಎಂದು ಅವರು ಹೇಳಬೇಕು. ಅದರ ಜೊತೆಯಲ್ಲಿ ಇನ್ನು ಡಿಸ್ಟ್ರಿಬ್ಯೂಟರೀಸ್ ಅದರಲ್ಲೂ ಕೂಡ ಸುಮಾರು 121 ರಿಂದ 150ರವರೆಗೆ ಬರುವ ಎಲ್ಲಾ ಸಬ್ ಡಿಸ್ಟ್ರಿಬ್ಯೂಟರೀಸ್ ಕೂಡ ತೆಗೆದುಕೊಂಡಿಲ್ಲ. ಆ ಸರ್ವೆ ಕೂಡ ಇವತ್ತಿನ ದಿವಸ ಆಗಬೇಕು. ಆಮೇಲೆ ನಾರಾಯಣಪುರ ಬಲದಂಡೆ ಕಾಲುವೆ, ಈ ಕಾಲುವೆ ಒಟ್ಟು 95 ಕಿಲೋಮೀಟರ್ ಉದ್ದ ಇದೆ. 70 ಕಿಲೋಮೀಟರ್ ಉದ್ದದ ಕಾರ್ಯಕ್ರಮವನ್ನು ನೇರನೇಮಕಾತಿ ಈ ಕಂಟ್ರಾಕ್ಟ್ ಬೇಸಿಸ್ ಮೇಲೆ ಕೊಟ್ಟಿದ್ದಾರೆ. ಇದನ್ನು ಲಾಸ್ಟ್‌ಟೈಮ್ ನಾನು ಹೇಳಿದ್ದೆ. ಅಂದರೆ ಅವರಿಗೆ ಬೇಕಾದವರಿಗೆ ಕರೆಸುವುದು. ಕ್ವಾಲಿಫೈಡ್ ಯಾರು ಇದ್ದಾರೋ?

ಅವರು ಹೇಳುವುದಿಲ್ಲ. ಅವರ ದೃಷ್ಟಿಯಿಂದ ಕ್ವಾಲಿಫೈಡ್ ಯಾರು ಇದ್ದಾರೋ ಅವರಿಗೆ ಮಾತ್ರ ನೇರ ನೇಮಕಾತಿ ಮಾಡಿ ಈ ಕೆಲಸ ಮಾಡಿ ಎಂದು ಹೇಳುವುದು. ಈ 95 ಕಿಲೋಮಿಟರ್ ಉದ್ದದಲ್ಲಿ 70 ಕಿಲೋಮೀಟರ್ ಉದ್ದದ ಕಾರ್ಯವನ್ನು ನೇರ ನೇಮಕಾತಿ ಮುಖಾಂತರ ಕೈಗೊಳ್ಳಲಾಗಿದೆ. ಆದರೆ, ಇನ್ನೂ ಸುಮಾರು 25 ಕಿಲೋಮೀಟರ್ ಸರ್ವೆಯಾಗಬೇಕು. ಅಂದರೆ 1971 ರಿಂದ 1995ರವರೆಗೆ ಅಂದರೆ ಹೆಚ್ಚು ಕಡಿಮೆ 25 ಕಿಲೋಮೀಟರ್ ಸರ್ವೆಯಾಗಬೇಕು. ಸರ್ವೆಯೇ ಆಗದೆ ಕೆಲಸ ಯಾವಾಗ ಮುಗಿಯುವುದು ಸ್ವಾಮಿ? ಸರ್ವೆ ಮಾಡುವುದಕ್ಕೆ ಇನ್ನೂ ಸುಮಾರು ಐದಾರು ತಿಂಗಳು ಬೇಕು. ಅಂದರೆ ಒಂದು ವರ್ಷದಲ್ಲಿ ಈ ಕೆಲಸ ಮುಗಿಯುತ್ತದೆಯೇ? ಇದು ಸಾಧ್ಯವಿಲ್ಲ. ಅದೇ ರೀತಿಯಾಗಿ ಜೇವರ್ಗಿ ಶಾಖಾ ಕಾಲುವೆ, ಇದು ಈ ಕಾಲುವೆಯ ಒಟ್ಟು ಉದ್ದ 85 ಕಿಲೋಮೀಟರ್. 85 ಕಿಲೋಮೀಟರ್ ನಲ್ಲಿ ಇದಕ್ಕೂ ನೇರ ನೇಮಕಾತಿ. ಪೀಸ್ ಕಂಟ್ರಾಕ್ಟ್ 70 ಕಿಲೋಮೀಟರ್ ಪ್ರಾರಂಭ ಮಾಡಿದ್ದಾರೆ. ಆಮೇಲೆ ಉಳಿದ 15 ಕಿಲೋಮೀಟರ್ ಇನ್ನೂ ಇದು ಸರ್ವೆಯಾಗಬೇಕು. ಸರ್ವೆಯ ಹಂತದಲ್ಲೇ ಇದೆ. ಆಮೇಲೆ ಉಳಿದ ಕೆಲಸ ಪ್ರಾರಂಭ ಮಾಡಿದರಲ್ಲ, ಈ ಕೆಲಸ ನಿಲ್ಲಿಸಿದ್ದಾರೆ. ಜೇವರ್ಗಿ ಒಂದೇ ಅಲ್ಲ. ಬಲದಂಡೆ ಕಾಲುವೆ ಇವು ಎಲ್ಲವೂ ಕೂಡ ಫಾಸ್ಟ್ ಆಗಿ ಮಾಡುತ್ತೇವೆ ಎಂದು ಹೇಳಿ ಮೊದಲ್ಲೆಲ್ಲ ಪೀಸ್ ಕಂಟ್ರಾಕ್ಟ್‌ನಲ್ಲಿ ಕೊಟ್ಟರು. ಯಾರು ಯಾರಿಗೆ ಬೇಕೋ ಅವರಿಗೆ ಕರೆಯಿಸಿದರು. ನೀನು ತೆಗೆದುಕೋ, ನೀನು ತೆಗೆದುಕೋ ಎಂದು ಹೇಳಿ ಹಂಚಿದರು. "ಹುಚ್ಚಿ ಲಗ್ನದೊಳಗೆ ಉಂಡವನೇ ಜಾಣ" ಎನ್ನುವಂತೆ ಹೇಳಿ ಯಾರ‍್ಯಾರೋ ಬೇಕಾದವರು ಹೋದರು, ಅವರು ಆರ್ಡರ್ ತಂದು, ಪ್ರಾರಂಭ ಮಾಡಿದರು. ಈಗ ಎಲ್ಲಾ ಸ್ಟಾಪ್ ಆಗಿದೆ. ಅದೇನಾಯಿತೊ ಗೊತ್ತಾಗಲಿಲ್ಲ. ಅದಕ್ಕೆಲ್ಲಾ ಆಮೇಲೆ ವಿವರವನ್ನು ಹೇಳಬಹುದು. ಅದಕ್ಕೆ ಅವರಿಗೆ ಮನಸ್ಸು ಬಂದವರಿಗೆ ಕೊಟ್ಟರು. ನಾನು ಹೋದಸಲ ಇದರಲ್ಲಿ ಅವ್ಯವಹಾರವಾಗಿದೆ ಎಂದು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ದಯವಿಟ್ಟು ಈ ತುಂಡು ಗುತ್ತಿಗೆಯನ್ನು ತಮಗೆ ಬೇಕಾದವರಿಗೆ ಏನು ಕೊಟ್ಟಿದ್ದೀರಿ, ಇದರಲ್ಲಿ ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು, ಇದನ್ನು ಬೇಕಾದರೆ ಲೋಕಾಯುಕ್ತಕ್ಕೆ ರೆಫರ್ ಮಾಡಿ ಎಂದು ಪದೇ ಪದೇ ಕೇಳಿಕೊಂಡರೂ ಇವರೇನೂ ಕೇಳಲಿಲ್ಲ. ಕೊನೆಗೆ ವಿಜಿಲೆನ್ಸ್‌ಗಾದರೂ ರೆಫರ್ ಮಾಡಿ ಎಂದು. ನೀವು ಕೊಟ್ಟಿದ್ದು ಸರಿಯೋ ತಪ್ಪೋ ಎಂದು. ಈಗ ಅವರೆಲ್ಲರೂ ಕೂಡ ಕ್ಲೈಮ್ ಹೆಚ್ಚಿಗೆ ಹಾಕುತ್ತಾರೆ. ಏಕೆಂದರೆ ನೀವು ಮನಸ್ಸಿಗೆ ಬಂದಂತೆ ಕೊಟ್ಟುಬಿಟ್ಟಿರಿ. ಅಲಾಟ್ ಮಾಡಿದಿರಿ ಅವರು ಹೇಳುತ್ತಾರೆ, ನಿಮ್ಮ ಅಲಾಟ್‌ಮೆಂಟ್ ಪ್ರಕಾರ ಕೆಲಸ ಮಾಡಿದ್ದೇವೆ, ನಮ್ಮದೇನು ತಪ್ಪು ಎನ್ನುತ್ತಾರೆ. ಈಗ ಪುನಃ ಅವರು ಬರವಣಿಗೆ ಇಲ್ಲ ಎಂದು ಕೆಲವು ಕಂಟ್ರಾಕ್ಟರು ಅಡ್ಡಾಡುತ್ತಿದ್ದಾರೆ. ಹೀಗೆ ಇಕ್ಕಟ್ಟಿಗೆ ಸಿಕ್ಕಿಸಿ ಕೆಲಸವನ್ನೂ ನಿಲ್ಲಿಸಿ ಮತ್ತೆ ಇನ್ನೊಂದು ಹೇಳುವುದು. ನಾವೆಲ್ಲ ಕೆಲಸ ಮಾಡಬೇಕು ಎಂದು ಹೇಳಿ ಬಹಳ ಪ್ರಯತ್ನಮಾಡುತ್ತಿದ್ದೇವೆ. ಆದರೆ ಪದೇ ಪದೇ ಈ ವಿರೋಧಪಕ್ಷದವರು ಎತ್ತಿ ಎತ್ತಿ ಈ ಕೆಲಸ ನಿಲ್ಲಿಸುತ್ತಿದ್ದಾರೆ ಎನ್ನುವ ಭಾವನೆ ಬರುವ ರೀತಿಯಲ್ಲಿ ಮಾತನಾಡುತ್ತೀದ್ದೀರಿ.

ಶ್ರೀ ಜೆ. ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕೆನಾಲ್ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭಮಾಡಿದ್ದೀರಿ. ಇಂಡಿ ಬ್ರಾಂಚ್ ಕೆನಾಲ್ ಟೋಟಲ್ ಲೆಂಥ್ 175 ಕಿ.ಮೀ. ನಾರಾಯಣಪುರ್

ರೈಟ್ ಬ್ಯಾಂಕ್ 95 ಕಿಲೋಮೀಟರ್, ಜೇವರ್ಗಿ 85 ಕಿಲೋಮೀಟರ್ ಒಟ್ಟಾರೆ ಲೆಂಥ 355 ಕಿಲೋಮೀಟರ್ ಆಗುತ್ತದೆ. ತಾವು ಅನ್-ಗೋಯಿಂಗ್ ವರ್ಕ್ಸ್ 208 ಕಿಲೋಮೀಟರ್ ಎಂದು ತೋರಿಸಿದ್ದೀರಿ, ಬ್ಯಾಲೆನ್ಸ್ 65 ಕಿಲೋಮೀಟರ್ ಎಂದು ಹೇಳುತ್ತೀರಿ. ಒಟ್ಟು ಕೂಡಿದರೆ 273 ಕಿಲೋಮೀಟರ್ ಆಗುತ್ತದೆ. ಟೋಟಲ್ ಲೆಂಥ್ 355 ಕಿಲೋಮೀಟರ್ ಎಂದು ಒಂದು ಕಡೆ ತೋರಿಸುತ್ತೀರಿ. ಅನ್‌ಗೋಯಿಂಗ್,ಬ್ಯಾಲೆನ್ಸ್ ಎರಡು ಸೇರಿಸಿ 273 ಎಂದು ತೋರಿಸುತ್ತೀರಿ. ಇನ್ನುಳಿದ ಕಿಲೋಮೀಟರ್ ಎಲ್ಲಿಗೆ ಹೋಯಿತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಕೇಳುವುದು ಇಷ್ಟೆ. ಅನೇಕ ಕಾಲುವೆಗಳು ಇನ್ನು ಸರ್ವೆಯಾಗಿಲ್ಲ. ಕೆಲವು ಅರ್ಧ ಮುಗಿದಿದೆ. ಈಗಲಂತೂ ಕೆಲವು ನಿಂತೇ ಹೋಗಿವೆ. ಅಂದಮೇಲೆ ಎರಡು ವರ್ಷಗಳಲ್ಲಿ ಪೂರ್ಣವಾಗುವ ಸಾಧ್ಯತೆ ಹೇಗೆ? ಇನ್ನೊಂದು ಕಡೆ ಮನಸ್ಸಿಗೆ ಬಂದವರಿಗೆ ಕೆಲಸ ಕೊಟ್ಟು ಕಳಪೆ ಮಾಡಿಸಿ ಮತ್ತು ಷಾರ್ಟ್ ಟೆಂಡರನ್ನು ಕರೆದು ಅದನ್ನು ಸ್ಟಾರ್ಟ್ ಮಾಡಿದ್ದೀರಾ? ಅದನ್ನೂ ಮಾಡಿಲ್ಲ. ಸೈಮಲ್‌ಟೇನಿಯಸ್‌ಲಿ ಇದನ್ನಾದರೂ ಮಾಡಬೇಕಲ್ಲ. ಕೆಲಸದ ದೃಷ್ಟಿಯಿಂದ ಮಹತ್ವ ತಿಳಿದುಕೊಂಡು ಇದನ್ನು ಪೀಸ್ ವರ್ಕ್‌ಕೊಟ್ಟು ಪ್ರಾರಂಭ ಮಾಡಿದ್ದೇವೆ. ಬಟ್ ಮೀನ್‌ವೈಲ್ ಒಂದು ತಿಂಗಳು ಎರಡು ತಿಂಗಳಲ್ಲಿ ಕಾಲ್‌ಫಾರ್ ಮಾಡಿ ಇವತ್ತು ಟೆಂಡರ್ ಕಾಲ್‌ಫಾರ್ ಮಾಡಿದ್ದೇವೆ ಎನ್ನುತ್ತೀರಾ? ಅದೂ ಇಲ್ಲ. ಹೀಗಾಗಿ ಬಹುಶಃ ಯುಕೆಪಿ ಎಂದರೆ ಯಾರು ಕೇಳದೆ ಇರುವ ವಸ್ತುವಾಗಿದೆ. ನಾವು ಪದೇ ಪದೇ ಅನೇಕ ವಿಚಾರಗಳ ಬಗ್ಗೆ ಮಾತನಾಡುತ್ತೇವೆ. ಆದರೆ, ಇದರ ಬಗ್ಗೆ ನಾವು ಕಾಳಜಿ ವಹಿಸಬೇಕಾಗಿದೆ, ಏಕೆಂದರೆ ಬಚಾವತ್ ಅವಾರ್ಡ್ ಪ್ರಕಾರ ನಮಗೆ 734 ಟಿಎಂಸಿ ನೀರು ಅಲಾಟ್ ಆಗಿದೆ, ಅದರಲ್ಲಿ ಸುಮಾರು 729 ಟಿಎಂಸಿ ನೀರನ್ನು ನಾವು ಏನು ಉಪಯೋಗ ಮಾಡಿಕೊಳ್ಳಬೇಕು ಅದು ಎರಡು ಸಾವಿರ ಇಸವಿಯೊಳಗಾಗಿ, ಮಾಡಿಕೊಳ್ಳದೇ ಹೋದರೆ ಅದರ ಅನಾಹುತ ಏನು ಎಂದು ಎಲ್ಲರಿಗೂ ಗೊತ್ತಿದೆ. ಗೊತ್ತಿದ್ದರೂ ಕೂಡ ಇದರ ಕಡೆ ನಿರ್ಲಕ್ಷ್ಯವಾಗುತ್ತಿದೆ ಏಕೆ? ಏನ್ನುವ ಪ್ರಶ್ನೆ ಇವತ್ತು ನಾನು ಕೇಳುತ್ತಿದ್ದೇನೆ. ಅದಕ್ಕಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ ಈ ಅಂಕಿಅಂಶಗಳನ್ನು ನಾನು ಕೊಡುತ್ತಿದ್ದೇನೆ. ಇದರಿಂದ ಬೋರ್ ಆಗಿರಬಹುದು. ಆದರೆ ವಿಧಿ ಇಲ್ಲ. ಅಂದರೆ ಎಷ್ಟರಮಟ್ಟಿಗೆ ಕೆಲಸ ನಡೆದಿದೆ? ನಿಂತಿದೆ ಮತ್ತು ನೀವೇ ಈ ಕೆಲಸಗಳನ್ನು ಮಾಡುತ್ತಿದ್ದೀರಿ ಎನ್ನುವ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ಆಲಮಟ್ಟಿ ಎಡದಂಡೆ ಕಾಲುವೆ ಇದರ ಉದ್ದ 103 ಕಿಲೋಮೀಟರ್. ಆದರೆ ಇದರಲ್ಲಿ ಕೇವಲ 24 ಕಿಲೋಮೀಟರ್ ಮಾತ್ರ ಪ್ರಗತಿಯಲ್ಲಿದೆ. ಅಂದರೆ, ಸುಮಾರು 79 ಕಿಲೋಮೀಟರ್ ಇನ್ನೂ ಪ್ರಾರಂಭವೇ ಆಗಿಲ್ಲ. ಅದಕ್ಕೆ ಇಷ್ಟೊಂದೆಲ್ಲ ನ್ಯೂನತೆಗಳನ್ನು ಇಟ್ಟುಕೊಂಡು ಆಮೇಲೆ ಇಷ್ಟೊಂದು ನ್ಯೂನತೆ ಇದ್ದರೂ ಕೂಡ ಕೆಲಸ ಸಮರ್ಪಕವಾಗಿ ನಡೆದಿದೆ, ಸರ್ಕಾರ ಮುಗಿಸುತ್ತದೆ ಎನ್ನುವ ಧೈರ್ಯ ಹೇಳುತ್ತಿದ್ದೀರಲ್ಲ, ಅದು ಸತ್ಯಕ್ಕೆ ದೂರವಾಗಿದ್ದು ಮತ್ತು ಇದರಲ್ಲಿ ಯಾವ ಹುರುಳು ಇಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದೇ ರೀತಿಯಾಗಿ ಮುಳವಾಡ ಏತ ನೀರಾವರಿ ಯೋಜನೆ. ಅದು ಕೂಡ ಇವತ್ತು ಕುಂಟುತ್ತಿದೆ. ಆಮೇಲೆ ರಾಮ್‌ಪುರ್ ಏತ ನೀರಾವರಿ ಯೋಜನೆಯಾಗಲಿ, ಇಂಡಿ ಏತ ನೀರಾವರಿ ಯೋಜನೆಯಾಗಲಿ ಇದೂ ಕೂಡ 73 ಕಿಲೋಮೀಟರ್

ಉದ್ದ ನಿರ್ಮಿಸಲಾಗುವುದು. ಆದರೆ ಇದೂ ಅಷ್ಟೊಂದು ಪ್ರಗತಿಯಲ್ಲಿಲ್ಲ, ನಿಂತುಹೋಗಿದೆ ಎನ್ನುವ ಶಿಮಾತು, ನಾನು ಈ ಸಂದರ್ಭದಲ್ಲಿ ಏಕೆ ಹೇಳುತ್ತಿದ್ದೇನೆ ಎಂದರೆ ನಾವು ಬಹಳ ತ್ವರಿತ ಗತಿಯಿಂದ ಈ ಕೆಲಸಗಳನ್ನು ಮಾಡುತ್ತಿದ್ದೇವೆ, ಅದಕ್ಕೆ ಈ ಸರ್ಕಾರ ಬಹಳ ಶಕ್ತಿಶಾಲಿ ಇದೆ. ಎರಡು ಸಾವಿರ ಇಸವಿ ಒಳಗಾಗಿ ಬಜಾವತ್ ಅವಾರ್ಡ್ ಪ್ರಕಾರ ನಮಗೆ ಕೊಟ್ಟಂಥ ನೀರನ್ನು ಸದುಪಯೋಗ ಮಾಡಿ ಕೊಳ್ಳುತ್ತೇವೆ. ಒಂದು ತೊಟ್ಟು ಹನಿ ಕೂಡ ಆಂಧ್ರಕ್ಕೆ ನಾವು ಬಿಡುವುದಿಲ್ಲ ಎನ್ನುವ ಮಾತನ್ನು ಏನು ಹೇಳುತ್ತಿದ್ದೀರಿ, ಇದು ಸಾಧ್ಯವಿರಲಾರದ ಮಾತು, ಇದು ಒಂದು ಕಡೆ ಎರಡನೆಯದು ಈಗ ಸ್ವಲ್ಪಮಟ್ಟಿಗೆ ಈ ಆಲಮಟ್ಟಿ ಕೆಲಸ ನಡೆದಿದ್ದು ಇವತ್ತು ನಿಂತುಬಿಟ್ಟಿದೆ. ಏಕೆಂದರೆ ಚಂದ್ರಬಾಬುನಾಯ್ಡು ಸ್ಟೀರಿಂಗ್ ಕಮಿಟಿ ಕನ್‌ವೀನರ್. ಅವರು ಯು.ಎಫ್. ಕನ್‌ವೀನರ್. ನಾನು ಅದಕ್ಕೂ ಇದಕ್ಕೂ ಜೋಡಿಸುವುದಿಲ್ಲ. ಏಕೆ ಜೋಡಿಸುವುದಿಲ್ಲ ಎಂದರೆ ಅವರು ಯಾರು ಯಾರಿಗೆ ಗುತ್ತಿಗೆ ಕೊಡಬೇಕಾಗಿತ್ತು, ಕೊಟ್ಟು ಹೋಗಿದ್ದಾರೆ.

11.20 ಪಿ.ಎಂ

ಸುಮಾರು ನಾಲ್ಕು ನೂರು, ಐದನೂರು ಕೋಟಿ ರೂಪಾಯಿ ಪೀಸ್‌ವರ್ಕ್‌ನ್ನು ಏನು ಕೊಟ್ಟಿದ್ದಾರೆ ಅದು ಮುಂದೆ ಸರಿಯಾಗಿ ನಡೆದುಕೊಂಡು ಹೋಗುತ್ತಿದೆಯಾ, ಇಲ್ಲವೊ ಎಂದು ನೋಡಿಕೊಳ್ಳುವಂಥ ಜವಾಬ್ದಾರಿಯನ್ನು ನಾಗೇಗೌಡರ ಮೇಲೆ ಬಿಟ್ಟಿದ್ದಾರೆ. ನಾಗೇಗೌಡರು ಅದನ್ನು ನಿರ್ವಹಿಸುತ್ತಾರೆ. ಏಕೆಂದರೆ ಅವರಿಗೆ ಕೊಟ್ಟಂಥ ಆರ್ಡರ್ಸ್ ಕ್ಯಾನ್ಸಲ್ ಮಾಡುವುದಕ್ಕೆ ಬರುವುದಿಲ್ಲ. ಆ ಶಕ್ತಿ ಕೂಡ ಅವರಿಗಿಲ್ಲ. ಇವೊತ್ತು ಚಂದ್ರಬಾಬು ನಾಯ್ಡು ಅವರು ಕಾಲುಕೆರೆದು ಜಗಳ ಪ್ರಾರಂಭ ಮಾಡಿದ್ದಾರೆ ಮತ್ತು ಅವರು ಇದರಲ್ಲಿ ರಾಜಕೀಯ ದುರುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಆಲಮಟ್ಟಿ ಬಗ್ಗೆ ಇವೊತ್ತು ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಇದೆ. ಡಿಸೈನ್ ಡಿಪಾರ್ಟ್‌ಮೆಂಟ್‌ನವರ ಕ್ಲಿಯರೆನ್ಸ್ ಇದೆ. ಯಾವ ಮಟ್ಟಕ್ಕೆ ಗೇಟ್ ಕೂಡಿಸಬೇಕು ಎಂದು ಕ್ಲಿಯರೆನ್ಸ್ ಇದ್ದಮೇಲೆ ಇವೊತ್ತು ಅವರು ಕಾಲುಕೆರೆದು ಜಗಳ ಮಾಡತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಈಗ ಚಾಮುಂಡೇಶ್ವರಿ ಎನ್ನುವ ಕಂಪನಿಗೆ ಇದನ್ನು ವಹಿಸಿಕೊಟ್ಟಿದ್ದಾರೆ ಎನ್ನುವಂಥ ಮಾತನ್ನು ನಾನು ಕೇಳಿದ್ದೇನೆ. ಏಕೆಂದರೆ ಮೊದಲು ಕೊಟ್ಟಂಥ ಕಂಪನಿಯವರಿಗೆ ಇವರಿಗೆ ವ್ಯತ್ಯಾಸ ಬಂದಿದೆ. ಇವರಿಗೆ ಅವರಿಗೆ ಕೂಡಿಸಿ ಮಾತನಾಡಿಸಿ ನೀವು ಮಾಡಿದರೂ ಪರವಾಗಿಲ್ಲ ಎಂದು ಹೇಳಿ ಇವೊತ್ತು ಚಾಮುಂಡೇಶ್ವರಿ ಕಂಪನಿಯವರನ್ನೇ ಮುಂದೆ ಮಾಡಿ ಅದನ್ನು ಮಾಡುತ್ತಿದ್ದಾರೆ ಎನ್ನತಕ್ಕಂಥದ್ದು ಇವೊತ್ತು ಬಂದಿದೆ. ಆದರೆ, ಇದೇ ಸಮಯದಲ್ಲಿ ನೀರಿನ ವಿಷಯದಲ್ಲಿ ನಾವು ಎಷ್ಟು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಅದಕ್ಕಿಂತಲೂ ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ. ಪವರ್ ಪ್ರಾಜೆಕ್ಟ್ ಉಪಯೋಗ ಮಾಡಿಕೊಂಡ ಮೇಲೆ ವಿದ್ಯುಚ್ಛಕ್ತಿ ಉತ್ಪಾದನೆಯಾದ ಮೇಲೆ ಆಟೊಮ್ಯೊಟಿಕಲಿ ನೀರು ಹೋಗಿಯೇ ಹೋಗುತ್ತದೆ. ಕೃಷ್ಣಾ ರಿವರ್‌ನಲ್ಲಿ ನಾವು ಬಿಟ್ಟ ಮೇಲೆ ಅದು ಆಂಧ್ರಕ್ಕೆ ಹೋಗುವಂಥದ್ದನ್ನು ಮತ್ತೆ ಬೇರೆ ಕಡೆ ಡೈವರ್ಟ್ ಮಾಡುವ ಹಾಗಿಲ್ಲ. ಆದುದರಿಂದ, ಅವರು ಇವೊತ್ತಿನ ದಿವಸ ಕಾಲು ಕರೆದು ಜಗಳಕ್ಕೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಮತ್ತು ಅವರು ಎಲ್ಲಾ ಪ್ರಾಜೆಕ್ಟ್‌ಗಳನ್ನು

ಮುಗಿಸಿಕೊಂಡಿದ್ದಾರೆ. ಅವರು ಯಾವುದಕ್ಕೆ ಕೇಂದ್ರ ಸರ್ಕಾರ ಕ್ಲಿಯರೆನ್ಸ್ ಕೊಟ್ಟಿಲ್ಲ ಅಂಥದ್ದನ್ನು ಅವರು ಇವತ್ತಿನ ದಿವಸ ಮಾಡಿದ್ದಾರೆ. ಅದು ಶ್ರೀಶೈಲಂ ರೈಟ್ ಬ್ಯಾಂಕ್ ಕೆನಾಲ್ ಇರಬಹುದು, ಲೆಫ್ಟ್ ಬ್ಯಾಂಕ್ ಕೆನಾಲ್ ಇರಬಹುದು ಅಥವಾ ಜುರಾಲಾ ಪ್ರಾಜೆಕ್ಟ್ ಇರಬಹುದು ಅಥವಾ ಭೀಮಾ ಲಿಫ್ಟ್ ಇರಿಗೇಷನ್ ಇರಬಹುದು ಇವೆಲ್ಲವನ್ನೂ ಕೂಡ ಅವರು ಮಾಡುತ್ತಿದ್ದಾರೆ. ಅವರು ಮಾಡುವುದಕ್ಕೆ ಮಾತ್ರ ಏನೂ ಅಭ್ಯಂತರವಿಲ್ಲ. ಕರ್ನಾಟಕದವರು ಮಾಡುತ್ತಾರೆ ಎಂದರೆ ಅದೂ ತಮ್ಮ ನ್ಯಾಯವಾದಂಥ ನೀರಿನ ಪಾಲನ್ನು ಉಪಯೋಗ ಮಾಡಿಕೊಳ್ಳುತ್ತಾರೆ ಎಂದರೆ ಅವರು ಬೊಬ್ಬೆ ಹಾಕುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅವರೇನಾದರೂ ಸ್ವಲ್ಪ ಬೊಬ್ಬೆ ಹಾಕಿದರೆ ಇವರು ತಣ್ಣಗಾಗುತ್ತಾರೆ. ಏಕೆಂದರೆ ಇವರು ಫ್ರೆಂಡ್ಸ್ ಯುನೈಟೆಡ್ ಫ್ರಂಟ್‌ಗೂ ಇವರಿಗೂ ಸ್ವಲ್ಪ ನೆಂಟಸ್ತನ, ಇದೆ. ಈ ದೇಶದಲ್ಲಿ ಇವರು 40 ಜನರು ಸೇರಿ 450 ಜನರನ್ನು ಆಳುತ್ತಿದ್ದಾರೆ. ಈಗ 20 ಜನ ಕಡಿಮೆಯಾದರು. ಬಿಹಾರದ ಪಕ್ಷ ಒಡೆದ ಮೇಲೆ ಈಗ 25 ಅಥವಾ 26 ಜನರು ಇರಬಹುದು. ಕೆಲವು ಸಲ ಏನು ಮಾಡಬೇಕಾಗುತ್ತದೆ ಎಂದರೆ ನಮ್ಮ ಅತಿ ದುಷ್ಟ ಶಕ್ತಿಗಳನ್ನು ಹೊರಗಿಡಬೇಕು ಎಂದರೆ ಅವರ ಅಡ್ವಾಂಟೇಜ್ ನಾವು ತೆಗೆದುಕೊಳ್ಳಬಾರದು. ನೀವು ನ್ಯಾಯವಾಗಿ ನಡೆದುಕೊಳ್ಳಬೇಕು. ಅದನ್ನು ಬಿಟ್ಟು ಸರ್ಕಾರ ನಮ್ಮಿಂದಿದೆ ಎಂದು ತಿಳಿದುಕೊಂಡು ಚಂದ್ರಬಾಬುನಾಯ್ಡು ಅಥವಾ ನಾನು ಹೇಳಿದಂತೆ ನಡೆಯುತ್ತೇನೆ, ಅವರು ಹೆದರಿಸಿದರೆ ನೀವು ಅವರ ಮಾತಿಗೆ ಬೆಲೆಕೊಟ್ಟು ರಾಜ್ಯದ ಹಿತವನ್ನು ಬಲಿಕೊಟ್ಟರೆ ಇದು ಎಷ್ಟರಮಟ್ಟಿಗೆ ಸರಿಯಾಗುತ್ತದೆ. ಕೆಲಸ ಬಹಳ ವಿಳಂಬವಾಗಿದೆ. ನಾಲ್ಕೈದು ತಿಂಗಳಿನಿಂದ ಎಕ್ಸ್‌ಪೆಂಡಿಚರ್ ಅತ್ಯಂತ ಕಡಿಮೆಯಾಗಿದೆ. ಪುನಃ ಅದನ್ನು ತೆಗೆದು ಓದುವುದಕ್ಕೆ ನಾನು ಹೋಗುವುದಿಲ್ಲ. ಪ್ರತಿ ತಿಂಗಳು ಎಷ್ಟು ಹಣ ಅಲ್ಲಿ ಖರ್ಚು ಮಾಡಿದರೆ ಎಷ್ಟು LOC release ಎನ್ನುವಂಥ ಮಾತನ್ನು ನಾನು ಕೇಳುತ್ತೇನೆ. ಅಂದ ಮೇಲೆ ದಯಮಾಡಿ ಇವೊತ್ತು ರಾಜಕೀಯ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ರಾಜಕೀಯ ಹೊಂದಾಣಿಕೆಗೋಸ್ಕರ ಈ ರಾಜ್ಯದ ಹಿತವನ್ನು ಬಲಿಕೊಡಬೇಡಿ. ನಾನು ಒಪ್ಪುವುದಕ್ಕಾಗುವುದಿಲ್ಲ We will construct this ಎಂದು ನೀವು ಅವರಿಗೆ ಸ್ಪಷ್ಟವಾಗಿ ಹೇಳಿಬಿಡಿ. ಅಲ್ಲಿ ಏನಾದರೂ ರೆಪ್ರೆಸೆಂಟೇಷನ್ ಮಾಡಿದರೆ ಅಥವಾ ಸಿಟ್ಟಿಗೆ ಬಂದರೆ ಅಥವಾ ಏನಾದರೂ ಅವರ ಮೇಲೆ ಸ್ವಲ್ಪ ಡಿಸ್‌ಪ್ಲಾಜರ್ ತೋರಿಸಿದರೆ ಸಾಕು, ಇಲ್ಲ, ಇಲ್ಲ ನಾನು ನಿಮ್ಮ ಜೊತೆಯಲ್ಲಿದ್ದೇನೆ. ನಿಧಾನವಾಗಿ ಮಾಡಿಕೊಳ್ಳುತ್ತೇವೆ. ಇನ್ನೂ ಒಂದು ನಾಲ್ಕು ದಿನ ಮುಂದೆ ಹೋಗಲಿ ಎಂದು ಸಂಧಾನ ಮಾಡತಕ್ಕಂಥದ್ದು ಒಳಸಂಚು ನಡೆಸತಕ್ಕಂಥದ್ದು ಸರಿಯಲ್ಲ. ದಯಮಾಡಿ ಇದರ ಕಡೆ ಅವರು ಗಮನ ಕೊಡಬೇಕು. ಯಾವುದೇ ರೀತಿಯಲ್ಲಿ ಆಲಮಟ್ಟಿ ಅಣೆಕಟ್ಟನ್ನು ಸುಮಾರು 529 ಅಡಿಗೆ ಏರಿಸತಕ್ಕಂಥದ್ದು ನಮ್ಮ ಒಂದು ಗುರಿ ಏನಿದೆ ಅದಕ್ಕೆ ಒಪ್ಪಿಗೆ ಇದೆ. ಅದಕ್ಕೆ ಕೇಂದ್ರ ಸರ್ಕಾರದವರು ಇವೊತ್ತು ಎಲೆಕ್ಟ್ರಿಸಿಟಿ ಅಥಾರಿಟಿ ಅವರು ಒಪ್ಪಿಗೆ ಕೊಟ್ಟಿದ್ದಾರೆ ಹಾಗೂ ಟೆಕ್ನೋ ಎಕನಾಮಿಕ್ ಡಿಸೈನ್ ತಯಾರು ಮಾಡತಕ್ಕಂಥ ಇಲಾಖೆ ಕೂಡ ಒಪ್ಪಿಗೆ ಕೊಟ್ಟಿದೆ. ಇವೊತ್ತು ಕೇಂದ್ರ ಸರ್ಕಾರದ ನೀರಾವರಿ ಇಲಾಖೆಯಲ್ಲಿಯೂ ಕೂಡ ಪ್ರತ್ಯಕ್ಷವಾಗಿ ಇದರ ಬಗ್ಗೆ ಸಂಪೂರ್ಣ ಅಪ್ರೂವಲ್ ಕೊಟ್ಟಿದ್ದಾರೆ, ಎಂದಾಗ ನಾವು ಯಾವುದೇ ರೀತಿಯಿಂದ ಹೆದರಿಕೊಳ್ಳುವಂಥ ಪ್ರಶ್ನೆ ಬಂದಿಲ್ಲ. ಅದಕ್ಕೆ ಈ ಒಂದು ಸಂದರ್ಭದಲ್ಲಿ ನಾನು ತಮ್ಮಲ್ಲಿ

ಕೇಳಿಕೊಳ್ಳತಕ್ಕಂಥದ್ದು ಇಷ್ಟೆ. ಈ ಆಲಮಟ್ಟಿ ಅಣೆಕಟ್ಟನ್ನು ಎತ್ತರ ಮಾಡತಕ್ಕಂಥ ಕೆಲಸವನ್ನು ಯಾವುದೇ ರೀತಿಯಲ್ಲಿ ತಾವು ನಿಲ್ಲಿಸಬಾರದು. ಅದಕ್ಕೆ ತಾವು ತಕ್ಷಣ ಆಸಕ್ತಿ ವಹಿಸಬೇಕು. ಕೊನೆಪಕ್ಷ ನಮಗೆ ಇಂಪೌಂಡ್ ಮಾಡುವುದಕ್ಕೆ ಆಗುತ್ತದೆ ಮತ್ತು ಇದನ್ನು ನೋಡಿದರೆ ನೀವು ಹೇಳಿದ್ದು ಒಂದು, ಮಾಡುವುದು ಇನ್ನೊಂದು. ಇದನ್ನು ನೋಡಿದಾಗ ಕಾಲುವೆಯ ಮೇನ್ ಕೆನಾಲ್ ಆಗುವುದಿಲ್ಲ ಎಂದಾಗ ಡಿಸ್ಟ್ರಿಬ್ಯೂಟರೀಸ್ ಮೂಲಕ ನೀರು ಉಪಯೋಗ ಮಾಡಿಕೊಳ್ಳುವ ಪ್ರಶ್ನೆ ಬರುವುದಿಲ್ಲ. ಕೊನೆಪಕ್ಷ ಇಂಪೌಂಡ್ ಮಾಡುವುದಕ್ಕಾಗದರೂ ಒಂದು ಶಕ್ತಿ ಬರುತ್ತದೆ. ಮತ್ತು ಅದಕ್ಕೆ ಹತ್ತಿರದಲ್ಲಿ ಈ ಕೇಸ್ ಫಿಕ್ಸ್ ಮಾಡಿ ಎತ್ತರವನ್ನು ಒಂದು ಇಂಚ್‌ನಷ್ಟು ಕೂಡ ಕಡಿಮೆ ಮಾಡದೆ ಪವರ್ ಪ್ರಾಜೆಕ್ಟ್‌ಗೆ ಏನು ಕ್ಲಿಯೆರೆನ್ಸ್ ಕೊಟ್ಟಿರಿ ಅದನ್ನು ಕೂಡ ತಯಾರಿಸಿ ಕೊಡುವಂತೆ ಎಕ್ಸಿಕ್ಯೂಟ್ ಮಾಡಬೇಕು. ಇದನ್ನು ನೀವು ಅವರ ಮಾತನ್ನು ಕೇಳಿ ನಿಲ್ಲಿಸಿದರೆ ಅಥವಾ ಕೇಂದ್ರ ಸರ್ಕಾರದವರು ಏನೋ ಕಿವಿಮಾತು ಹೇಳಿದ್ದಾರೆ ಎಂದು ಏನಾದರೂ ತಾವು ನಡೆದುಕೊಂಡರೆ ಈ ರಾಜ್ಯದ ಆ ಭಾಗದ ಜನರಿಗೆ ಮಾತ್ರವಲ್ಲ ಇಡೀ ರಾಜ್ಯಕ್ಕೆ ತೊಂದರೆಯಾಗುತ್ತದೆ. ಇದರಿಂದ ಸುಮಾರು 20-25 ಲಕ್ಷ ಎಕರೆ ನೀರಾವರಿ, ಮತ್ತು ನಮಗೆಲ್ಲರಿಗೂ ಅನುಕೂಲ ಆಗುವಂಥದ್ದು ಆಗುತ್ತದೆ. ಬಹುಶಃ ಸೌತ್ ಇಂಡಿಯಾದಲ್ಲೇ ಇದು ಬಹಳ ದೊಡ್ಡ ಪ್ರಾಜೆಕ್ಟ್. ಇಂಥ ದೊಡ್ಡ ಪ್ರಾಜೆಕ್ಟ್ ಎಲ್ಲಿಯೂ ಕೂಡ ಇಲ್ಲ. ಅದಕ್ಕಾಗಿ ಇವರು ಗಮನ ಹರಿಸುತ್ತಾರೆ ಮತ್ತು ಆ ಕೆಲಸವನ್ನು ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಎರಡನೆಯದು, ಈ ಪೀಸ್‌ವರ್ಕ್ ಎಂದು ಎರಡನೂರು, ಮೂರುನೂರು ಕೋಟಿ ರೂಪಾಯಿಗಳ ಕೆಲಸವನ್ನು ಏನು ಕೊಟ್ಟಿದ್ದರು ಅದರ ಬಗ್ಗೆ ಅನೇಕ ಬಾರಿ ನಾನು ಎನ್‌ಕ್ವಯರಿ ಮಾಡಿಸಬೇಕೆಂದು ಹೇಳಿದ್ದೇನೆ. ನಾನು ಏತಕ್ಕೆ ಎನ್‌ಕ್ವಯರಿ ಮಾಡಿಸಬೇಕು ಎಂದು ಹೇಳುತ್ತಿದ್ದೇನೆ ಎಂದರೆ ಅದರಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ಇವೊತ್ತು ಆ ಕಂಟ್ರಾಕ್ಟರ್‌ಗಳನ್ನು ಬೆಳೆಸತಕ್ಕಂಥ ಮತ್ತು ಪ್ರೋತ್ಸಾಹ ಮಾಡತಕ್ಕಂಥ ಕೆಲಸವನ್ನು ಅವರು ಮಾಡಿದ್ದಾರೆ. ಅದರಲ್ಲಿ ಹತ್ತಾರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ದಯವಿಟ್ಟು ಅದಕ್ಕೆ ತಾವು ಒಪ್ಪಿಕೊಳ್ಳಿ. ಅವರು ಯಾವುದನ್ನು ಕೇಳಿದರೂ ಇಲ್ಲ ಇಲ್ಲ ಎಂದರೆ ಏತಕ್ಕೆ ಇಲ್ಲ ಎಂಬುದನ್ನು ಕೇಳಿ. ಗುಲ್ಬರ್ಗಾ ಡಿವಿಜನ್‌ನಲ್ಲಿ 5 ಕೋಟಿ ರೂಪಾಯಿ ಸ್ಕ್ಯಾಂ ಆಗಿದೆ ಅಂದಾಗ ಅವರು ಹಾರ್ಟಿಕಲ್ಚರ್ ಸಚಿವರಾದ ಶ್ರೀ ಜಯಕುಮಾರ್ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಆಗಿದೆ ಅದೆಲ್ಲವನ್ನೂ ಪತ್ತೆ ಮಾಡಿಸುತ್ತೇನೆ ಎಂದರು. ಇದನ್ನು ಏತಕ್ಕೆ ಹೇಳಿದೆ ಎಂದರೆ ನಮ್ಮ ಹಾರ್ಟಿಕಲ್ಚರ್ ಟ್ರೆಜರಿ ಡಿಪಾರ್ಟ್‌ಮೆಂಟ್‌ನಲ್ಲಿ ಹೊಂದಾಣಿಕೆ ಮಾಡಿಕೊಂಡು ಹೆಚ್ಚಿನ ಬಿಲ್ಲನ್ನು ಡ್ರಾ ಮಾಡಿಕೊಂಡು ದುಡ್ಡನ್ನು ಹಂಚಿಕೊಳ್ಳುತ್ತಿದ್ದರು. ಹಾಗೆ ಇಲ್ಲಿ ಇವೊತ್ತಿನ ದಿವಸ ಆಗಿದೆ. ದಯವಿಟ್ಟು ಇವೆಲ್ಲವನ್ನೂ ಕೂಡ ಲೋಕಾಯುಕ್ತಕ್ಕೆ ವಹಿಸಿ. ಲೋಕಾಯುಕ್ತ ಕೂಡ ನಿಮ್ಮದೇ ಸರ್ಕಾರದ ಏಜೆನ್ಸಿ. ಅದಕ್ಕೆ ರೆಫರ್ ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಕೊನೆಗೆ ಧೈರ್ಯ ಇದ್ದರೆ ನೀವೆ ಹೋಗಿ ಎಂದು ಹೇಳುತ್ತಿದ್ದಾರೆ. ಈ ಸದನದಲ್ಲಿ ನಾನು ಕೇಳುವಾಗ ನಾನು ಹೊರಗೆ ಏನು ಮಾಡಬೇಕು ಎಂಬುದನ್ನು ನೀವು ನನಗೆ ಬುದ್ಧಿ ಹೇಳಬೇಕೇನು? ನಾನು ಇಲ್ಲಿ ಏನು ಮಾಡಬೇಕು, ಏನು ಹೇಳುತ್ತೇನೆ ಮತ್ತು ಹೊರಗೆ ಏನು ಮಾಡಬೇಕು ಅದನ್ನು ಮಾಡುತ್ತೇನೆ. ಜನರ ಹತ್ತಿರ

ಹೋಗುತ್ತೇವೆ. ಆದರೆ, ನೀವು ಇದು ಅನ್ಯಾಯ ಎಂದು ಕಂಡುಬಂದಾಗ ಸರಿಯಲ್ಲ ಎಂದು ಕಂಡುಬಂದಾಗ ಅಥವಾ ಕಾನೂನುಬಾಹಿರ ಎಂದು ಕಂಡುಬಂದಾಗ ಅದನ್ನು ನೀವು ರೆಫರ್ ಮಾಡುವುದಿಲ್ಲ. ಅದಕ್ಕಾಗಿ ಈ ತುಂಡು ಗುತ್ತಿಗೆದಾರರಿಗೆ ಸುಮಾರು ಎರಡುನೂರು, ಮೂರುನೂರು ಕೋಟಿ ರೂಪಾಯಿಗಳ ಕೆಲಸವನ್ನು ಏನು ಕೊಟ್ಟಿದ್ದೀರಿ ಇದನ್ನು ನೀವು ರೆಫರ್ ಮಾಡಿ. ಎಷ್ಟು ಹಣ ಕೊಟ್ಟಿದ್ದೀರಿ ಮತ್ತು ಯಾವ ಕಾರಣಕ್ಕಾಗಿ ಕೇವಲ ಎರಡು ದಿವಸದಲ್ಲಿ ನೀವು ಸುಮಾರು ನೂರು ಕಂಟ್ರಾಕ್ಟರುಗಳಿಗೆ ಈ ಕೆಲಸವನ್ನು ಹಂಚಿದಿರಿ ಎನ್ನತಕ್ಕಂಥದ್ದನ್ನು ತಾವು ಸ್ಪಷ್ಟಪಡಿಸಬೇಕು. ಈ ಒಂದು ಸಂಶಯದಿಂದ ಮುಕ್ತರಾಗಬೇಕು ಎಂದರೆ ನೀವು ಇದನ್ನು ಲೋಕಾಯುಕ್ತಕ್ಕೆ ಕಳುಹಿಸಬೇಕು ಎನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇವೊತ್ತು ರಿಹೆಬಿಲಿಟೇಷನ್ ಪ್ರೋಗ್ರಾಂನಲ್ಲಿ ಬಾಗಲಕೋಟೆ ಟೌನ್ ಡೆವಲಪ್‌ಮೆಂಟ್‌ನಲ್ಲಿ ಏನು ಕಳಪೆ ಕೆಲಸ ನಡೆದಿದೆ, ಅಲ್ಲಿ ಏನು ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಹಾಗೂ Estimate escalation ಮಾಡಿ ಹತ್ತಾರು ಕೋಟಿ ರೂಪಾಯಿಗಳನ್ನು ಹೊಡೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ ಆ ಅಧಿಕಾರಿಗಳ ಬಗ್ಗೆ ರಿಪೋರ್ಟ್ ಕಳ್ಳುಹಿಸಿಕೊಟ್ಟಿದ್ದೀರೋ? ಕಳುಹಿಸಿದ್ದರೆ ಅವರು ಯಾವ ಅಧಿಕಾರಿಗಳು? ಅವರ ಮೇಲೆ ಏನು ಕ್ರಮವನ್ನು ಜರುಗಿಸಿದ್ದೀರಿ? ಎಷ್ಟು ಕೋಟಿ ರೂಪಾಯಿ ಸ್ಕ್ಯಾಂ ಆಗಿದೆ? ಇನ್ವಾಲ್ವ್ ಆಗಿದೆ ಎಂಬುದನ್ನು ಬಹಿರಂಗಪಡಿಸಬೇಕು. ಮುಳುಗಡೆ ಪ್ರದೇಶದಲ್ಲಿರತಕ್ಕಂಥ ಜನರಿಗೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಪತ್ರಿಕೆಯನ್ನು ನಾವು ನೋಡಿದಾಗ ಆ ಜನರ ಸ್ಥಿತಿ ಬಹಳ ಗಂಭೀರವಾಗಿದೆ. ಅವರಿಗೆ ಸಹಾಯ ಮಾಡತಕ್ಕ ಸ್ಥಿತಿಯಲ್ಲಿ ಅಥವಾ ಅವರಿಗೆ ಏನು ವಾರ್ ಫುಟಿಂಗ್‌ನಲ್ಲಿ ಸಹಾಯ ಮಾಡಬೇಕು, ಅದನ್ನು ನಿಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟ್ ಆಗಲಿ ಅಥವಾ ನಿಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟ್ ಆಗಲೀ ಅದರಲ್ಲಿ ಕೂಡ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಆ ರಿಪೋರ್ಟ್ ಕೂಡ ಈ ಸದನದ ಮುಂದೆ ಇಟ್ಟಿಲ್ಲ. ನಾವು ಎಕ್ಸ್‌ಪೆಕ್ಟ್ ಮಾಡಿದ್ದೆವು ಅಂದರೆ ಇಂತಹ ಒಂದು ದೊಡ್ಡ ಅನಾಹುತ ನಡೆದಾಗ ಸೋ ಮೋಟೋ ಅನೇಕ ಸಾರಿ ಸರ್ಕಾರದವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ಹಾಗೆ ಒಂದು ಸ್ಟೇಟ್‌ಮೆಂಟ್‌ನ್ನು ಕೂಡ ಮಾಡಲಿಲ್ಲ. ರಿಲೀಫ್ ಕೊಟ್ಟಿದ್ದೂ ಕೂಡ ಹೇಳಲಿಲ್ಲ. ಅದಕ್ಕಾಗಿ ಇದರ ಬಗ್ಗೆ ಸಂಪೂರ್ಣವಾಗಿ ಸ್ಟೇಟ್‌ಮೆಂಟ್ ಮಾಡಬೇಕು. ಉಳಿದಂತಹ ಲೋಪದೋಷಗಳ ಬಗ್ಗೆ ತಾವು ನೇರವಾಗಿ ಲೋಕಾಯುಕ್ತಕ್ಕೆ ಕಳುಹಿಸಿ ಇದರಲ್ಲಿ ನಿಮ್ಮ ಅಧಿಕಾರಿಗಳೂ ಕೂಡ ಮುಕ್ತವಾದ ಮನಸ್ಸಿನಿಂದ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಾನೂ ಕೂಡ ಸ್ಪಷ್ಟವಾಗಿ ಹೇಳಿದ್ದೇನೆ. ಯಾವ್ಯಾವ ಡೇಟಿಗೆ ಏನಾಗಿದೆ ಎನ್ನುವುದನ್ನು ತೋರಿಸಿಕೊಟ್ಟಿದ್ದೇನೆ. ಅದಕ್ಕೆ ದಯವಿಟ್ಟು ಈ ಕೆಲಸವನ್ನು ಅವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಅದಕ್ಕೆ ಅವರ ಉತ್ತರವನ್ನು ಕಾಯುತ್ತೇನೆ. ಯಾವ ರೀತಿಯಾಗಿ ಉತ್ತರ ಕೊಡುತ್ತಾರೆ ನೋಡೋಣ. ಅದಾದಮೇಲೆ ಮುಂದಿನ ಕ್ರಮ ಏನು ಮಾಡಬೇಕೋ ಮಾಡೋಣ.

+ ಶ್ರೀ ರಾಜಶೇಖರ್ ವಿ. ಶೀಲವಂತ್ (ಗುಳೇದಗುಡ್ಡ) : ಸನ್ಮಾನ್ಯ ಅಧ್ಯಕ್ಷರೇ ಈ 69ರ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲ ಚರ್ಚೆ ಮಾಡುವುದಕ್ಕೆ ತಾವು ನಮಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

1964ರಲ್ಲಿ ಆಗಿನ ಪ್ರಧಾನಿಗಳಾಗಿದ್ದಂತಹ ಸನ್ಮಾನ್ಯ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಅಮೃತ ಹಸ್ತದಿಂದ ಅಡಿಗಲ್ಲು ಪೂಜೆ ಆಗಿರತಕ್ಕ ಈ ಒಂದು ಆಲಮಟ್ಟಿ, ಈಗ ಅಂದಾಜು 33 ವರ್ಷಗಳು ಕಳೆದರೂ ಸಹ ಈ ಒಂದು ಕೆಲಸ ಸಂಪೂರ್ಣವಾಗಿಲ್ಲ. ಈ ಆಲಮಟ್ಟಿ ಡ್ಯಾಂನ ನೀರನ್ನು ಆ ಭಾಗದ ಜನತೆಗೆ ಉಪಯೋಗ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿಲ್ಲ ಎನ್ನತಕ್ಕದ್ದು ಬಹಳಷ್ಟು ಖೇದಕವಾಗಿ ವಿಚಾರವಾಗಿದೆ. ಈ ಸರ್ಕಾರ ಈ ಯೋಜನೆಗೆ ದುಡ್ಡನ್ನು ಕೂಡಿಸುವಂತಹ ವಿಚಾರಕ್ಕಾಗಿ 1994ರಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಬಾಂಡ್‌ಗಳನ್ನು ಮಾರಾಟ ಮಾಡುವುದರ ಮೂಲಕ ಹೆಚ್ಚಿನ ಒಂದು ಹೊರೆ ಬೀಳತಕ್ಕ ಹಣವನ್ನು ಕೂಡಿಸುವಂತಹ ವಿಚಾರ ಮಾಡಿದರು. 1995-96ರಲ್ಲಿ 180 ಕೋಟಿ ರೂಪಾಯಿಗಳು ಅದೇ ರೀತಿ 1996-97ರಲ್ಲಿ 509 ಕೋಟಿ ರೂಪಾಯಿಗಳು ಹಾಗೆಯೇ 1997-98ರಲ್ಲಿ 400 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿ ಅತ್ಯಂತ ಹೊರೆ ಬೀಳತಕ್ಕಂಥ, ಒಂದು ದುಡ್ಡನ್ನು ಕೂಡಿಸುವಂತಹ ಯೋಜನೆ ಹಾಕಿಕೊಂಡಿದ್ದು ಅಷ್ಟೊಂದು ಒಳ್ಳೆಯದಲ್ಲ ಎನ್ನುವಂತಹದ್ದು ಒಂದು ವಿಚಾರ. ಅದರ ಜೊತೆಗೆ ಈ ಒಂದು ದುಡ್ಡನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಮಾತ್ರ ಉಪಯೋಗಿಸಿರತಕ್ಕದ್ದು. ಸಮಗ್ರ ಕೃಷ್ಣಾ ಕೊಳವೆ ಯೋಜನೆಯಲ್ಲಿ 734 ಟಿಎಂಸಿ ನೀರು ಉಪಯೋಗ ಆಗಬೇಕಾದರೆ 6,600 ಕೋಟಿ ರೂಪಾಯಿ ಖರ್ಚು ಆಗುತ್ತದೆ ಎನ್ನುವಂತಹ ಅಂದಾಜು ಇದೆ. ಇದರ ಉಳಿದ ಒಂದು ಹಣದ ವ್ಯವಸ್ಥೆಯನ್ನು ಸರ್ಕಾರ ಯಾವ ರೀತಿ ಮಾಡುತ್ತಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕಾಗುತ್ತದೆ. ಅದರ ಜೊತೆಗೆ ಎಲ್ಲರೂ ಸಹಿತ ಇವತ್ತಿನ ದಿವಸ ಕೃಷ್ಣಾ ಜಲನಿಗಮದ ಬಗ್ಗೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆಯೇ ಹೆಚ್ಚಾಗಿ ಮಾತನಾಡತಕ್ಕದ್ದು. ಅದರ ಜೊತೆಗೆ ಕೃಷ್ಣಾ ಕೊಳ್ಳದ ಯೋಜನೆಯಲ್ಲಿ ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಗಳ ಬಗ್ಗೆ ಯಾರೂ ಸಹಿತ ಅಷ್ಟೊಂದು ವಿಚಾರವನ್ನು ಮಾಡುತ್ತಿಲ್ಲ. ಮುಖ್ಯವಾಗಿ ಈಗ ನೀರನ್ನು ಉಪಯೋಗಿಸಲಾಗುತ್ತಿದೆ. ಆದರೆ ಆ ಯೋಜನೆ ಯಾವ ಹಂತದಲ್ಲಿದೆ? ಅದರ ಮಹತ್ವ ಏನು ಎನ್ನತಕ್ಕದ್ದು ಇವತ್ತಿನ ದಿವಸ ಬಹಳಷ್ಟು ಹಿನ್ನೆಡೆಯಲ್ಲಿ ಉಳಿಯುತ್ತಿದೆ. ಒಟ್ಟು ಮಲಪ್ರಭಾ ಹಾಗೂ ಘಟಪ್ರಭಾ ಯೋಜನೆಯಲ್ಲಿ 140.89 ಟಿಎಂಸಿ ನೀರಿನ ಉಪಯೋಗ ಇದೆ ಎಂದರೆ ಅದೇನೂ ಸಣ್ಣ ವಿಚಾರ ಅಲ್ಲ. ಈ ಒಂದು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 173 ಟಿಎಂಸಿ ನೀರನ್ನು ನಾವು ಉಪಯೋಗಿಸಿದರೆ ಅದೇ ಮಲಪ್ರಭಾ ಹಾಗೂ ಘಟಪ್ರಭಾ ಕೂಡಿಸಿ 140.89 ಟಿಎಂಸಿ ನೀರು,ಅಂದರೆ ಸರಿ ಸಮಾನವಾದಂತಹ ಈ ಯೋಜನೆ ಬಗ್ಗೆ ಸರ್ಕಾರ ಏಕೆ ಇಷ್ಟೊಂದು ನಿರ್ಲಕ್ಷ್ಯ ತಾಳುತ್ತಿದೆ ಎನ್ನುವಂತಹದ್ದು. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಅದರ ಬಗ್ಗೆ ತಿಳಿಸಬೇಕು. ಮಲಪ್ರಭಾ ಯೋಜನೆಯಲ್ಲಿ 44.53 ಟಿಎಂಸಿ ನೀರನ್ನು ಎರಡು ಸಾವಿರ ಇಸವಿಯೊಳಗೆ ಪೂರೈಸಬೇಕಾಗಿರತಕ್ಕದ್ದು. ಈ ಬಚಾವತ್ ಆಯೋಗದ ಪ್ರಕಾರ ನಿಗದಿ ಆಗಿರತಕ್ಕದ್ದು. ಈಗ ನಾವು 33.55 ಟಿಎಂಸಿ ನೀರನ್ನು ಮಾತ್ರ ಅದರಲ್ಲಿ ಉಪಯೋಗಿಸುತ್ತಿದ್ದೇವೆ. ಆದರೆ, ಇನ್ನು ಮುಂದೆ 10.98 ಟಿಎಂಸಿ ನೀರನ್ನು ನಾವಿನ್ನೂ ಬಳಸಬೇಕಾಗಿದೆ. ಇದಕ್ಕೆ 603.56 ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ. ಈ ಪರಿಷ್ಕೃತ ದರದ ಪ್ರಕಾರ ಇಲ್ಲಿಯವರೆಗೆ 414.51 ಕೋಟಿ ರೂಪಾಯಿಗಳು ಮಾರ್ಚ್ 1997ರವರೆಗೆ ಖರ್ಚು ಮಾಡಿರತಕ್ಕದ್ದು. ಇನ್ನೂ

ಅಂದಾಜು 189.5 ಕೋಟಿ ರೂಪಾಯಿಗಳು ಬೇಕಾಗಬಹುದು. ಆದರೆ 1997-98ಕ್ಕೆ 70 ಕೋಟಿ ರೂಪಾಯಿ ಅಂದಾಜು ಇನ್ನೂ ಕಡಿಮೆ ಬೀಳತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಅದೇ ರೀತಿ ಮಲಪ್ರಭಾ ಬಲದಂಡೆ ಕಾಲುವೆಯಲ್ಲಿ 138 ಕಿಲೋ ಮೀಟರ್ ಆಗಬೇಕಾಗಿದೆ. ಇಲ್ಲಿಯವರೆಗೆ 108 ಕಿಲೋ ಮೀಟರ್ ಮಾತ್ರ ಕೆಲಸ ಆಗಿದೆ. ಇನ್ನೂ ಅಂದಾಜು 30 ಕಿಲೋ ಮೀಟರ್ ಕೆಲಸ ಆಗಬೇಕಾದ್ದು ಸಂಪೂರ್ಣವಾಗಿ ನೆನೆಗುದಿಗೆ ಬಿದ್ದಿರುವುದು ಸಹ ಕಂಡು ಬರುತ್ತಾ ಇದೆ. ಎಡದಂಡೆ ಕಾಲುವೆ 168 ಕಿಲೋಮೀಟರ್ ಆಗಬೇಕಾಗಿದೆ. ಇಲ್ಲಿಯವರೆಗೆ 124 ಕಿಲೋಮೀಟರ್ ಆಗಿ 41 ಮೀಟರ್ ಕೆಲಸ ಇನ್ನೂ ಮುಂದೆ ಆಗಬೇಕಾಗಿದೆ. ಮುಖ್ಯವಾಗಿ ನನ್ನ ಭಾಗಕ್ಕೆ ಇದು ಸಂಬಂಧಪಡುವುದರಿಂದ ಬಾದಾಮಿ ತಾಲ್ಲೂಕಿನಲ್ಲಿ ಇದೀಗ ಕೆಲಸ ಶುರು ನಡೆದಿದೆ. ಅದೇ ರೀತಿ ಬಲದಂಡೆ ಕಾಲುವೆ ಕೆಲಸ, ರೋಣ ತಾಲ್ಲೂಕಿನಲ್ಲಿ ಸಹ ಕೆಲಸ ನಡೆದಿದೆ. ಅಲ್ಲಿ ಏನು ತಾವು ವಿಶೇಷ ಭೂ ನ್ಯಾಯ ಅಧಿಕಾರಿಗಳನ್ನು ನೇಮಿಸಿದ್ದೀರಿ, ಅವರದ್ದು ಒಂದು ರೀತಿಯಿಂದ ದೊಡ್ಡ ಸಮಸ್ಯೆ. ನನ್ನ ಭಾಗದಲ್ಲಿ ಸಾಕಷ್ಟು ಹೊಲಗಳಲ್ಲಿ ಈಗಾಗಲೇ ಕಾಲುವೆ ಕೆಲಸ ನಡೆದಿದ್ದು ಹಿಂದೆ ಆಗಿರತಕ್ಕದ್ದು. ಯಾವುದೇ ರೀತಿಯಿಂದ ಪರಿಹಾರವನ್ನು ಸ್ವಲ್ಪವೂ ಸಹಿತ ಕೊಟ್ಟಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಜಿ.ಎಸ್. ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇದರ ಸಲುವಾಗಿ ಅಲ್ಲಿಯ ಜನರು ಆ ಭಾಗದ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ಈ ಎಸ್.ಎಲ್.ಓ. ಅವರು ಆಫೀಸ್ ಸವದತ್ತಿಯಲ್ಲಿರುವುದರಿಂದ ನಮಗೆ ಯಾವುದೇ ತರಹದ ಸಂಬಂಧಗಳು ಅಲ್ಲಿ ಬರುವ ಹಾಗೆ ಇಲ್ಲ. ಬಾದಾಮಿ ಹಾಗೂ ರೋಣ ತಾಲ್ಲೂಕುಗಳು 20-25 ಕಿಲೋ ಮೀಟರ್ ದೂರದ ಅಂತರದಲ್ಲಿರುವುದರಿಂದ ಬಾದಾಮಿಯಲ್ಲಿ ಆ ಒಂದು ಆಫೀಸನ್ನು ಮಾಡಿದರೆ ಸಾಕಷ್ಟು ಕೆಲಸ ಕಾರ್ಯಗಳು ಬೇಗನೆ ಆಗತಕ್ಕದ್ದು. ಎರಡು ಸಾವಿರ ಇಸವಿಯೊಳಗೆ ಈಗೇನು ಕೃಷ್ಣಾ ಕಣಿವೆಯ 734 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಇದು ಆಗುವಲ್ಲಿ ಅದೂ ಸಹ ಅಲ್ಲಿ ಅನುಕೂಲ ಮಾಡಿಕೊಡಬಹುದು. ಅದಕ್ಕೆ ಮಾನ್ಯ ನೀರಾವರಿ ಮಂತ್ರಿಗಳು ಇದರ ಬಗ್ಗೆ ಸಹ ತಮ್ಮ ಒಂದು ಉತ್ತರದಲ್ಲಿ ಸ್ಪಷ್ಟವಾಗಿ ಆಫೀಸನ್ನು ಬದಲಾವಣೆ ಮಾಡುವುದರ ಮೂಲಕ, ಚುರುಕಾಗಿರತಕ್ಕಂಥ ಅಧಿಕಾರಿಗಳನ್ನು ಹಾಕುವುದೇ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು ಇದರಂತೆ ಈ ಘಟಪ್ರಭಾ ಯೋಜನೆಯಲ್ಲಿ 79 ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳಬೇಕಾಗಿದೆ. ಈಗ 42.57 ಟಿಎಂಸಿ ನೀರನ್ನು ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆ. ಎರಡು ಸಾವಿರ ಇಸವಿಯೊಳಗಾಗಿ 36.43 ಟಿಎಂಸಿ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ಈಗ ನಾವು 36.43 ಟಿಎಂಸಿ ನೀರನ್ನು ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವಂತಹದ್ದು ಸಾಕಷ್ಟು ಸಮಸ್ಯೆಯಾಗಿ ಕಾಣುತ್ತಿದೆ. ಏಕೆಂದರೆ 800 ಕೋಟಿರೂಪಾಯಿಗಳ ಅಂದಾಜು ನಿಗದಿ ಪಡಿಸಲಾಗಿದ್ದು ಇಲ್ಲಿಯವರೆಗೆ 274.11 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನು 525.89 ಕೋಟಿ ರೂಪಾಯಿಗಳ ಈ ಒಂದು ಯೋಜನೆ ಮುಗಿಸುವ ಸಲುವಾಗಿ ಬೇಕಾಗುತ್ತದೆ.

ಈ ವರ್ಷ ತಾವು 31.30 ಕೋಟಿ ರೂಪಾಯಿಗಳ ಹಣವನ್ನು ಈ ಒಂದು ಯೋಜನೆಯ ಸಲುವಾಗಿ ಕಾಯ್ದಿರಿಸಿದ್ದೀರಿ. ಆದರೆ ಈ ವರ್ಷಕ್ಕೆ ಕನಿಷ್ಠ ಇನ್ನೂ 100 ಕೋಟಿ ರೂಪಾಯಿ ಆದರೂ ಬೇಕಾಗುತ್ತದೆ. ಇದರ ವ್ಯವಸ್ಥೆ ಏನು? ಇನ್ನು ಮುಂದೆ ಬರತಕ್ಕಂಥ ಈ 425.89 ಕೋಟಿ ರೂಪಾಯಿಗಳ ಯೋಜನೆ ಸಂಪೂರ್ಣ ಮಾಡಿಸಲು ಬೇಕಾದಂತಹ ದುಡ್ಡಿನ ವ್ಯವಸ್ಥೆ ಏನು? ಏಕೆಂದರೆ ಸ್ವಲ್ಪ ದುಡ್ಡಲ್ಲ. ಅತ್ಯಂತ ಹೆಚ್ಚಿನ ಪ್ರಮಾಣದ ದುಡ್ಡು ಇಲ್ಲಿ ಬೇಕಾಗುತ್ತದೆ. ಇಲ್ಲೂ ಸಹ ಸರ್ಕಾರದ ಅಲಕ್ಷ್ಯ ಇದೆ ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇನ್ನು ಮುಂದೆ ಬಾಗಲಕೋಟೆ ಮುಳುಗಡೆ ಬಗ್ಗೆ ಒಂದೆರಡು ವಿಚಾರಗಳನ್ನು ತಿಳಿಸಬೇಕು ಎನ್ನುವ ವಿಚಾರ ಇದೆ. ಬಾಗಲಕೋಟೆಯ ಸುತ್ತಮುತ್ತಲೂ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಿರತಕ್ಕ ಆಲಮಟ್ಟಿ ಯೋಜನೆಯಿಂದ ಮುಳುಗಡೆ ಆಗತಕ್ಕ ಹಳ್ಳಿಗಳು 154, ಅಂದಾಜು ಎರಡು ಸಾವಿರ ಎಕರೆ ಭೂಮಿ ಅಲ್ಲಿ ಮುಳುಗಡೆ ಆಗುತ್ತದೆ ಎನ್ನುವಂಥಹದ್ದು. ಈಗಾಗಲೇ ಅಂದಾಜು ಒಂದು ಲಕ್ಷ ಎಕರೆ ಭೂಮಿಗೆ ಯಾವುದೇ ತರಹದ ಪರಿಹಾರ ಕ್ರಿಯೆಗಳು ಶುರವಾಗಿಲ್ಲ. ಅದನ್ನೂ ಸಹ ಸರ್ಕಾರ ಅತ್ಯಂತ ತೀವ್ರವಾಗಿ ಮಾಡಸಬೇಕು ಎನ್ನುವಂತಹದ್ದು. ಏಶಿಯಾದಲ್ಲಿ ನೀರಾವರಿಗಾಗಿ ಮುಳುಗಡೆ ಆಗಿರತಕ್ಕಂಥ ನಗರಗಳಲ್ಲಿ ಬಾಗಿಲು ಕೋಟೆಯೇ ಅತ್ಯಂತ ದೊಡ್ಡದು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವಂಥಹದ್ದನ್ನು ತಮ್ಮ ಮೂಲಕ ನೀರಾವರಿ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

(ಮಾನ್ಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಮನಿಯವರು
ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈಗಾಗಲೇ 65ರಿಂದ 70 ಮನೆಗಳಿಗೆ ನೀರು ನುಗ್ಗುತ್ತಿದೆ. ಇದು ತಮ್ಮ ಗಮನಕ್ಕೆ ಏಕೆ ಬಂದಿಲ್ಲವೆಂದು ಪ್ರಶ್ನೆ ಮಾಡುತ್ತಿದ್ದೇನೆ. ಜೊತೆಗೆ ಬಾಗಲಕೋಟೆಯಲ್ಲಿ ಪರಿಹಾರ ಕೊಡುವಾಗ ಸಾಕಷ್ಟು ಸಮಸ್ಯೆಯಾಗಿದೆ. ಅದನ್ನು ತೀವ್ರವಾಗಿ ಪರಿಗಣಿಸಿ ಮುಗಿಸಬೇಕು ಏಕೆಂದರೆ ಒರಿಸ್ಸಾದಲ್ಲಿ ನಡೆದ ಒಂದು ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಅನುಮತಿ ಇಲ್ಲದ ಕಟ್ಟಡಗಳಿಗೆ ಪರಿಹಾರ ಕೊಡಲು ಆಗುವುದಿಲ್ಲವೆಂದು ತಿಳಿಸಿದ್ದಾರೆ. 1984ರಲ್ಲಿ ನವನಗರವನ್ನು ನಿರ್ಮಾಣ ಮಾಡಲಿಕ್ಕೆ ಯೋಜನೆ ಶುರು ಮಾಡಬೇಕಾಗಿತ್ತು. ಆದರೆ ಕೆಲಸಗಳು ಆಗ ಶುರುವಾಗಲಿಲ್ಲ. ಅಲ್ಲಿಂದ ಇಲ್ಲಿಯವರೆಗೆ ಅಲ್ಲಿಯ ಜನ ಯಾವರೀತಿಯಾಗಿ ಜೀವನ ನಡೆಸಬೇಕು? ಸಂಸಾರ ಅಂದಮೇಲೆ ದಿನದಿಂದ ದಿನಕ್ಕೆ ಜನ ಜಾಸ್ತಿ ಆಗುತ್ತಾರೆ. ಅವಶ್ಯಕತೆಗೆ ತಕ್ಕಂತೆ ಹೆಚ್ಚಿಗೆ ಜಾಗ ಬೇಕಾಗುತ್ತದೆ. ಮನೆ ಮುಂದೆ ಅಂಗಡಿ ಜಾಗ ಇರಬಹುದು, ಇರಲಿಕ್ಕೆ ಸಣ್ಣ ಕೊಠಡಿ ಇರಬಹುದು, ದನಕರುಗಳನ್ನು ಕಟ್ಟಲಿಕ್ಕೆ ಶೆಡ್ ಮಾಡಿಕೊಂಡಿರಬಹುದು. ಇಂತಹ ಸೌಕರ್ಯಗಳಿಗಾಗಿ 15 ವರ್ಷಗಳಿಂದ ಅವರು ಕಟ್ಟಡಗಳನ್ನು ಬೆಳೆಸಿಕೊಂಡಿದ್ದಾರೆ. ಅದನ್ನು ಕಾನೂನು ಮತ್ತು ಮಾನವೀಯತೆ ದೃಷ್ಟಿಯಿಂದ ನೋಡಬೇಕೇ ಹೊರತು ಕಾನೂನು ಚೌಕಟ್ಟಿನಲ್ಲಿ ಅವರನ್ನು ಅಲ್ಲಿಂದ ಬಿಡಿಸಿ ಪುನರ್ವಸತಿ ಕೇಂದ್ರಗಳಿಗೆ ಹೋಗಿ ಎಂದರೆ ಅಲ್ಲಿ ಯಾವರೀತಿಯಿಂದ ಅವರು ಬದುಕಬೇಕು? ಅಲ್ಲಿ ವ್ಯವಸ್ಥೆಗಳನ್ನು

ಕೊಡದೇ ಹೋದರೆ ಯಾವರೀತಿ ಅಲ್ಲಿ ಬಾಳುವೆ ಮಾಡಬಹುದೆಂಬುದನ್ನು ಸಚಿವರು ಸ್ಥೂಲವಾಗಿ ವಿಚಾರ ಮಾಡಿ ಮಾನವೀಯತೆ ದೃಷ್ಟಿಯಿಂದ ನಿರ್ಣಯ ಕೊಡಬೇಕು. ಈಗಾಗಲೇ1979-80ರಿಂದ ಭೂಸ್ವಾಧೀನ ಪ್ರಕ್ರಿಯೆ ಆ ಭಾಗದಲ್ಲಿ ಶುರು ಆಯಿತು. ಅಧ್ಯಕ್ಷರೇ 1994-95ರ ಅವಧಿಗೆ ಅಲ್ಲಿಗೆ ನೀರು ಬರುತ್ತಾ ಇದೆ. ಅಂದರೆ ಸುಮಾರು 15 ವರ್ಷಗಳ ಕಾಲ ಅಲ್ಲಿಗೆ ನೀರು ಬರಲಿಲ್ಲ. ಒಂದು ಸಣ್ಣ ಉದಾಹರಣೆ ಹೇಳಬಯಸುತ್ತೇನೆ. ಈ ಭಾಗದಲ್ಲಿ ಜನಕ್ಕೆ ಯಾವರೀತಿ ಆಗಿದೆ ಅಂದರೆ ಹೊಲದಲ್ಲಿ ಒಬ್ಬ ವ್ಯಕ್ತಿ ಕುರಿಗಳನ್ನು ಕಾಯುತ್ತಿದ್ದ. ಕಾಯುವಾಗ ತೋಳಬಂತು ತೋಳ ಎಂದು ಜೋರಾಗಿ ಅವ ಕೂಗಿದ ಸುತ್ತಮುತ್ತ ಕೆಲಸ ಮಾಡುತ್ತಿದ್ದ ಹಳ್ಳಿ ಕಾರ್ಮಿಕರು ಆ ಜಾಗಕ್ಕೆ ಬಂದು ನೋಡಿದಾಗ ಅವರ ಕಡೆ ನೋಡಿ ನಕ್ಕು ಒಂದು ತರಹ ಹಾಸ್ಯ ಮಾಡಿದ. ಆದರೆ ಆಮೇಲೆ ನಿಜವಾದ ತೋಳ ಬಂದಾಗ ಆ ವ್ಯಕ್ತಿ ತೋಳ ಬಂತು ತೋಳ ಎಂದು ಹೇಳಿದರೂ ಕೂಡ ಯಾವ ಜನರು ಅವನ ಸಹಾಯಕ್ಕೆ ಬರಲಿಲ್ಲ. ಹಾಗೆಯೇ ಇಷ್ಟು ದಿವಸ ಸರ್ಕಾರ ಈ ಭಾಗದಲ್ಲಿ ತೋಳ ಬಂತು ತೋಳ ಎಂದು ಹೇಳುತ್ತಾ ಬಂದಿದೆಯೇ ಹೊರತು 15 ವರ್ಷ ಕಳೆದರೂ ತೋಳ ಬರಲಿಲ್ಲ. ಈಗ ತೋಳ ಬಂದಿದೆ ಬರುತ್ತದೆ ಎನ್ನುವ ವಿಶ್ವಾಸ ಯಾವ ಜನರಿಗೂ ಇರಲಿಲ್ಲ. ಹೀಗೆ ತೋಳ ನುಗ್ಗಿದಂತೆ ನೀರು ಇವತ್ತು ಮನೆಗೆ ನುಗ್ಗಿದೆ ಈ ಬಗ್ಗೆ ನಿಜವಾಗಿಯೂ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ಹಳ್ಳಿಗಳಲ್ಲೂ ಇದಕ್ಕಿಂತ ಗಂಭೀರವಾದ ಪರಿಸ್ಥಿತಿ. ಪಂಚಾಯಿತಿಯಲ್ಲಿ ದಾಖಲು ಮಾಡದೆ ಕಟ್ಟಡ ಕಟ್ಟುವುದು ಹಳ್ಳಿಗಳಲ್ಲಿ ಹೆಚ್ಚುಕಡಿಮೆ ನಡೆಯುತ್ತಾ ಇರುತ್ತವೆ. ಅಲ್ಲಿ ದಾಖಲಾದ ಕಟ್ಟಡಗಳಿಗೂ ಸಹಿತ ಪರಿಹಾರ ಪ್ರಕ್ರಿಯೆ ಶುರುಮಾಡಿಲ್ಲ. ಇವತ್ತು ಗೋವಾ ಉಡುಪಿ ಕಡೆಗಳಲ್ಲಿ ಕೆಲಸ ಮಾಡುವ ಬಡ ಜನರಿಗೆ ಅವರ ಪರ್ಮಿಶನ್ ತೆಗೆದುಕೊಳ್ಳಲಾರದೆ ಇಲ್ಲಿ ಯಾರೋ ಹುಡುಗರು ಕಟ್ಟಿಸಿರುತ್ತಾರೆ, ಮನೆಯೊಳಗೆ ಇರುವ ಹಾಗಿಲ್ಲ, ಅವಾಗ ಸರ್ವೆ ಮಾಡುವುದಕ್ಕೆ ಬಂದಿರುತ್ತಾರೆ ಇಂಥ ಸಣ್ಣ ಸಮಸ್ಯೆಗಳನ್ನು ದೊಡ್ಡದು ಮಾಡಿ ಪರಿಹಾರ ಕೊಡುವುದಿಲ್ಲವೆಂದು ಮಾತಾಡಿದರೆ ಪಾಪ ನಿಜಕ್ಕೂ ಆ ಜನ ಎಲ್ಲಿಗೆ ಹೋಗಬೇಕೆಂಬ ಪರಿಸ್ಥಿತಿಯಲ್ಲಿದ್ದಾರೆ. ಇದನ್ನು ಮಾನವೀಯತೆಯಿಂದ ನೋಡುವುದು ನಿಮ್ಮ ಸರ್ಕಾರಕ್ಕೆ ಬಂದರೆ ಆ ಭಾಗದ ಜನ ಬಹಳಷ್ಟು ತಮ್ಮನ್ನು ಹೊಗಳುತ್ತಾರೆ ಅದರ ಜೊತೆಗೆ ಪುನರ್ವಸತಿ ಕೇಂದ್ರಗಳ ಬಗ್ಗೆ ಈಗಾಗಲೇ ವಿರೋಧಪಕ್ಷದ ನಾಯಕರು ಹೇಳಿದ್ದಾರೆ, ಆ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ ಆ ಪುನರ್ವಸತಿ ಕೇಂದ್ರಕ್ಕೆ ಸನ್ಮಾನ್ಯ ಯಡಿಯೂರಪ್ಪನವರ ಜೊತೆ ನಾವೂ ಭೇಟಿ ಕೊಟ್ಟಿದ್ದೆವು. ಆದರೆ ಆ ಕೇಂದ್ರಗಳಿಗೆ ವಿದ್ಯುತ್ ವ್ಯವಸ್ಥೆ ಇರಲಿಲ್ಲ. ನಾವು ಹೋಗಿದ್ದುದು ಬೆನ್ನೂರು, ಸಿರುಗುಪ್ಪಿ ಕೇಂದ್ರಗಳಿಗೆ ವಿದ್ಯುತ್ ವ್ಯವಸ್ಥೆ ಏಕೆ ಇಲ್ಲವೆಂದು ನಾವು ಕೇಳಿದಾಗ ಅಲ್ಲಿದ್ದ ಅಧಿಕಾರಿಗಳು ಏನೆಂದು ಉತ್ತರಿಸಿದರು ಅಂದರೆ ವಿದ್ಯುತ್ ಲೈನ್ ಸಹಿತ ಮುಳುಗಡೆ ಒಳಗೆ ಬಂದಿದೆ ಅದಕ್ಕೆ ಕಟ್ ಮಾಡಿದ್ದೇವೆ ಎಂದರು. ಒಂದು ಪ್ರಶ್ನೆ ಕೇಳಲು ಇಲ್ಲಿ ಇಚ್ಛಿಪಡುತ್ತಿದ್ದೇನೆ. ವಿದ್ಯುತ್ ಲೈನ್ ಮುಳುಗಡೆ ಒಳಗೆ ಬರುತ್ತದೋ, ಇಲ್ಲವೋ ಎಂದು ಮೊದಲೇ ತಿಳಿದಿರಲಿಲ್ಲವೇ ಎಂದು. ಆ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಸಹ ಇಲ್ಲ ಎಂದರೆ ತಾವು ವ್ಯವಸ್ಥೆ ಮಾಡದೇ ಇದ್ದರೂ ಅಜುಬಾಜು ಹೊಲಗಳಲ್ಲಿದ್ದ ಬೋರ್‌ವೆಲ್‌ಗಳನ್ನು ಚಾಲೂ ಮಾಡಿ

ಅವರು ನೀರು ಪಡೆಯಬಹುದು. ಅದಕ್ಕೆ ತಾವು ವಿದ್ಯುತ್ ಕೊಡುವುದಿಲ್ಲ ಅಂದರೆ ಆ ಜನ ಯಾವರೀತಿ ಬದುಕಬೇಕು? ಆ ಜನರು ನೀರು ಬಳಸುವ ಸ್ಥಳ ನೋಡಿದರೆ ಅದರಲ್ಲಿ ಕೈ ಅದ್ದುವುದಕ್ಕೂ ಅಸಹ್ಯ ಅನಿಸುವಷ್ಟು ಪರಿಸ್ಥಿತಿ ಇತ್ತು. ಪಾಪ, ಮುಂದಿನ ಜನಾಂಗ ಒಳ್ಳೆಯ ನೀರು ಪಡೆಯಲಿ ಎಂಬ ತ್ಯಾಗಮನೋಭಾವದಿಂದ ರೈತ ತನ್ನ ಹೊಲ ಮನೆಗಳನ್ನು ಬಿಟ್ಟು ಪುನರ್ವಸತಿ ಕೇಂದ್ರಗಳಿಗೆ ಬಂದಾಗ ಅವರಿಗೆ ಯಾತನೆ ಕೊಟ್ಟಿದ್ದೇವೆಯೇ ಹೊರತು ಅನುಕೂಲತೆಗಳನ್ನು ಕೊಟ್ಟಿಲ್ಲ. ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ 15 ವರ್ಷಗಳ ಕಾಲ ಏನು ತೋಳ ಬಂತು ತೋಳ ಎಂದು ಹೇಳಿದಂತೆ ಆ ರೈತ ಇವತ್ತು ಅಲ್ಲೇ ಇದ್ದಾನೆ. ಇವತ್ತು ನಿಜಕ್ಕೂ ತೋಳ ಬಂದಿರುವುದು ಗೊತ್ತಾಗಿದೆ. ಆದ್ದರಿಂದ ದಯವಿಟ್ಟು ಈ ಜನರಿಗೆ ಅತ್ಯಂತ ಅನುಕೂಲ ಮಾಡಿಕೊಟ್ಟು ಆ ಭಾಗದ ಜನ ಶಾಪ ಹಾಕುವುದನ್ನು ಬಿಟ್ಟು ಸರ್ಕಾರವನ್ನು ಹೊಗಳುವಂತೆ ಮಾಡಬೇಕೆಂದು ಮಾನ್ಯ ನೀರಾವರಿ ಸಚಿವರಲ್ಲಿ ಮತ್ತೊಮ್ಮೆ ಕೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ ಯತ್ನಾಳ್ (ಬಿಜಾಪುರ) : ಅಧ್ಯಕ್ಷರೇ, 69ರ ನಿಯಮದಡಿ ಉತ್ತರ ಕರ್ನಾಟಕದ ಈ ದೇಶದ ಅತ್ಯಂತ ದೊಡ್ಡ ಆಲಮಟ್ಟಿ ನೀರಾವರಿ ಯೋಜನೆ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಬಿಜಾಪುರ ಜಿಲ್ಲೆಗೆ ಆಲಮಟ್ಟಿಯಿಂದ ಸ್ವಲ್ಪ ಮಟ್ಟಿನ ನೀರಾವರಿ ಪಡೆಯುವ ಅವಕಾಶ ಬಂದಿದೆ. ಇವತ್ತಿನ ಬಿಜಾಪುರ ಜಿಲ್ಲೆ ಆಗಸ್ಟ್ 15ರಿಂದ ಎರಡು ಜಿಲ್ಲೆಗಳಾಗಿ ಒಡೆದು ಹೋಗುವ ಸಂದಿಗ್ಧ ಪರಿಸ್ಥಿತಿಯಲ್ಲಿ ಭೌಗೋಳಿಕವಾಗಿ ಇಡೀ ದೇಶದಲ್ಲೇ ಇದು ದೊಡ್ಡ ಜಿಲ್ಲೆ. ಹೊಸ ಜಿಲ್ಲೆ ರಚನೆಯಾದ ಮೇಲೆ ಬಿಜಾಪುರದ ಭಾಗದಲ್ಲಿ ಉಳಿಯುವ ತಾಲ್ಲೂಕುಗಳು ಸಂಪೂರ್ಣ ಬರಪೀಡಿತ ಪ್ರದೇಶದ ಜಿಲ್ಲೆಯಾಗುಳಿಯುತ್ತದೆ. ಇಂಥ ಆತಂಕ ಪರಿಸ್ಥಿತಿಯಲ್ಲಿ ಬಿಜಾಪುರದ ಜನತೆ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಚೀನಾಯುದ್ಧ ಸಂದರ್ಭದಲ್ಲಿ ಸುವರ್ಣದಿಂದ ತೂಗಿ ಈ ದೇಶದ ರಕ್ಷಣೆಗಾಗಿ ದೇಶಭಕ್ತಿ ತೋರಿಸಿದ ಒಂದು ದೊಡ್ಡ ಹೆಮ್ಮೆಯ ಜಿಲ್ಲೆ ಎಂದು ಹೇಳಬಯಸುತ್ತೇನೆ. ಆದರೆ ದೇಶಕ್ಕೇ ತನ್ನನ್ನು ಸಮರ್ಪಣೆ ಮಾಡಿಕೊಂಡ ಈ ಜಿಲ್ಲೆಗೆ ದೇಶದಲ್ಲಿ ಈ ರಾಜ್ಯದಲ್ಲಿ ಆಡಳಿತ ಮಾಡಿದ ಸರ್ಕಾರಗಳು ಎಷ್ಟು ಸಹಾಯ ಮಾಡಿದವು? ಎಂಬ ಮುಖ್ಯ ಪ್ರಶ್ನೆ ನಮ್ಮ ಮುಂದಿದೆ. 1964ರ ಅಂದಿನ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಗಳ ಅಮೃತಹಸ್ತದಿಂದ ಉತ್ತರ ಕರ್ನಾಟಕದ ಗುಲ್ಬರ್ಗ ಇರಬಹುದು, ಬೀದರ್ ಇರಬಹುದು, ರಾಯಚೂರು ಇರಬಹುದು. ಬಿಜಾಪುರದ ಈ ಭಾಗದ ಜನರಿಗೆ ನೀರಾವರಿ ಯೋಜನೆಯಿಂದ ಐದು ನದಿಗಳು ಹರಿಯುವ ಪಂಜಾಬಿನಂತೆ ಕರ್ನಾಟಕದ ಬಿಜಾಪುರ ಸಮೃದ್ಧ ನಾಡಾಗಬಹುದೆಂಬ ಕನಸು ಕಂಡಿದ್ದರು. ಆದರೆ ಆ ಕನಸು ಇವತ್ತು ನನಸಾಗಿದೆಯೇನೋ ಎಂಬ ಪ್ರಶ್ನೆ ನಮ್ಮ ಮುಂದೆ ಕಾಣುತ್ತಿದೆ.

11.50 ಎ.ಎಂ

ಅಲಮಟ್ಟಿ ನೀರಾವರಿ ಯೋಜನೆ ಪ್ರಾರಂಭ ಆದಾಗಿನಿಂದ ಹಿಡಿದು, ಇದು ಭ್ರಷ್ಟಾಚಾರದ ಒಂದು ಕೂಸಾಗಿ ಇವತ್ತು ಪರಿವರ್ತನೆಗೊಂಡಿದೆ. ಅಲ್ಲಿ ಬಂದಂತಹ ಅಧಿಕಾರಿಗಳು ಈ ಒಂದು ಯೋಜನೆಯಲ್ಲಿ 106 ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದರು. ಆದರೆ ಸರ್ಕಾರದವರು ಹೇಳುತ್ತಾ ಇದ್ದಾರೆ 1961-68ರಿಂದ 1994-95ರವರೆಗೆ ಒಂದು ಸಾವಿರದ ಮೂರು ನೂರು ನಲವತ್ತೇಳು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆವೆಂದು 1995ರಿಂದ ಇಲ್ಲಿಯವರೆಗೆ ಒಂದು ಸಾವಿರದ ನೂರು ಎಂಭತ್ತೆರೆಡು ಕೋಟಿ ರೂಪಾಯಿಗಳನ್ನು ಒಟ್ಟು ಎರಡು ಸಾವಿರದ ಐದು ನೂರು ಇಪ್ಪತ್ತೊಂಭತ್ತು ಕೋಟಿ ರೂಪಾಯಿಗಳನ್ನು ನಾವು 33 ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ ಎಂದು ಭಾರಿ ನೀರಾವರಿ ಸಚಿವರಾದಂತಹ ಸನ್ಮಾನ್ಯ ಶ್ರೀ ನಾಗೇಗೌಡರು ಮೊನ್ನೆ ಪತ್ರಿಕಾ ಘೋಷ್ಠಿಯಲ್ಲಿ ಹೇಳಿದರು. ಅದರ ಅಂಕಿ ಅಂಶಗಳನ್ನು ನೋಡಿದಾಗ ಇವತ್ತು ನಾವು ಸ್ವಾತಂತ್ರ್ಯದ ಸುವರ್ಣ ಮಹೋತ್ಸವನ್ನು ಆಚರಿಸುತ್ತಾ ಇದ್ದೇವೆ. ಜನರ ಕಲ್ಯಾಣಕ್ಕಾಗಿ ಯಾವ ನೀರಾವರಿ ಯೋಜನೆ ಹಮ್ಮಿಕ್ಕೊಳ್ಳಲಾಗಿತ್ತೋ ಆ ಯೋಜನೆ ಯಶಸ್ವಿ ಆಗಿದೆಯೇ? ಎನ್ನುವುದನ್ನು ಇವತ್ತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಿಜಾಪುರ ಜಿಲ್ಲೆಗೆ ಅನುಕೂಲ ಆಗುವಂತಹ ನೀರಾವರಿ ಯೋಜನೆಗಳು ಸಂಪೂರ್ಣವಾಗಿ ಸ್ಥಗಿತ ಆಗಿವೆ. ಈಗಾಗಲೇ ಇಂಡಿ ಕಾಲುವೆ ಕಾಮಗಾರಿ ಸಂಪೂರ್ಣವಾಗಿ ನಿಂತು ಹೋಗಿದೆ. ಇನ್ನು 22 ಕಿ.ಮೀ. ಅಷ್ಟು ಸರ್ವೇ ಕಾರ್ಯ ಪ್ರಾರಂಭ ಆಗಿಲ್ಲ. ಬಹಳಷ್ಟು ಕಳಪೆ ಮಟ್ಟದಲ್ಲಿ ಕೆಲಸ ನಡೆಯುತ್ತಾ ಇದೆ. ಉಪಾಧ್ಯಕ್ಷರೇ, ಕೆಲವೊಂದು ಸಂಘಟನೆಗಳು ತಲೆ ಎತ್ತುತ್ತಾ ಇರುವುದು ಬಹಳ ದುರ್ದೈವದ ಸಂಗತಿ. ಯಾವ ನೀರಾವರಿ ಯೋಜನೆ ಆಗಬೇಕು, ಅದರ ಸಲುವಾಗಿ ಹೋರಾಟ ಮಾಡುತ್ತೇವೆ ಎಂದು ಕೆಲವು ಸಂಘಟನೆಗಳು ತಲೆ ಎತ್ತಿ,ಅಲ್ಲಿರುವಂತಹ ಗುತ್ತಿಗೆದಾರರನ್ನು ಮತ್ತು ಅಲ್ಲಿರುವಂತಹ ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡಿಕೊಂಡು, ಅವರು ಮಾಡುತ್ತಿರುವಂತಹ ಕೆಲಸದಲ್ಲಿ ಅಡ್ಡಗಾಲು ಹಾಕಿಕೊಂಡು ಕೇವಲ ಹಣವನ್ನು ಎತ್ತುವಂತಹ ಕೆಲಸ ಇವತ್ತು ನಮ್ಮ ಭಾಗದಲ್ಲಿ ನಡೆಯುತ್ತಿರುವುದು ಬಹಳ ದುರ್ದೈವದ ಸಂಗತಿ. ಮಾನ್ಯ ಅಧ್ಯಕ್ಷರೆ, ಇಂತಹ ಒಂದು ಪರಿಸ್ಥಿತಿಯಲ್ಲಿ ಕೆಲವು ತಿಂಗಳ ಹಿಂದೆ ನಮ್ಮ ಜಿಲ್ಲೆಗೆ ಎಷ್ಟೊಂದು ಅನ್ಯಾಯ ಆಗುತ್ತಿದೆ ಎನ್ನುವುದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ನಾನು ಕಳೆದ ಅಧಿವೇಶನದಲ್ಲಿ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ ಬಗ್ಗೆ ಒಂದು ಪ್ರಶ್ನೆ ಮಾಡಿದ್ದೆ. ಮಾನ್ಯ ಭಾರಿ ನೀರಾವರಿ ಸಚಿವರು ಉತ್ತರ ಕೊಟ್ಟಿದ್ದರು. ಗುತ್ತಿ ಬಸವಣ್ಣ ಯೋಜನೆ ಎರಡನೇ ಹಂತದಲ್ಲಿ ಬರುವ ಯೋಜನೆ ಆಗಿರುವುದರಿಂದ ಆ ಯೋಜನೆಗೆ ಕೇಂದ್ರ ಸರ್ಕಾರ ಆಡಳಿತಾತ್ಮಕವಾದ ಮಂಜೂರಾತಿ ಕೊಟ್ಟಿಲ್ಲ ಎಂದು ಮಾನ್ಯ ಭಾರಿ ನೀರಾವರಿ ಸಚಿವರು ಕಳೆದ ಅಧಿವೇಶನದಲ್ಲಿ ಉತ್ತರವನ್ನು ಕೊಟ್ಟಿದ್ದರು. ಮಾನ್ಯ ಉಪಾಧ್ಯಕ್ಷರೆ, ಗುತ್ತಿ ಬಸವಣ್ಣ ಏತ ನೀರಾವರು ಯೋಜನೆಯನ್ನು ಬಹುಶಃ ಬಿಜಾಪುರ ಜಿಲ್ಲೆಯ ಹೊಸ ಜಿಲ್ಲೆಯಲ್ಲಿ ನಾವು ನೋಡುತ್ತಾ ಇದ್ದೇವೆ. 5 ತಾಲ್ಲೂಕುಗಳಲ್ಲಿ ಸಂಪೂರ್ಣವಾಗಿ ಬರಗಾಲದಂತಹ

ತಾಲ್ಲೂಕುಗಳು ಬಿಜಾಪುರ ಜಿಲ್ಲೆಯಲ್ಲಿ ಬರುತ್ತಾ ಇದ್ದಾವೆ. ಕೃಷ್ಣಾ ನೀರಾವರಿ ಯೋಜನೆಯಿಂದ ನಾವು ಭೂಮಿಯನ್ನು ಕಳೆದುಕೊಂಡಂಥ ಜನ. ಆದರೆ ಒಂದೇ ಒಂದು ಎಕರೆ ನೀರನ್ನು ಉಪಯೋಗ ಮಾಡದೇ ಇರುವಂತಹ ಪರಿಸ್ಥಿತಿ ನಮ್ಮ ಜಿಲ್ಲೆಗೆ ಶಾಪವಾಗಿ ಪರಿಣಮಿಸಿದೆ. ಕಳೆದ ಅಧಿವೇಶನದಲ್ಲಿ ಕೊಟ್ಟಂತಹ ಉತ್ತರದ ಪ್ರಕಾರ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಗೆ ಇದುವರೆವಿಗೂ ಆದೇಶಾತ್ಮಕ ಮಂಜೂರಾತಿ ಸಿಕ್ಕಿಲ್ಲ. ಮತ್ತು ಕೇಂದ್ರ ಸರ್ಕಾರದಿಂದ ಯಾವುದೇ ಅನುಮತಿ ದೊರೆಯದ ಕಾರಣ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯನ್ನು ಎರಡನೇ ಹಂತದಲ್ಲಿ ನಾವು ಮಾಡುವವರು ಇದ್ದೇವೆ ಎಂಬ ಉತ್ತರವನ್ನು ಕೊಟ್ಟಿದ್ದೀರಾ. ಆದರೆ, ಮಾನ್ಯ ಉಪಾಧ್ಯಕ್ಷರೆ, ಆವತ್ತಿನ ಪ್ರಧಾನ ಮಂತ್ರಿಗಳು ಯಾವ ಒಂದು ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿಲ್ಲ, ಯಾವ ಒಂದು ಯೋಜನೆಗೆ ಕೇಂದ್ರ ಜಲ ಸಂಪನ್ಮೂಲ ಕಛೇರಿಯಿಂದ ಅನುಮತಿ ಸಿಕ್ಕಿಲ್ಲ, ಅಂತ ಯೋಜನೆಗೆ ಯಾವುದೋ ಒಂದು ಹೈಸ್ಕೂಲ್ ಮೈದಾನದಲ್ಲಿ ಕಲ್ಲು ಇಡುವಂತಹ ಒಂದು ಕೆಟ್ಟ ಪ್ರವೃತ್ತಿಯನ್ನು, ಒಂದು ಮೋಸದ ಕೆಲಸವನ್ನು ಇವತ್ತು ಈ ಆಡಳಿತ ಪಕ್ಷವು ವ್ಯವಸ್ಥೆ ಮಾಡಿದೆಯೆಂದು ಹೇಳುವುದಕ್ಕೆ ಬಹಳ ದುಃಖ ಆಗುತ್ತಾ ಇದೆ. ಸನ್ಮಾನ್ಯ ಭಾರಿ ನೀರಾವರಿ ಸಚಿವರು ಇವತ್ತು ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಗೆ ನಿಜವಾಗಿ ಆಡಳಿತಾತ್ಮಕವಾಗಿ ಮಂಜೂರಾತಿ ಸಿಕ್ಕಿದೆಯೇ? ಇಲ್ಲವೇ ಎಂಬುದನ್ನು ಹೇಳಬೇಕು. ದೊರಕದೇ ಇದ್ದ ಪಕ್ಷದಲ್ಲಿ ಈ ದೇಶದ ಪ್ರಧಾನ ಮಂತ್ರಿಗಳನ್ನು ಕರೆದುಕೊಂಡು ಬಂದು ಯಾವ ಒಂದು ನೀರಾವರಿ ಯೋಜನೆಯನ್ನು ನಾವು ತೆಗೆದುಕೊಳ್ಳುತ್ತಾ ಇದೇವೋ ಆ ಯೋಜನೆಯನ್ನು ಯಾವುದೋ ಒಂದು ಹೈಸ್ಕೂಲ್‌ನ ಯಾವುದೋ ಒಂದು ಬೆಳ್ಳಿ ಮಹೋತ್ಸವದ ಕಾರ್ಯಕ್ರಮದಲ್ಲಿ ಉದ್ಘಾಟನೆ ಮಾಡುವಂತ ಒಂದು, ಜನರ ಕಣ್ಣಿಗೆ ಮಣ್ಣೆರೆಚುವಂಥ ಆ ಭಾಗದ ಜನರಿಗೆ ಅನ್ಯಾಯ ಮಾಡುವಂತಹ ಒಂದು ಕೆಲಸವನ್ನು ತಾವು ಮಾಡಿದ್ದೀರಿ. ಅದು ನಿಜವಾಗಿ ನಿಮ್ಮ ಅತ್ಮಸಾಕ್ಷಿಗೆ ಒಪ್ಪುವಂತಹ ಕೆಲಸವನ್ನು ತಾವು ಮಾಡಿದ್ದೀರೋ? ಎನ್ನುವುದನ್ನು ಈ ಸದನದಲ್ಲಿ ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಬಿಜಾಪುರ ಹೊಸ ಜಿಲ್ಲೆಯಲ್ಲಿ 5-6 ಯೋಜನೆಗಳು ಆಗಬೇಕಾಗಿದೆ. ಮುಳವಾಡ ಏತ ನೀರಾವರಿ ಪರಿಸ್ಥಿತಿ ಹೇಗಿದೆ? ಮತ್ತು ಆ ಯೋಜನೆಗೆ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೀರಿ. ಎರಡು ಸಾವಿರ ಇಸವಿಯೊಳಗೆ ನೀವು ಕರ್ನಾಟಕದ 729 ಟಿಎಂಸಿ ನೀರನ್ನು ಅಂದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಬರುವಂತಹ 173 ಟಿಎಂಸಿ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುತ್ತೇವೆ ಎಂದು ತಾವು ಘಂಟಾಘೋಷವಾಗಿ ಹೇಳುತ್ತಾ ಇದ್ದೀರಿ. ಆದರೆ ಮುಳವಾಡ ಏತ ನೀರಾವರಿ ಯಾವ ಹಂತದಲ್ಲಿ ಇದೆ? ಅದಕ್ಕೆ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೀರಿ? ಆ ಯೋಜನೆ ಕಾಮಗಾರಿ ಕೆಲಸ ಎಲ್ಲಿಯವರೆಗೆ ನಡೆಯುತ್ತಾ ಇದೆ? ಅದಕ್ಕಾಗಿ ಎಷ್ಟು ಕಾಲಾವಕಾಶಗಳನ್ನು ಹಾಕಿಕೊಂಡಿದ್ದೀರಿ? ಯಾವರೀತಿಯಿಂದ ಅದನ್ನು ಮುಗಿಸಬೇಕೆಂಬ ಯೋಜನೆಯನ್ನೇನಾದರು ತಾವು ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕಾಗುತ್ತದೆ. ಚಿಮ್ಮಲಗಿ ಏತ ನೀರಾವರಿ ಬಹುಶಃ ಅದು ಮುದ್ದೇವಾಡ ತಾಲ್ಲೂಕಿನಲ್ಲಿ ಬಾಗೇವಾಡ ತಾಲ್ಲೂಕಿನಲ್ಲಿ ಅನುಕೂಲಕರವಾದಂತಹ ಒಂದು ನೀರಾವರಿ ಯೋಜನೆ. ಆ ಯೋಜನೆಯ ಪರಿಸ್ಥಿತಿ ಎಲ್ಲಿಯವರೆಗೆ ಬಂದಿದೆ ಎನ್ನುವುದರ ಬಗ್ಗೆ ತಿಳಿಸಬೇಕು. ಮತ್ತು ಹಿಪ್ಪರಗಿ

ಬ್ಯಾರೇಜಿನ ಬಗ್ಗೆ ಸರ್ಕಾರ ಯಾವುದೇ ರೀತಿಯಾ ಮುಂದಾಲೋಚನೆ ಮಾಡದೇ ಇರುವ ಬಗ್ಗೆ ನಾವು ನೋಡುತ್ತಾ ಇದ್ದೇವೆ. ಏಕೆಂದರೆ ಆ ಬ್ಯಾರೇಜಿನ ಕೆಲಸ ಬಹಳಷ್ಟು ಕುಂಠಿತವಾಗಿ ನಡೆಯುತ್ತಾ ಇದೆ. ಎಲ್ಲಾ ಏತ ನೀರಾವರಿ ಯೋಜನೆಗಳನ್ನು ಮುಗಿಸಬೇಕಾದರೆ, ಕೃಷ್ಣಾ ಕಣಿವೆಯಲ್ಲಿ ಇರುವಂತಹ ಯೋಜನೆಗಳನ್ನು ಮುಗಿಸಬೇಕಾದರೆ ಆರು ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಮಿಕ್ಕ ಹಣವನ್ನು ತಾವು ಇವತ್ತು ಕೊಡಬೇಕಾಗುತ್ತದೆ. ಆದರೆ ಕೇವಲ ಇನ್ನು ಮೂರು ವರ್ಷಗಳಲ್ಲಿ ಈ ಯೋಜನೆ ಮುಗಿಯಬೇಕಾದರೆ ಇದಕ್ಕೆ ಸರ್ಕಾರ ಎಷ್ಟು ಹಣವನ್ನು ನಿಗದಿಪಡಿಸಿದ್ದೀರಾ? ಯಾವ ಯಾವ ಹಣದ ಮುಖಾಂತರ ಇದನ್ನು ಮುಗಿಸಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೀರಾ? ಅದರ ಬಗ್ಗೆ ಹೇಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಕೃಷ್ಣಾ ಭಾಗ್ಯ ಜಲ ನಿಗಮ ಎನ್ನುವಂತಹ ಹೆಸರಿನಿಂದ ಸುಮಾರು ಒಂದು ಸಾವಿರದ ಎಂಭತ್ತೊಂಭತ್ತು ಕೋಟಿ ರೂಪಾಯಿಗಳನ್ನು ಈಗಾಗಲೇ ಬಹಳಷ್ಟು ತುಟ್ಟಿ ಬಡ್ಡಿಯ ಒಂದು ಯೋಜನೆ ಹಾಕಿದ್ದೀರಿ. ಅಧ್ಯಕ್ಷರೆ, ಆ ಭಾಗದ ಪ್ರಮುಖವಾದಂತಹ ನೀರಾವರಿ ಯೋಜನೆಗೆ ಕೆಲವೊಂದು ಜನಪ್ರಿಯ ಕಾರ್ಯಕ್ರಮಗಳನ್ನು ಇವತ್ತು ತಾವು ಹಾಕಿಕೊಳ್ಳಬೇಕಾಗುತ್ತದೆ. ಜನರಿಗೆ ಒಂದು ಒಳ್ಳೆಯ ನೀರಾವರಿ ಯೋಜನೆ ಮಾಡುವ ಮುಖಾಂತರ ಆ ಭಾಗದ ಜನರಿಗೆ ಉದ್ಯೋಗದ ಅವಕಾಶಗಳು ಹೆಚ್ಚಾಗುವಂತಹ ಒಂದು ಸಂಮೃದ್ಧಿಯನ್ನು ತರುವಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು. ಸರ್ಕಾರಗಳು ಜನಪ್ರಿಯ ಕಾರ್ಯಕ್ರಮಗಳನ್ನು ಬದಿಗೊತ್ತಿ ಯುದ್ಧೋಪಾದಿಯಲ್ಲಿ ಈ ಕೆಲಸವನ್ನು ಕೈಗೆತ್ತಿಕೊಂಡರೆ ಮಾತ್ರ ಇವತ್ತು ಈ ಯೋಜನೆ ಮುಗಿಸುವುದಕ್ಕೆ ಸಾಧ್ಯ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಈಗ ಪುನರ್ ವಸತಿ ಬಗ್ಗೆ ಮಾತನಾಡಬೇಕಾದರೆ, ಅಂದು ಕೃಷ್ಣೆಯ ಒಂದು ಪ್ರವಾಹ, ನಮ್ಮ ಜಿಲ್ಲೆಯಲ್ಲಿ ಬಂದಾಗ ಸನ್ಮಾನ್ಯ ಭಾರೀ ಸಚಿವರು ಹೆಲಿಕ್ಯಾಪ್ಟರ್ ಮುಖಾಂತರ ದಿಢೀರನೇ ಬಿಜಾಪುರ ಜಿಲ್ಲೆಗೆ ಬಂದರು. ಅವರು ಬಂದಂತಹ ವಿಷಯವನ್ನು ಎಲ್ಲಾ ಪ್ರಮುಖ ಪತ್ರಿಕೆಗಳು ಪ್ರಕಟಿಸಿದವು. ಮಾನ್ಯ ನಾಗೇಗೌಡರು ಕೇವಲ ಆಲಮಟ್ಟಿಯ ಒಂದು ರಮಣೀಯ ದೃಶ್ಯವನ್ನು ಅತಿಥಿ ಗೃಹದಲ್ಲಿ ನೋಡಿಕೊಂಡು ಹೋದರೇ ಹೊರತು, ನಿಜವಾದ ಪುನರ್ ವಸತಿ ಕೇಂದ್ರಗಳಲ್ಲಿ ಆ ಭಾಗದ ಜನರು ಏನು ಜಮೀನುಗಳನ್ನು ಕಳೆದುಕೊಂಡಿದ್ದರು, ಆ ಭಾಗದ ಜನರು ಏನು ತ್ಯಾಗವನ್ನು ಮಾಡಿದ್ದರು, ಆ ಭಾಗದ ಜನರು ತಮ್ಮ ತನವನ್ನು ಬಿಟ್ಟು ಕೊಟ್ಟಂತಹ ಜನರ ನೋವು-ನಲಿವುಗಳನ್ನು ಕೇಳುವುದಕ್ಕೆ ಅವರಿಗೆ ಏಕೆ ಅವಕಾಶವಾಗಲಿಲ್ಲ; ಅವಕಾಶ ಏಕೆ ಮಾಡಿಕೊಳ್ಳಲಿಲ್ಲ ಎಂಬ ಭಾವನೆ ಇವತ್ತು ಆ ಭಾಗದ ಜನರಿಗೆ ಬಂದಿದೆ ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಈಶ್ವರಪ್ಪನವರ ಒಂದು ನೇತೃತ್ವದಲ್ಲಿ ನಾವು ಪುನರ್‌ವಸತಿ ಕೇಂದ್ರಗಳಿಗೆ ಭೇಟಿ ಕೊಟ್ಟಿದ್ದೆವು. ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಪುನರ್ ವಸತಿ ಕೇಂದ್ರಗಳು ಬಹಳ ಅಸಮರ್ಪಕವಾದ ರೀತಿಯಿಂದ ಕೆಲಸ ಮಾಡುತ್ತಾ ಇವೆ. ಅವರು ಯಾವ ರೀತಿ ಸರ್ವೆ ಮಾಡಿದ್ದಾರೆ ಎಂದರೆ ಈ ವರ್ಷ ಯಾವ ಹಳ್ಳಿ ಮುಳುಗಡೆಯಾಯಿತು, ಎಂದು ಏನು ಸರ್ವೇ ಮಾಡಿದ್ದಾರೆ, ಹಾಗೆ ಸರ್ವೇ ಮಾಡಿರುವುದರಲ್ಲಿ ಸಂಪೂರ್ಣ ದೋಷಪೂರಿತವಾಗಿರುವುದನ್ನು ನಾವು ನೋಡುತ್ತಾ ಇದ್ದೇವೆ. ಇವತ್ತು ಹೇಳಬೇಕೆಂದರೆ ಯಾವ ಪುನರ್‌ವಸತಿ ಕೇಂದ್ರಗಳಲ್ಲಿ ಜನ

ಇರುತ್ತಾರೆ, ಆ ಪುನರ್ ವಸತಿ ಕೇಂದ್ರಗಳೇ ಮುಳುಗಡೆ ಆಗುವಂತಹ ಪರಿಸ್ಥಿತಿಯ ಕೆಲವು ಉದಾಹರಣೆಗಳನ್ನು ತಮ್ಮ ಮುಂದೆ ತಿಳಿಸುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಬಿಳಗಿ ತಾಲ್ಲೂಕಿನಲ್ಲಿ ಯತನಟ್ಟಿ, ಬಾದರ್‌ನ್ನಿ ಕಂದಗಲ್ ಎನ್ನುವ ಗ್ರಾಮದಲ್ಲಿ ಪುನರ್‌ವಸತಿ ಕೇಂದ್ರಗಳು ಇವೆ. ಇವತ್ತು ಇವೂ ಕೂಡ ಮುಳುಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಾಗಲುಕೋಟೆ ತಾಲ್ಲೂಕಿನಲ್ಲಿ ಬೆನ್ನೂರು ಮತ್ತು ತೆರೆಹಾಳ ಎನ್ನುವಂತಹ ಪುನರ್‌ವಸತಿ ಕೇಂದ್ರಗಳಲ್ಲಿ ನೀರು ಹೋಗುವುಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಪುನರ್‌ವಸತಿ ಕೇಂದ್ರದ ಜನರಿಗೆ ಉದ್ಯೋಗ ಅವಕಾಶಗಳು ಇಲ್ಲದೆ ಇವತ್ತು ವಂಚಿತರಾಗಿದ್ದಾರೆ. ಯಾವ ಒಂದು ಜಮೀನನ್ನು ಕಳೆದುಕೊಂಡಂತಹ ಒಬ್ಬ ಜಮೀನುದಾರನಿಗೆ ಇವತ್ತು ಹೊಲಗಳು ಇಲ್ಲದೆ ಇವತ್ತು ಪುನರ್ ವಸತಿ ಕೇಂದ್ರಗಳಲ್ಲಿ ನಿರುದ್ಯೋಗಿಗಳಾಗಿ ಕುಳಿತುಕೊಳ್ಳುವಂತಹ ಒಂದು ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಉತ್ತರ ಕರ್ನಾಟಕದ ಬಹಳ ಪ್ರಮುಖವಾದಂತಹ ಕೃಷ್ಣಾ ಯೋಜನೆಯನ್ನು ಸರ್ಕಾರ, ಅದು ಯಾವುದೇ ಸರ್ಕಾರ ಇರಬಹುದು ಆ ಸರ್ಕಾರ ಕೇವಲ ರಾಜಕೀಯ ದೃಷ್ಟಿಯಲ್ಲಿ ನೋಡದೆ ಇವತ್ತು, 33 ವರ್ಷಗಳಿಂದ ಏನು ಅನ್ಯಾಯ ಆಗಿದೆ, ಆ ಅನ್ಯಾಯ ಇನ್ನು ಮುಂದೆ ಆಗಬಾರದು ಎಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಂಡು ಭಾರಿ ನೀರಾವರಿ ಸಚಿವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ತಿಳಿಸಲು ಇಷ್ಟಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಪುನರ್ವಸತಿ ಜನರ ಸಲುವಾಗಿ ಸವಕಳಿ ವಿಚಾರದಲ್ಲಿ ಐತಿಹಾಸಿಕವಾದ ಬಹಳ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿರುವುದಕ್ಕೆ ನಿಜವಾಗಿಯೂ ಆ ಭಾಗದ ಒಬ್ಬ ಶಾಸಕನಾಗಿ ನಾನು ಈ ಸಂದರ್ಭದಲ್ಲಿ ಕೇವಲ ಟೀಕೆ ಮಾಡದೆ ಅವರು ಮಾಡಿರುವಂಥ ಒಳ್ಳೆಯ ಕೆಲಸಗಳನ್ನು ನೆನಸಿಕೊಂಡು ಸರ್ಕಾರದ ಮುಖ್ಯಮಂತ್ರಿಗಳಾಗಲೀ, ಭಾರಿ ಮತ್ತು ಮಧ್ಯಮ ನೀರಾವರಿ ಸಚವರಾಗಲೀ ಏನು ಒಂದು ದಿಟ್ಟ ಕ್ರಮ ತೆಗೆದುಕೊಂಡಿದ್ದಾರೆ, ಇದರಿಂದ ಆ ಭಾಗದ ಜನರು ನಿಜವಾಗಿಯೂ ಸಂತೋಷಗೊಂಡಿದ್ದಾರೆ. ಅಲ್ಲದೆ, ತಮ್ಮ ಬಗ್ಗೆ ಬಹಳಷ್ಟು ಗೌರವವಿಟ್ಟುಕೊಂಡಿರುವ ಆ ಭಾಗದ ರೈತರು ಇಂದು ಮಧ್ಯಾಹ್ನ ತಮ್ಮನ್ನು ಭೇಟಿಯಾಗಬೇಕೆಂದು ಬರುತ್ತಿರುವುದರಿಂದ, ಈ ಯೋಜನೆ ಬಗ್ಗೆ ತಾವು ಬಹಳಷ್ಟು ಕಾಳಜಿ ವಹಿಸಿ ಪೂರ್ತಿಗೊಳಿಸುವುದಕ್ಕೆ ಕಾರಣಕರ್ತರಾಗಬೇಕೆಂದು ವಿನಂತಿಸಿಕೊಳ್ಳುತ್ತಾ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕಲ್ಪಿಸಿರುವುದಕ್ಕೆ ಮೊದಲು ತಮಗೆ ವಂದಿಸುತ್ತಾ, ಕಳೆದ ಎರಡು ವರ್ಷಗಳಿಂದ ಮುಳುಗಡೆ ಭಾಗದ ಸಂತ್ರಸ್ಥರಾದ ನಾವೆಲ್ಲರೂ ಪಕ್ಷಾತೀತರಾಗಿ ಸಂಘಟಿತಗೊಂಡು ದಿನಾಂಕ 10.10.96 ರಂದು 200 ವಾಹನಗಳಲ್ಲಿ ಸುಮಾರು 150 ಹಳ್ಳಿಗಳ ಜನರೆಲ್ಲರೂ ಸೇರಿಕೊಂಡು ಬೆಂಗಳೂರಿಗೆ ಐತಿಹಾಸಿಕ ಜಾಥಾ ಬಂದು ನಮ್ಮ 24 ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದೆವು. ಅದರಲ್ಲಿ 22 ಬೇಡಿಕೆಗಳನ್ನು ಸರ್ಕಾರ ಈಗಾಗಲೇ ಒಪ್ಪಿ ಆದೇಶ ಮಾಡಿರುವುದರಿಂದ ತಮಗೆ ಕನಿಷ್ಠ 500 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ದೊರಕಲೆಂದು ನಾನು ಮುಕ್ತಕಂಠದಿಂದ

ಈ ಸಂದರ್ಭದಲ್ಲಿ ಹೇಳುತ್ತಾ, ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು, ನಮ್ಮ ನೆಚ್ಚಿನ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರು, ನಮ್ಮ ಜಿಲ್ಲೆಯ ಕಂದಾಯ ಸಚಿವರಾದ ರಮೇಶ್. ಸಿ, ಜಿಗಜಿಣಗಿಯವರು ಮತ್ತು ಯುವಜನ ಸೇವೆ ಹಾಗೂ ಕ್ರೀಡಾ ಸಚಿವರಾದ ಅಜಯಕುಮಾರ್ ಸರ್‌ನಾಯಕ್‌ರವರೆಲ್ಲರೂ ಮುಳುಗಡೆ ಭಾಗದ ಜನರಿಗೆ ಬೆಂಗಾವಲಾಗಿ ನಿಂತು ಸಹಾಯ ಮಾಡಿದ್ದಾರೆ. ಇದರ ಜೊತೆಗೆ ವಿಧಾನಸಭೆಯ ಒಳಗೂ ಹೊರಗೂ ನಮ್ಮ ನಾಯಕರುಗಳಾದ ಮಲ್ಲಿಕಾರ್ಜುನ ಖರ್ಗೆಯವರು, ಹೆಚ್.ಕೆ. ಪಾಟೀಲ್‌ರವರೂ ಸಹ ಸಾಕಷ್ಟು ಹೋರಾಟ ಮಾಡಿದ್ದಾರೆ. ಇವೊತ್ತು ನಾವೆಲ್ಲರೂ ಈ ಸರ್ಕಾರವನ್ನು ಮತ್ತು ನಮ್ಮ ನಾಯಕರುಗಳನ್ನು ಮನ ತುಂಬಿ ಹೊಗಳುವುದರೊಂದಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟಕ್ಕೆ ಕೆಲಸ ಮುಗಿಯಲಿಲ್ಲ. ಇವೊತ್ತು ಪುನರ್ವಸತಿ ಕೇಂದ್ರದಲ್ಲಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದರೂ ಸಹ ಅಲ್ಲಿಯ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ನಾವು ಇನ್ನೂ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಪ್ರಥಮವಾಗಿ ವಿದ್ಯುತ್ತ್‌ನ ಅಸ್ತವ್ಯಸ್ತತೆ, ಸಮಯಕ್ಕೆ ಸರಿಯಾಗಿ ಕಾಳು-ಕಡ್ಡಿಗಳನ್ನು ಹಂಚದಿರುವುದು, ಚಿಮಣಿ ಎಣ್ಣೆ ವಿತರಿಸದಿರುವುದು. ಇದರ ಜೊತೆಗೆ ಪುನರ್ವಸತಿ ಕೇಂದ್ರ ಕಲ್ಪಿಸುವುದರಲ್ಲಿ ಪಟ್ಟಣ ಮತ್ತು ಹಳ್ಳಿಗಳಿಗೆ ತಾರತಮ್ಯ ಮಾಡುವುದು. ನಮ್ಮ ಹಳ್ಳಿಗಳಲ್ಲಿ ಕಲ್ಪಿಸಿಕೊಟ್ಟಿರುವ ಪುನರ್ವಸತಿ ಕೇಂದ್ರಗಳಲ್ಲಿ ಸುಮಾರು ಹತ್ತು ಸಾವಿರ ಜನರಿಗೆ ಜಿಂಕ್ ಶೀಟುಗಳಲ್ಲಿ ಶೆಡ್ಡುಗಳನ್ನು ಮಾಡಿದ್ದಾರೆ. ದುರ್ದೈವದ ಸಂಗತಿ ಎಂದರೆ, ಕಳೆದ ಅಧಿವೇಶನದ ಸಮಯದಲ್ಲೂ ನಾನು ಹೇಳಿದ್ದೆ. ಇಲ್ಲಿಗೆ ಯಾವುದೇ ಅಲ್ಸೇಷಿನ್ ನಾಯಿಯನ್ನು ಸಹ ತರುವುದಕ್ಕೆ ತಯಾರಿಲ್ಲ, ನಮ್ಮ ಶಾಸಕರ ನಾಯಿ ಇರಬಹುದು, ಅಧಿಕಾರಿಗಳ ನಾಯಿ ಇರಬಹುದು, ಅದು ಸಾಧ್ಯವಿಲ್ಲ. ಅಂತಹ ಯಾವುದೇ ಒಂದು ವ್ಯವಸ್ಥೆಯಿಲ್ಲದ ಶೆಡ್ಡುಗಳನ್ನು ಕೊಟ್ಟರೆ ಅವರುಗಳು ತಮ್ಮ ಜೀವನ ಹೇಗೆ ಸಾಗಿಸುವುದು? ಹೇಗೆ ಅಲ್ಲಿ ಇರುತ್ತಾರೆ? ಅದೇ ರೀತಿ ಪಟ್ಟಣದಲ್ಲಿ 10-20 ಶೆಡ್ಡುಗಳನ್ನು ನಿರ್ಮಿಸಿ ಅಲ್ಲಿಗೆ ವಿದ್ಯುತ್ ಸರಬರಾಜಿನ ಸೌಲಭ್ಯ ಕಲ್ಪಿಸಿದ್ದಾರಲ್ಲದೆ ನೀರಿನ ವ್ಯವಸ್ಥೆಯೂ ಸರಿಯಾಗಿರುವುದರಿಂದ ಪುನರ್ವಸತಿ ಕೇಂದ್ರ ಸೌಲಭ್ಯ ಕಲ್ಪಿಸಿಕೊಡುವಲ್ಲಿ ಈ ತಾರತಮ್ಯವೇಕೆ? ಇದನ್ನು ಪುನರ್ವಸತಿ ಅಧಿಕಾರಿಗಳು ಗಮನದಲ್ಲಿಟ್ಟುಕೊಂಡು ನಮ್ಮ ಗ್ರಾಮೀಣ ಭಾಗಗಳಿಗೆ ಕಂಟಿನ್‌ಜೆನ್ಸಿ ಫಂಡ್‌ನಲ್ಲಿ ಸರಿಯಾದ ರೀತಿಯಲ್ಲಿ ಪುನರ್ವಸತಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಾರ್ಯಕ್ರಮ ಇಷ್ಟಕ್ಕೆ ಮುಗಿಯುವುದಿಲ್ಲ. ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರವಾದ ನಂತರ ನಾವೆಲ್ಲರೂ ನಿರುದ್ಯೋಗಿಗಳಾಗಿದ್ದು ಸರ್ಕಾರ ಬೇಗನೇ ಅವರ ಉಪಜೀವನಕ್ಕೆ ಉದ್ಯೋಗದ ವ್ಯವಸ್ಥೆ ಮಾಡದೆ ಹೋದರೆ ಸರ್ಕಾರವೇ ಸಮಾಜದ್ರೋಹಿಗಳನ್ನು ನಿರ್ಮಾಣ ಮಾಡುವಂಥ ಪರಿಸ್ಥಿತಿ ಬಂದೀತು ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಎಲ್ಲಿ ನೋಡಿದರೂ ನಿರುದ್ಯೋಗಿಗಳಿಂದ ಕಳವು, ದರೋಡೆ, ಕೊಲೆಗಳಾಗುವಂಥ ಪರಿಸ್ಥಿತಿಯನ್ನು ಈ ರಾಜ್ಯದ ಜನತೆಯಾದ ನಾವೆಲ್ಲರೂ ಎದುರಿಸುತ್ತಿದ್ದೇವೆ. ಈ ಸಮಯದಲ್ಲಿ ಮುಳುಗಡೆ ಭಾಗದ ಜನರು ಸಹ ಕಳವು, ದರೋಡೆಗಳಂತಹ ಕುಕೃತ್ಯಗಳಿಗೆ ಕೈಹಾಕಿದರೂ ಆಶ್ಚರ್ಯವಿಲ್ಲ. ಈ ಕೆಟ್ಟ ಘಟನೆಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಅವರ ಹೊಟ್ಟೆಪಾಡಿಗೆ ಗುಡಿ ಕೈಗಾರಿಕೆಗಳನ್ನಾಗಲೀ, ಸಣ್ಣ ಕೈಗಾರಿಕೆಗಳನ್ನಾಗಲೀ ಕೈಗೊಳ್ಳಲು ಸರ್ಕಾರ ಕ್ರಮಗಳನ್ನು ತೆಗೆದುಕೊಂಡು ಆದಷ್ಟು ಬೇಗ

ಜೀವನೋಪಾಯಕ್ಕೆ ಮಾರ್ಗ ತೋರಿಸಿಕೊಡಬೇಕೆಂಬ ಮಾತನ್ನು ಹೇಳಲು ಇಷ್ಟಪಡುತ್ತೇನೆ. ಇನ್ನು ನೀರಾವರಿ ವಿಷಯದಲ್ಲಿ ಮಾತನಾಡುವುದಾದರೆ, ನಮ್ಮ ಕರ್ನಾಟಕ ರಾಜ್ಯದ ಒಟ್ಟಾರೆ ಭೌಗೋಳಿಕ ಕ್ಷೇತ್ರದಲ್ಲಿ ಬರಪೀಡಿತ ಪ್ರದೇಶ ಶೇಕಡಾ 23ರಷ್ಟಿದ್ದು, ಇದರಲ್ಲಿ ಶೇಕಡಾ 18ರಷ್ಟು ಬಿಜಾಪುರ, ಗುಲ್ಬರ್ಗಾ,ಬಳ್ಳಾರಿ, ರಾಯಚೂರು ಮತ್ತು ಬೀದರ್ ಜಿಲ್ಲೆಗಳು ಒಳಗೊಂಡಿವೆ. ಇಡೀ ರಾಜ್ಯದಲ್ಲಿ ಕೃಷಿ ಯೋಗ್ಯ ಭೂಮಿ 106 ಲಕ್ಷ ಹೆಕ್ಟೇರ್‌ಗಳಷ್ಟಿದ್ದು, ಇದರಲ್ಲಿ ಕಳೆದ 45 ವರ್ಷಗಳಿಂದ ನೀರಾವರಿಯಾಗಿದ್ದು ಕೇವಲ 28 ಲಕ್ಷ ಹೆಕ್ಟೇರ್ ಮಾತ್ರ. ನಾವು ಎಲ್ಲಿಯವರೆಗೆ ಕೃಷ್ಣಾ ಕಣಿವೆ ಹಾಗೂ ಕಾವೇರಿ ಕಣಿವೆ ಯೋಜನೆಗಳನ್ನು ಮುಗಿಸುವುದಿಲ್ಲವೋ ಅಲ್ಲಿಯವರೆಗೆ ಬರಗಾಲದ ಛಾಯೆ ನಮ್ಮ ಜಿಲ್ಲೆಗಳಿಗೆ ತಪ್ಪಿದ್ದಲ್ಲ. ನಾವು ಕೃಷ್ಣಾ ಮತ್ತು ಕಾವೇರಿ ಕಣಿವೆ ಯೋಜನೆಗಳನ್ನು ಸಂಪೂರ್ಣವಾಗಿ ಮುಗಿಸಿದಲ್ಲಿ ಇನ್ನೂ 30-35 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆಯೆನ್ನುವ ಮಾತನ್ನು ಹೇಳುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಐದು ಹರಿಯುವ ನದಿಗಳಿದ್ದೂ ಸಹ ಅಲ್ಲಿಯ ಬರಗಾಲ ತಪ್ಪಿಲ್ಲ, ಬಿಜಾಪುರ ಪಟ್ಟಣಕ್ಕೆ 5-6 ದಿವಸಗಳಿಗೊಮ್ಮೆ ಕುಡಿಯುವ ನೀರಿನ ವ್ಯವಸ್ಥೆ ಇದ್ದು ಇದರ ಬವಣೆ ತಪ್ಪಿಲ್ಲ. ಆದುದರಿಂದ, ಇದರ ಬಗ್ಗೆ ಸರ್ಕಾರ ಆದಷ್ಟು ಬೇಗ ಕ್ರಮ ಕೈಗೊಂಡು ನಮ್ಮ ಭಾಗದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕೆಂಬ ಮಾತನ್ನಾಡುತ್ತಾ, 1965ರಲ್ಲಿ ಸುಮಾರು 230 ಕೋಟಿ ರೂಪಾಯಿಗಳಷ್ಟು ಅಂದಾಜಿನಲ್ಲಿ ಪ್ರಾರಂಭವಾದ ಯೋಜನೆ ಇವೊತ್ತು 8,000-9,000 ಕೋಟಿ ರೂಪಾಯಿಗಳಿಗೆ ಬಂದು ನಿಂತಿದೆ. ಇದೇನೇ ಇದ್ದರೂ ನಾವು ಕ್ರಿ.ಶ. 2,000 ಇಸವಿಯೊಳಗೆ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರ್ತಿಗೊಳಿಸದೆ ಹೋದರೆ ಆಲಮಟ್ಟಿ ಯೋಜನೆಯಿಂದ ವಿಶೇಷವಾಗಿ ಬಿಜಾಪುರ ಜಿಲ್ಲೆಗೆ ಶಾಪವಾಗದೆ ಹೋಗುವುದಿಲ್ಲ. ಏಕೆಂದರೆ, ಆಲಮಟ್ಟಿ ಜಲಾಶಯದಲ್ಲಿ ಏಳು ಏತ ನೀರಾವರಿ ಯೋಜನೆಗಳಿದ್ದು, ಇಲ್ಲಿಯವರೆಗೆ ಯಾವುದೊಂದು ಸ್ಥಳ ಬಿಟ್ಟು ಮೇಲಕ್ಕೆ ಬಂದಿಲ್ಲ. ಇದರ ಜೊತೆಗೆ ಕನಿಷ್ಠ 300 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾದರೆ ಏತ ನೀರಾವರಿ ಯೋಜನೆಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಆದರೆ, ಇವೊತ್ತು ಈ ವಿದ್ಯುತ್ ಉತ್ಪಾದನಾ ಯೋಜನೆಯ ಕಂಟ್ರಾಕ್ಟ್ ಅನ್ನು ಯಾರು ತೆಗೆದುಕೊಂಡಿದ್ದಾರೆ? ಅವರು ಯಾವಾಗ ಕೆಲಸ ಪ್ರಾರಂಭಿಸುತ್ತಾರೆ? ಅವರು ಕೆಲಸ ಪ್ರಾರಂಭಿಸುವ ಮುನ್ಸೂಚನೆ ಸಹ ನಮಗೆ ಕಂಡುಬರುತ್ತಿಲ್ಲ. ಆದ್ದರಿಂದ ಮಾನ್ಯ ನೀರಾವರಿ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಕಾರ್ಯಕ್ರಮಗಳನ್ನು ಕೇವಲ ಕಾಗದದಲ್ಲಿ ರೂಪಿಸಿದರೆ ಸಾಕಾಗುವುದಿಲ್ಲ, ತಮಗೆ ಆ ಯೋಜನೆಯನ್ನು ಮುಗಿಸಲು ಇರುವ ಅವಧಿ ಕೇವಲ ಮೂರು ವರ್ಷಗಳು ಮಾತ್ರ. ಈ ಅವಧಿಯಲ್ಲೇನು ತಾವು ನಿಗದಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ಅದನ್ನು ಒಂದು ತಾಸು ತಡೆಯಾಗದಂತೆ ಸರಿಯಾದ ಸಮಯಕ್ಕೆ ಕಾರ್ಯಕ್ರಮವನ್ನು ರೂಪಿಸಿದರೆ ಮಾತ್ರ ಈ ಯೋಜನೆ ಪೂರ್ಣವಾಗಲು ಸಾಧ್ಯವಾಗುತ್ತದೆ. ಆ ದಿಕ್ಕಿನಲ್ಲಿ ತಾವು ಇಂದು ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕಾಗಿದೆ. ಆಲಮಟ್ಟಿ ಜಲಾಶಯವು ಬಿಜಾಪುರ ಜಿಲ್ಲೆಗೆ ಶಾಪವಾಗದೆ ಅದು ವರದಾನವಾಗುವಂತೆ ಮಾಡಬೇಕು. ಒಂದು ಕಡೆ ಎರಡೂವರೆ ಲಕ್ಷ ಎಕರೆ ಜಮೀನು ನೀರಿನಲ್ಲಿ ಮುಳುಗಡೆಯಾಗಲಿದ್ದು, ನೂರಾ ಎಪ್ಪತ್ತಕ್ಕಿಂತಲೂ ಹೆಚ್ಚು ಹಳ್ಳಿಗಳು

ಮುಳುಗಡೆಯಾಗಲಿದ್ದು, ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಬಾಗಲಕೋಟೆ ಪಟ್ಟಣ ಮುಳುಗಡೆಯಾಗಿ ನಾವೆಲ್ಲರೂ ನಿರ್ಗತಿಕರಾಗುತ್ತಿದ್ದು ಈ ಸಮಯದಲ್ಲಿ ಕೊನೆಯ ಪಕ್ಷ ಮುಳುಗಡೆಯಾದ ಜನರಿಗಾದರೂ ಇದರ ಲಾಭ ಬರಲಿ. ಆದ್ದರಿಂದ ತಾವು ಮುಳುವಾಡ ಏತ ನೀರಾವರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ಮುಳುಗಡೆಯಾಗಲಿರುವ 170 ಹಳ್ಳಿಗಳಲ್ಲಿ ನನ್ನ ಬೀಳಗಿ ಕ್ಷೇತ್ರದ 65 ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗಲಿವೆ. ಆದರೆ ದುರಾದೃಷ್ಟದ ಸಂಗತಿಯೇನೆಂದರೆ, ಇದುವರೆಗೆ ನನ್ನ ಬೀಳಗಿ ಕ್ಷೇತ್ರಕ್ಕೆ ಒಂದೂ ಏತ ನೀರಾವರಿ ಯೋಜನೆಯನ್ನು ಸರ್ಕಾರ ರೂಪಿಸಿಲ್ಲ. ಕಾರ್ಯಕ್ರಮದಲ್ಲಿ ಏತ ನೀರಾವರಿ ಯೋಜನೆ ಇದ್ದರೂ ಸಹ, ಅಲ್ಲಿ ನೀರಿಲ್ಲ, ಸ್ಕೀಮ್ 'ಏ'ನಲ್ಲಿ ಅದು ಇಲ್ಲ ಎನ್ನತಕ್ಕ ಮಾತನ್ನು ಹೋದ 27ನೇ ತಾರೀಖು ಆದ ಸಭೆಯಲ್ಲಿ ಚರ್ಚೆಯಾಯಿತು. ನಾನು ಬೀಳಗಿ ಕ್ಷೇತ್ರದ ಜನರ ಪರವಾಗಿ ಕೇಳಿಕೊಳ್ಳುವುದೇನೆಂದರೆ ಹೆಚ್ಚು ಹಳ್ಳಿಗಳು ಮುಳುಗಡೆಯಾಗುವ ಕ್ಷೇತ್ರದಲ್ಲಿ ಒಂದು ಎಕರೆ ನೀರಾವರಿ ಮಾಡದಿದ್ದರೆ ನನ್ನ ಕ್ಷೇತ್ರದ ಜನರಿಗೆ ಘೋರವಾದ ಅನ್ಯಾಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು, ಬೃಹತ್ ನೀರಾವರಿ ಸಚಿವರಾದ ಮಾನ್ಯ ನಾಗೇಗೌಡರು, ಮಾನ್ಯ ಜಿಗಜಿಣಗಿಯವರು, ಮಾನ್ಯ ಅಜಯಕುಮಾರ್ ಸರ್‌ನಾಯಕ್‌ರವರು, ಮಾನ್ಯ ಖರ್ಗೆಯವರಿಗೂ, ಹೆಚ್.ಕೆ. ಪಾಟೀಲರಿಗೂ ನಮ್ಮ ಮುಳುಗಡೆ ಭಾಗದ ಜನರ ಸಲುವಾಗಿ ಬೆನ್ನೆಲುಬಾಗಿ ನಿಂತು ನಮ್ಮ ಸಹಾಯ್ಯಕೆ ಬಂದುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೆ, ನಿಯಮ 69ರ ಮೇರೆಗೆ ಕೃಷ್ಣಾ ಮೇಲ್ದಂಡೆ ಕಾಮಗಾರಿಗಳ ವಿಳಂಬ ಮತ್ತು ಅಸಮರ್ಪಕ ಪುನರ್ವಸತಿಯಿಂದಾಗಿ ಬಾಗಲಕೋಟೆ ಪಟ್ಟದ ಮುಳುಗಡೆಯಿಂದ ಆಗಿರುವ ಅನ್ಯಾಯದ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸವಿಸ್ತಾರವಾಗಿ ಮಾತನಾಡಿದ್ದಾರೆ, ನಮ್ಮ ಪಕ್ಷದ ಸದಸ್ಯರಾದ ರಾಜಶೇಖರ್ ಶೀಲವಂತ್ ಮತ್ತು ಬಸವರಾಜ್ ಯತ್ನಾಳ್‌ರವರು ಮಾತನಾಡಿದ್ದಾರೆ. ನಾನು ಹೆಚ್ಚು ಸಮಯ ತೆಗೆದುಕೊಂಡು ವಿವರಕ್ಕೆ ಹೋಗುವುದಿಲ್ಲ. ಕೆಲವು ವಿಚಾರದ ಬಗ್ಗೆ ಮಾತ್ರ ಸರ್ಕಾರದ ಗಮನಕ್ಕೆ ತಂದು ಅದಕ್ಕೆ ಸರಿಯಾದ ಪರಿಹಾರವನ್ನು ಒದಗಿಸಬೇಕೆಂದು ಒತ್ತಾಯ ಮಾಡಲು ನಾನು ನಿಂತಿದ್ದೇನೆ. ಕಳೆದ 13-14 ವರ್ಷಗಳಿಂದ ಕೃಷ್ಣಾ ಮೇಲ್ದಂಡೆಯ ಕಾಮಗಾರಿಯ ಬಗ್ಗೆ ಯಾವ ರೀತಿಯಾದ ಕಳಕಳಿಯನ್ನು ತೋರಿಸಬೇಕಾಗಿತ್ತೋ ಅದನ್ನು ತೋರಿಸುತ್ತಿಲ್ಲ. ಆ ಭಾಗದ ಲಕ್ಷಾಂತರ ರೈತರಿಗೆ ನೀರನ್ನು ಒದಗಿಸುವ ಕಾರ್ಯ ಒಂದಲ್ಲಾ ಒಂದು ಕಾರಣದಿಂದ ನಿಧಾನವಾಗುತ್ತಿದೆ. ಎಂದು ನಾವು ಹೇಳಿಕೊಂಡು ಬಂದಿದ್ದೇವೆ. ಮಾನ್ಯ ನಾಗೇಗೌಡರು ಬೃಹತ ನೀರಾವರಿ ಸಚಿವರಾಗಿರುವ ಈ ಸಮಯದಲ್ಲಿ, ಬಚಾವತ್ ತೀರ್ಪಿನ ಪ್ರಕಾರ ಈ ಯೋಜನೆಯನ್ನು ಎರಡು ಸಾವಿರ ಇಸವಿಯೊಳಗಾಗಿ ಮುಗಿಸಬೇಕಾಗಿದ್ದು ಇನ್ನು ಕೇವಲ ಎರಡೂವರೆ ವರ್ಷಗಳ ಸಮಯ ಮಾತ್ರ ಇರುವಾಗ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ತಮ್ಮ ಕಣ್‌ಮುಂದೆ ಪ್ಲಾನ್‌ಗಳೇನಿವೆ? 1985-86ರಲ್ಲಿ ಇದರ ಬಗ್ಗೆ ನಾವು ಹೇಳಿದಾಗ ಮುಂದೆ ಯಾರು ಅಧಿಕಾರಕ್ಕೆ ಬರುತ್ತಾರೆ ಅವರು ಆ

ಕೆಲಸವನ್ನು ಮಾಡುತ್ತಾರೆಂದು ಕಾಲಹರಣ ಮಾಡಿಕೊಂಡು ಬಂದಿದ್ದೇವೆ. ಈ ನೀರಾವರಿ ಕಾಮಗಾರಿಗಳು ಪೂರ್ಣವಾಗದಿರುವುದಕ್ಕೆ ತಮಗಿಂತ ಅಂದು ಅಧಿಕಾರದಲ್ಲಿದ್ದ ನಮ್ಮ ಕಾಂಗ್ರೆಸ್ ಮಿತ್ರರ ಮೇಲೆ ಜವಾಬ್ದಾರಿ ಇತ್ತು ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ವಿರೋಧ ಪಕ್ಷದಲ್ಲಿ ನಾವಿದ್ದಾಗ ಅದರ ಬಗ್ಗೆ ಮಾತನಾಡಬಹುದು. ಆದರೆ, ಅಧಿಕಾರ ಸಿಕ್ಕಂಥ ಕಾಲದಲ್ಲಿ ಅಗತ್ಯ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ನೀರಾವರಿ ಕಾಮಗಾರಿಗಳನ್ನು ಪೂರ್ಣ ಮಾಡುವಂಥ ಯಾವುದೇ ಪ್ರಾಮಾಣಿಕವಾದ ಪ್ರಯತ್ನ ಮಾಡಲಿಲ್ಲವೆಂಬುದು ಅಂಕಿಅಂಶಗಳಿಂದ ನಮಗೆ ಗೊತ್ತಾಗುತ್ತದೆ. ತಮ್ಮ ಕಾಲದಲ್ಲಾದರೂ ಈ ಯೋಜನೆಯನ್ನು ಮುಗಿಸಲು ಈ ವರ್ಷ, ಮುಂದಿನ ವರ್ಷ ಏನೇನು ಪ್ಲಾನ್‌ಗಳಿವೆ ಎಂಬ ಬಗ್ಗೆ ಹೇಳಬೇಕು. ಅದಕ್ಕೆ ಅಗತ್ಯವಿರುವ ಹಣವನ್ನು ಎಲ್ಲಿಂದ ತರುತ್ತೀರಾ? ಕೃಷ್ಣ ಭಾಗ್ಯ ಜಲ ನಿಗಮದಿಂದ ಈ ವರ್ಷ ಎಷ್ಟು ಹಣವನ್ನು ಸಂಗ್ರಹ ಮಾಡಬೇಕೆಂದಿದ್ದೀರಾ? ಈ ಬಗ್ಗೆ ವಿವರವನ್ನು ಒದಗಿಸಬೇಕೆಂದು ಹೇಳಬಯಸುತ್ತೇನೆ. ತಾವು ಇಂದಿನ ಲೇಟೆಸ್ಟ್ ಅಂಕಿಅಂಶವನ್ನು ಕೊಟ್ಟರೂ ಸಹ ಕೃಷ್ಣ ನದಿ ನೀರಿನಲ್ಲಿ ಎರಡು ಸಾಹಿರ ವರ್ಷದ ಒಳಗಾಗಿ ನಮ್ಮ ಪಾಲಿನ 734 ಟಿ.ಎಂ.ಸಿ. ನೀರಿನಲ್ಲಿ ಕೇವಲ 400 ಇಲ್ಲವೆ 450 ಟಿ.ಎಂ.ಸಿ. ನೀರನ್ನು ಮಾತ್ರ ಪಡೆದಿರಬಹುದೇನೋ, ಇನ್ನೂ ಸುಮಾರು 234 ಇಲ್ಲವೆ 250 ಟಿ.ಎಂ.ಸಿ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಆದರೆ ಆಂಧ್ರ ಪ್ರದೇಶದವರು ಈಗಾಗಲೇ 811 ಟಿ.ಎಂ.ಸಿ ನೀರನ್ನು ಪೂರ್ಣ ಉಪಯೋಗಮಾಡಿಕೊಂಡಾಗಿದೆ. ಕೇಂದ್ರ ಜಲ ಸಂಪನ್ಮೂಲ ಇಲಾಖೆ ಆಂಧ್ರಪ್ರದೇಶದ ಹೊಸ ಯೋಜನೆಗಳಿಗೆ ಅನುಮತಿಯನ್ನು ಕೊಡದಿದ್ದರೂ ಸಹ ಅವರು ತೆಲಗು ಗಂಗಾದಲ್ಲಿ 29 ಟಿ.ಎಂ.ಸಿ, ಶ್ರೀಶೈಲಂ ಬಲದಂಡೆ ಕಾಲುವೆಯಲ್ಲಿ 19 ಟಿ.ಎಂ.ಸಿ, ಎಡದಂಡೆಯಲ್ಲಿ 30 ಟಿ.ಎಂ.ಸಿ, ಭೀಮಾ ಏತನೀರಾವರಿಯಲ್ಲಿ 21 ಟಿ.ಎಂ.ಸಿ, ಉಡಿಚಿಂತರ ಡೈವರ್ಷನ್‌ನಲ್ಲಿ 10 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ. ಈ ಯೋಜನೆಯಲ್ಲಿ 330 ಟಿ.ಎಂ.ಸಿ ನೀರನ್ನೇನೂ ನಾವುಗಳು ಹಂಚಿಕೊಳ್ಳಬೇಕಾಗಿದೆಯೋ ಅದರಲ್ಲಿ ಹತ್ತಿರ ಹತ್ತಿರ 108-110 ಟಿ.ಎಂ.ಸಿ ನೀರನ್ನು ಅವರು ಉಪಯೋಗ ಮಾಡಿಕೊಂಡಿದ್ದಾರೆ. ಕಾನೂನುಬಾಹಿರವಾಗಿ ನಡೆದುಕೊಂಡಿರುವವರು ಅವರು ಆದರೆ ಕೇಂದ್ರ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತಿದ್ದೇವೆಂದು ನಮ್ಮ ಮೇಲೆ ಸವಾರಿ ಮಾಡುತ್ತಿದ್ದಾರೆ. ಎಂಥ ದುರಾದೃಷ್ಟವೆಂದರೆ, ಆಲಮಟ್ಟಿ ಅಣೆಕಟ್ಟೆಯಿಂದ ಕನಿಷ್ಠ 800-900 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬಹುದಿತ್ತೋ ಅದನ್ನು ನಮ್ಮ ಕಾಂಗ್ರೆಸ್ ಸ್ನೇಹಿತರು ಅಧಿಕಾರದಲ್ಲಿದ್ದಾಗ ನಾಲ್ಕೈದು ವರ್ಷಗಳ ಹಿಂದೆ ಪೂರ್ಣ ಮಾಡುವ ಪ್ರಯತ್ನ ಮಾಡಿದ್ದರೆ, ಬೇರೆ ಎಲ್ಲಾ ಹಣವನ್ನು ಅದಕ್ಕೆ ಉಪಯೋಗ ಮಾಡಿಕೊಂಡು ಆ ಕೆಲಸವನ್ನು ಮಾಡಿದ್ದರೆ ಇವತ್ತೇನು ನಾವು ರಾಜ್ಯದಲ್ಲಿ ವಿದ್ಯುತ್ ಅಭಾವವನ್ನು ಎದುರಿಸುತ್ತಿದ್ದೇವೆ ಅದು ಆಗುತ್ತಿರಲಿಲ್ಲ. ಮುಂದಾಲೋಚನೆ ಇದ್ದಿದ್ದರೆ, ರಾಜ್ಯದ ಜನರ ಹಿತದೃಷ್ಟಿಯಿಂದ ಚಿಂತನೆ ಮಾಡಿದ್ದರೆ ಕೃಷ್ಣ ಬೇಸಿನ್‌ನಲ್ಲೇ ಸುಮಾರು ಎರಡು ಸಾವಿರ ಮೆಗಾವ್ಯಾಟ್‌ಗಿಂತ ಹೆಚ್ಚಿನ ಜಲ ವಿದ್ಯುತ್‌ನ್ನು ಉತ್ಪಾದನೆ ಮಾಡಿಕೊಳ್ಳಲು ಸಾಧ್ಯವಾಗುತ್ತಿತ್ತು. ಆದರೆ ಆಂಧ್ರದವರು ಈವತ್ತಿಗೂ ಸಹ ಇದಕ್ಕೆ ಒಂದಲ್ಲಾ ಒಂದು ಅಬ್ಜೆಕ್ಷನ್ ಹಾಕುತ್ತಿದ್ದಾರೆ. ಮುಂದೆ ಉಪಯೋಗ ಮಾಡಿಕೊಳ್ಳಬೇಕಾದ ನೀರಿನ ಉಪಯೋಗವನ್ನು

ಮಾಡಿಕೊಂಡಿರುವವರು ಅವರು. ಅನುಮತಿ ಇಲ್ಲದೆ ನೀರಾವರಿ ಯೋಜನೆಗಳನ್ನು ಮಾಡಿರುವವರು ಅವರು. ಆದರೆ ಇವತ್ತು ಅವರು ಆಲಮಟ್ಟಿ ಅಣೆಕಟ್ಟೆಯ ಬಗ್ಗೆ ಅಬ್ಜೆಕ್ಷನ್ ಹಾಕಿದ್ದಾರೆ. ಅಲ್ಲೇನು ಜಲ ವಿದ್ಯುತ್‌ಉತ್ಪಾದನೆಯಾಗ ಬೇಕಿತ್ತು ಅದಕ್ಕೆ ಅನುಮತಿ ಸಿಕ್ಕಿಲ್ಲವೆಂದು ಕೇಳಿದ್ದೇನೆ, ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಆಂಧ್ರದವರು ತೆಲಗುಗಂಗಾದಲ್ಲಿ, ಶ್ರೀಶೈಲಂ, ಭೀಮಾ ಏತ ನೀರಾವರಿ ಬಲ ಮತ್ತು ಎಡ ದಂಡೆಗಳಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ನೀರನ್ನು ಉಪಯೋಗ ಮಾಡಿಕೊಂಡಿರುವ ಬಗ್ಗೆ ಅವರು ಹೇಳಿದರು. ಅದರ ಜೊತೆಗೆ ಮತ್ತೊಂದು ವಿಚಾರವನ್ನು ಹೇಳುವುದಾದರೆ, ಅವರು ಪ್ರತಿ ವರ್ಷ 70-80 ಕೋಟಿ ರೂಪಾಯಿಗಳನ್ನು ಮೈನರ್ ಇರಿಗೇಷನ್‌ಗಾಗಿ ಖರ್ಚು ಮಾಡುತ್ತಿದ್ದಾರೆ. ಆ ನೀರನ್ನು ಸಹ ತಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ತಮ್ಮ ಪ್ರೊಟೆಸ್ಟ್ ಏನಿದೆ? ನಾವು ಕೇವಲ ಮೇಜರ್ ಪ್ರಾಜೆಕ್ಟ್ ಮತ್ತು ಅಣೆಕಟ್ಟೆಯ ಬಗ್ಗೆ ನೋಡುತ್ತಿದ್ದೇವೆ, ಆದರೆ ಅವರು ಹೊಸದಾಗಿ ಟ್ಯಾಂಕ್‌ಗಳನ್ನು ಕಟ್ಟಲು 70-80 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ರೆಸ್ಟೋರೇಷನ್ ಮಾಡತಕ್ಕದ್ದು, ಬ್ರೀಚ್ ಆಗಿರತಕ್ಕದನ್ನು ಫಿಲ್‌ಅಪ್ ಮಾಡತಕ್ಕ ಕೆಲಸವನ್ನು ಸಹ ಅವರು ಪ್ರತಿ ವರ್ಷ ಮಾಡುತ್ತಿದ್ದಾರೆ. ಅದರ ಬಗ್ಗೆ ತಮ್ಮ ಪ್ರೊಟೆಸ್ಟ್ ಇಲ್ಲ ಆಂಧ್ರಪ್ರದೇಶದ ಸತ್ಯನಾರಾಯಣ ಎಂಬುವವರು ಕೇಂದ್ರದಲ್ಲಿ ಮಂತ್ರಿಯಾಗಿದ್ದ ಕಾರಣ ಅವರೇ ನಮ್ಮ ಈ ವಿದ್ಯುತ್ ಪ್ರಾಜೆಕ್ಟ್ ವಿಥ್‌ಹೆಲ್ಡ್ ಮಾಡಲು ಕಾರಣಕರ್ತರು ಎಂದು ಸುದ್ದಿ ಇದೆ.

12.20 ಪಿ.ಎಂ

ನಾನು ಈಗ ಮತ್ತೆ ಅದನ್ನು ಹೇಳಿದರೆ ನೀವು ರಾಜಕೀಯ ಎಂದು ತಿಳಿದುಕೊಳ್ಳುತ್ತೀರಿ. ಇವರು ನೀವು ಮಾಡಬೇಕಾಗಿತ್ತು ಎಂದು ಹೇಳುತ್ತಾರೆ. ನಾವಿಲ್ಲಿ ಜಗಳವಾಗುವ ರೀತಿಯಲ್ಲಿ ಮಾತನಾಡುವುದು ಬೇಡ. ಆಲಮಟ್ಟಿ ಅಣೆಕಟ್ಟು 504 ಮೀಟರ್ ಎತ್ತರಕ್ಕೆ ಬರಬೇಕಾದರೆ ಅದೇನು ಒಂದೇ ದಿವಸಕ್ಕೆ ಬಂದಿಲ್ಲ. ಮಾನ್ಯ ನಾಗೇಗೌಡರಾಗಲಿ ಅಥವಾ ಜೆ.ಹೆಚ್. ಪಟೇಲರಾಗಲಿ ಕುಳಿತು ಅಷ್ಟು ಎತ್ತರಕ್ಕೆ ತಂದಿಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗ ಕಟ್ಟಿಸಿದ್ದಕ್ಕೆ ಅಲಮಟ್ಟಿ ಅಣೆಕಟ್ಟು 504 ಮೀಟರ್ ಎತ್ತರಕ್ಕೆ ಬಂದಿದೆ. ಅಣೆಕಟ್ಟು ಪೂರ್ಣವಾಗದೇ ಇರಬಹುದು. ಆದರೆ ಅದು 503 ಮೀಟರ್ ಎತ್ತರಕ್ಕಂತೂ ನಮ್ಮ ಕಾಲದಲ್ಲಿ ಕಟ್ಟಲಾಗಿತ್ತು. ಅದಕ್ಕಾಗಿ ತಾವು ಹಿಂದಿನ ಸರ್ಕಾರದ ಮೇಲೆ ಆ ರೀತಿ ಹೇಳುವುದು ಬೇಡ. ಆದರೆ ಇವತ್ತು ಮಾನ್ಯ ಸತ್ಯನಾರಾಯಣರವರು ಹೇಳಿದ ಹಾಗೆ ಈ ಪವರ್ ಪ್ರಾಜೆಕ್ಟ್ ತಡೆಹಿಡಿದಿದ್ದಾರೆ ಎಂಬುದಾಗಿ ತಿಳಿದು ಬಂದಿದೆ. ದಯವಿಟ್ಟು ಅವರ ಮೇಲೆ ಒತ್ತಡ ತಂದು ಅದನ್ನು ಕ್ಲಿಯರ್ ಮಾಡಿಸತಕ್ಕದ್ದು ಮಾಡುತ್ತೇವೆ ಎಂಬ ಮಾತನ್ನೂ ಕೂಡ ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಮ್ಮ ಕಾಂಗ್ರೆಸ್ಸಿನ ಸ್ನೇಹಿತರನ್ನು ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಆ ಮಾತು ಹೇಳಿಲ್ಲಿಲ್ಲ. ಒಂದಲ್ಲ ಒಂದು ರೀತಿ ಆಡಳಿತದಲ್ಲಿ ಇದ್ದಂತಹ ಜನ ಕಾರಣರು ಎಂದು ಹೇಳಿದೆ ಅಷ್ಟೆ. ನಾವು ವಿರೋಧ ಪಕ್ಷದಲ್ಲಿದ್ದೇವೆ, ನೀವೂ ಅಧಿಕಾರದಲ್ಲಿದ್ದು ಏನು ಮಾಡುತ್ತಿದ್ದಿರಿ ಎನ್ನುವ ಪ್ರಶ್ನೆಯನ್ನಲ್ಲ ನಾನಿಲ್ಲಿ ಕೇಳುವುದು. ನಾನು ಹೇಳುವಂಥಾದ್ದು ಏನೆಂದರೆ ಅವತ್ತಿನಿಂದ ನಮ್ಮ ಒತ್ತಾಯ ಏನಿದೆ ಅಂದರೆ ಈ ಕೃಷ್ಣಾ ಬೇಸಿನ್‌ಗೆ ಓರ್ವ ಜವಾಬ್ದಾರಿ ಇರುವಂತಹ ಕ್ಯಾಬಿನೆಟ್ ಸಚಿವರನ್ನು ಕೊಡಿ. ಬೇರೆ ಎಲ್ಲಾ ಜನರಿಗೆ ಯಾವುದೋ ಸಬ್ಸಿಡಿ ಕೊಡುತ್ತೇವೆ ಎಂದು ಹೇಳುತ್ತೀರಿ ಅಂಥದ್ದನ್ನು ಮಾಡದೇ, ಕುಣಿದು ಕುಪ್ಪಳಿಸುವಂತಹ ಕಾರ್ಯಕ್ರಮ ರೂಪಿಸದೇ ಬೇರೆ ಎಲ್ಲಾ ಯೋಜನೆಗಳನ್ನು ಸ್ಥಗಿತ ಮಾಡಿ ಆ ಹಣವನ್ನು ಈ ಯೋಜನೆಗೆ ಹಾಕಿ. ಒಂದು ಸಾರಿ ನೀವು ರೈತನ ಹೊಲಕ್ಕೆ ನೀರು ಕೊಡಿ, ಅವನು ನಿಮಗೆ ಬೇರೇನೂ ಕೇಳುವುದಿಲ್ಲ. ಅವನು ಗೌರವದಿಂದ ಬದುಕುತ್ತಾನೆ. ಇದು ಆವತ್ತಿನಿಂದ ಇವತ್ತಿನವರೆಗೂ ಇರತಕ್ಕ ನಮ್ಮ ಒತ್ತಾಯವಾಗಿದೆ. ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಮಾಡಲಿಲ್ಲ. ಹಿಂದಿನದನ್ನೇ ಈ ಸರ್ಕಾರದವರೂ ಮುಂದುವರೆಸಿಕೊಂಡು ಹೋಗುತ್ತಿದ್ದೀರಿ. ಈಗ ಸ್ವಲ್ಪ ಏನೋ ಮಾಡಲಿಕ್ಕೆ ಹೊರಟಿದ್ದೀರಿ, ಅದನ್ನು ಇನ್ನೂ ಸ್ವಲ್ಪ ಚುರುಕುಗೊಳಿಸಲಿಕ್ಕೆ ಏನಾದರೂ ನೀವು ಕಾರ್ಯಕ್ರಮಗಳನ್ನು ರೂಪಿಸಿದ್ದೀರಾ? ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಏಕೆಂದರೆ ನಮ್ಮ ಪಕ್ಕದ ರಾಜ್ಯದಲ್ಲಿ ನೀರನ್ನು ನಿಗದಿತ ಅವಧಿಯೊಳಗೆ ಬಳಸಿಕೊಂಡ ಉದಾಹರಣೆ ಇದೆ. ಪಕ್ಕದಲ್ಲಿ ಇರುವ ಆಂಧ್ರದಲ್ಲೂ ಸಹ 811 ಟಿ.ಎಂ.ಸಿ ನೀರನ್ನು ಎರಡು ಸಾವಿರ ವರ್ಷದೊಳಗಾಗಿ ಬಳಸಿಕೊಳ್ಳಬೇಕಾದುದನ್ನು ಉಪಯೋಗಿಸಿಕೊಂಡು ಈಗ 'ಬಿ' ಸ್ಕೀಮ್‌ನಲ್ಲಿ ಕೊಡಬೇಕಾಗಿರುವಂತಹದ್ದನ್ನು ಸುಮಾರು 110 ಟಿ.ಎಂ.ಸಿ. ನೀರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ನಮಗೆ ಈ ಬಗ್ಗೆ ಒಂದು ಭಯ ಏನಿದೆ ಎಂದರೆ ಒಂದು ಸಾರಿ 'ಬಿ' ಸ್ಕೀಮ್ ಬಗ್ಗೆ ನೀವು ಈಗಾಗಲೇ ಮಾತನಾಡಲಿಕ್ಕೆ ಶುರು ಮಾಡಿದ್ದೀರಿ. ಆದರೆ ಇವತ್ತು ಜಲಾಶಯಗಳನ್ನು ಕಟ್ಟಿಕೊಂಡು ನೀರಾವರಿ ಯೋಜನೆಗಳನ್ನು ಮಾಡಿಕೊಂಡು ಬಿಟ್ಟರೆ ನಾಳೆ ಅದಕ್ಕೂ ಸಹ ನಿಮಗೆ ಕುತ್ತು ಬರುವಂತಹ ಸಂದರ್ಭ ಇದೆ. ಜವಾಬ್ದಾರಿ ಇರುವಂತಹ ಸರ್ಕಾರ, ಅದು ಕಾಂಗ್ರೆಸ್ ಸರ್ಕಾರ ಇರಲಿ, ಜನತಾದಳ ಸರ್ಕಾರ ಇರಲಿ, ಅಧಿಕಾರದಲ್ಲಿ ಇದ್ಧಂತಹ ಸರ್ಕಾರ 'ಬಿ' ಸ್ಕೀಮ್‌ನಲ್ಲಿ ಕಾನೂನು ಬಾಹಿರವಾಗಿ ಆಂಧ್ರದ ಮುಲಾಜಿಗೆ ಬಲಿಯಾಗಿ, ಅದು ಪೂರ್ಣವಾಗುವುದಕ್ಕೆ ಹೇಗೆ ಬಿಟ್ಟುಕೊಟ್ಟಿರಿ. ನಾನು ಹೇಳುವಂತಾದ್ದು ಏನೆಂದರೆ ನಿಮ್ಮ ಕುರ್ಚಿ ಉಳಿಸಿಕೊಳ್ಳುವಂಥ ಕೆಲಸದ ಬಗ್ಗೆ ನೀವು ತಲ್ಲೀನರಾದಿರೇ ಹೊರತು ಪ್ರಾಮಾಣಿಕವಾಗಿ ನಮ್ಮ ಕನ್ನಡ ನಾಡಿನ ಜನರ ಹಿತದೃಷ್ಟಿಯಿಂದ ತಾವೇನು ಚಿಂತನೆಯನ್ನು ಮಾಡಬೇಕಾಗಿತ್ತೋ ಅದು ಆಗಲಿಲ್ಲ. ಹೀಗಾಗಿ ಇವತ್ತಿನ ದಿನ ಈ ಜನ ಸಫರ್ ಆಗುವಂತಹ ಒಂದು ದುಸ್ಥಿಗೆ ನೀವು ತಂದಿರಿ ಎಂದು ಅನಿವಾರ್ಯವಾಗಿ ಈ ಮಾತನ್ನು ನಾನಿಲ್ಲಿ ಹೇಳಬೇಕಾಗಿದೆ. ಆಲಮಟ್ಟಿ ಅಣೆಕಟ್ಟು ಸೇರಿಸಿ ಈ ಕೃಷ್ಣಾ ನದಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವಂತಹ 1,200 ಮೆಗಾವ್ಯಾಟ್ ಸಾಮರ್ಥ್ಯದ ಜಲ ವಿದ್ಯುತ್ ಯೋಜನೆ ಏನಿದೆ ಅದಕ್ಕೆ ಕೇಂದ್ರ ಸರ್ಕಾರ ಅನುಮತಿ ತಡೆಹಿಡಿದಿದೆ. ಇದು

ನಿಜವೇ? ನಮ್ಮವರೇ ಪ್ರಧಾನ ಮಂತ್ರಿಗಳಾಗಿದ್ದರು. ಏಕೆ ಅನುಮತಿ ತೆಗೆದುಕೊಂಡು ಬರಲಿಲ್ಲ? ಈ ಆಲಮಟ್ಟಿ ಅಣೆಕಟ್ಟಿಗೆ ಕಾನೂನು ಬಾಹಿರವಾದಂತಹ ತಜ್ಞರು, ನಿಮ್ಮ ಪೊಲಿಟಿಕಲ್ ಅಫೇರ್ಸ್ ನೋಡಿಕೊಳ್ಳಲು ಇದ್ದಂತಹ ತಜ್ಞರ ಸಮಿತಿಯನ್ನು ನೀವ್ಯಾಕೆ ಕಳುಹಿಸಿಕೊಟ್ಟಿರಿ. ಇವತ್ತಿನ ದಿವಸ ನಮ್ಮ ಪಕ್ಷದ ಇಬ್ಬರು ಶಾಸಕರು ಆ ಬಗ್ಗೆ ಈಗ ತಾನೇ ಮಾತನಾಡಿದರು. ಅವತ್ತು ಕಾನೂನು ಬಾಹಿರವಾದಂತಹ ತಜ್ಞರ ಸಮಿತಿ ಬಂದಾಗ ಸಾವಿರಾರು ಜನ ಹೋಗಿ ನಾವು ಧರಣಿ ಕುಳಿತುಕೊಂಡು ಆ ಬಗ್ಗೆ ಪ್ರತಿಭಟನೆ ನಡೆಸಿ ಅಲ್ಲಿಗೇ ಬಂದು ನೋಡುವವರಿಗೆ ಆ ಭಾಗದ ಜನರ ಅಭಿಪ್ರಾಯ ಗೊತ್ತಾಗಲಿ ಎಂದು ಪ್ರಯತ್ನಿಸಿದರೆ, ನಿಮ್ಮ ಪೊಲೀಸರು ನಮ್ಮನ್ನು ನಮ್ಮ ವೆಹಿಕಲ್‌ನಿಂದ ಕೆಳಕ್ಕೆ ಇಳಿಯವುದಕ್ಕೇ ಬಿಡದೇ ಲಾಠಿ ಚಾರ್ಜ್ ಮಾಡಿ ನಮ್ಮನ್ನು ತೆಗೆದುಕೊಂಡು ಹೋಗಿ ಅರೆಸ್ಟ್ ಮಾಡಿ ಉಳಿಸಿಕೊಂಡಿರಿ. ಅಂದರೆ ಯಾವ ರೀತಿ ಈ ಒಂದು ಕೆಲಸವನ್ನು ತಾವು ಮಾಡಿಕೊಂಡು ಹೊರಟಿದ್ದೀರಿ? ಅದೇ ರೀತಿ ಮಹದಾಯಿ ನದಿಯ ನೀರನ್ನು ಮಲಪ್ರಭಾ ನದಿಗೆ ಸೇರಿಸುವದರ ಬಗ್ಗೆ ಬಹಳ ವರ್ಷಗಳಿಂದ ಚಿಂತನೆ ಇದೆ. ಈ ಯೋಜನೆಯಿಂದ ಬಹಳ ದೊಡ್ಡ ಲಾಭವಾಗುತ್ತದೆ ಎಂಬುದು ನಿಮಗೆ ಗೊತ್ತಿದೆ. ಆ ದಿಕ್ಕಿನಲ್ಲಿ ತಾವೇನು ಪ್ರಯತ್ನವನ್ನು ಮಾಡಿದ್ದೀರಿ? ಬಹಳ ಮುಖ್ಯವಾದ ಒಂದು ಮಾತನ್ನು ನಾನು ಬಹಳ ಹೆಮ್ಮೆಯಿಂದ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಜುರಾಲಾ ಅಣೆಕಟ್ಟು ಎರಡು ರಾಜ್ಯದ ಒಪ್ಪಂದ ಮೀರಿ ಹೆಚ್ಚು ಎತ್ತರಕ್ಕೆ ಕಟ್ಟಿದ್ದಾರೆ ಎಂಬುದನ್ನು ಮೊದಲು ಪ್ರಸ್ತಾಪ ಮಾಡಿದವನೇ ನಾನು. ನಾನು ಅಲ್ಲಿಗೆ ಭೇಟಿ ನೀಡಿ ಆ ಬಗ್ಗೆ ಇಲ್ಲಿ ಬಂದು ಹೇಳಿದಾಗ ಅವತ್ತಿನ ಮಾನ್ಯ ಮುಖ್ಯಮಂತ್ರಿಗಳು ನನಗೆ ತಮಾಷೆ ಮಾಡಿದರು, ಛೇಡಿಸಿದರು. ನಿಮಗೆ ಏನೂ ಗೊತ್ತಿಲ್ಲವೆಂದು ಹೇಳಿದರು. ಎರಡೂ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಹೋಗಿ ಅಲ್ಲಿ ನೋಡಿಕೊಂಡು ಬಂದು ರಿಪೋರ್ಟ್ ಕೊಟ್ಟಿದ್ದಾರೆ. ಹೆಚ್ಚು ಎತ್ತರಕ್ಕೆ ಅಣೆಕಟ್ಟು ಕಟ್ಟಲಾಗಿದೆ ಎಂಬುದು ನಿಶ್ಚಯವಾಗಿದೆ. ತಾವೂ ಅದನ್ನು ಒಪ್ಪುತ್ತೀರಿ. ಹಿಂದೆ ಸನ್ಮಾನ್ಯ ನಾಗೇಗೌಡರು ಒಂದು ಭರವಸೆಯನ್ನು ಈ ಸದನಕ್ಕೆ ಕೊಟ್ಟಿರಿ. 1 ಟಿ.ಎಂ.ಸಿ. ನೀರನ್ನು ಮುಳುಗಡೆ ಆಗಿರುವಂತಹ ಪ್ರದೇಶಗಳಲ್ಲಿನ ಹಿನ್ನೀರನ್ನು ನಾನು ರೈತರಿಗೆ ಕೊಡುತ್ತೇನೆ ಎನ್ನುವ ಮಾತನ್ನು ತಾವು ಹೇಳಿದ್ದಿರಿ. ಆ ಬಗ್ಗೆ ಪತ್ರ ಬರೆದಿದ್ದೀರಾ? 1 ಟಿ.ಎಂ.ಸಿ ನೀರನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ? ಈ ಮುಳುಗಡೆಯಾಗಿರುವಂತಹ ಪ್ರದೇಶಗಳ ರೈತರಿಗೆ ಆಂಧ್ರದವರು ಇದುವರೆಗೆ ಎಷ್ಟು ದುಡ್ಡು ಕೊಟ್ಟಿದ್ದಾರೆ? ಎರಡು ಪವಿತ್ರವಾದಂತಹ ತೀರ್ಥಕ್ಷೇತ್ರಗಳು ಮುಳುಗಡೆಯಾಗುತ್ತಿವೆ. ಗೋಡೆ ಕಟ್ಟಬೇಕಾಗಿದೆ, ಸೇತುವೆ ಕಟ್ಟಬೇಕಾಗಿದೆ. ಆ ದಿಕ್ಕಿನಲ್ಲಿ ನೀವು ಏನು ಮಾಡಿದ್ದೀರಿ! ಜುರಾಲಾ ಅಣೆಕಟ್ಟು ಎತ್ತರ ಜಾಸ್ತಿ ಕಟ್ಟಿದ್ದಾರೆ ಎಂದು ಗಲಾಟೆ ಆದಾಗ ಮುಖ್ಯಮಂತ್ರಿಗಳು ಒಂದು ಸಭೆ ಕರೆದಿದ್ದರು. ಆ ಸಭೆಯಲ್ಲಿ ನಾವೆಲ್ಲಾ ಇದ್ದೆವು. ಅಲ್ಲಿ ನೀವು ಏನು ಹೇಳಿದಿರಿ, ಆಂಧ್ರ ಪ್ರದೇಶದವರು ಎಷ್ಟು ಹಣ ಡಿಪಾಸಿಟ್ ಮಾಡಿದ್ದಾರೋ ಇಲ್ಲವೋ ಅದರ ಬಗ್ಗೆ ನಾವು ಚಿಂತೆ ಮಾಡುವುದಿಲ್ಲ, ಕೂಡಲೇ ಈ ವರ್ಷ ಕೆಲಸ ಪ್ರಾರಂಭ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಸದನದ ಒಳಗಡೆ ತಾವು ಕೊಟ್ಟಿರಿ, ಆ ಸಭೆಯಲ್ಲೂ ಹೇಳಿದಿರಿ. ಆದರೆ ಅದನ್ನು ಮರೆತುಬಿಟ್ಟಿರಿ. ಒಂದು ತಿಂಗಳ ಹಿಂದೆ ನಾನು ಅಲ್ಲಿಗೆ ಹೋಗಿದ್ದೆ. ಈಗ ಅದೆಲ್ಲಾ ಇವತ್ತು ಮುಳುಗಡೆಯಾಗಿದೆ.

ಆ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಜನ ಒದ್ದಾಡುತ್ತಿದ್ದಾರೆ. ಅಂದರೆ ನೀವು ಇಲ್ಲಿ ಭರವಸೆ ಕೊಡುತ್ತೀರಿ, ಆದರೆ ಆ ಕಡೆಗೆ ವಿಶೇಷವಾದಂತಹ ಪ್ರಯತ್ನ ನಿಮ್ಮ ಕಡೆಯಿಂದ ಆಗುತ್ತಿಲ್ಲ ಎನ್ನುವಂತಹ ಮಾತನ್ನು ನಾನು ಬಹಳ ನೊಂದು ಇವತ್ತು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನು ಇವತ್ತು ಪ್ರಮುಖವಾಗಿರುವಂತಹ ಸಂಗತಿ ಏನೆಂದರೆ

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ರೈತರ ಜೀವನದ ಜೊತೆಗೆ ತಾವು ಒಂದು ರೀತಿಯ ಚೆಲ್ಲಾಟ ನಡೆಸಿದ್ದೀರಿ. ಮಾನ್ಯ ನಾಗೇಗೌಡರು ರೈತನ ಮಗ, ರೈತನ ಸಮಸ್ಯೆ ಅವರಿಗೆ ಗೊತ್ತಿದೆ. ನಾನು ನಿಮ್ಮನ್ನೇ ಕೇಳುತ್ತೇನೆ, ನೀವು ಆ ಭಾಗದಲ್ಲೂ ಇದ್ದಿರಿ, ನಿಮ್ಮ ಮನೆ ಮಠ ಮುಳುಗಡೆ ಆಗಿ ಹೋಗುತ್ತದೆ, ನಿಮ್ಮ ಹೊಲ ಮನೆಗಳನ್ನು ನೀವು ಕಳೆದುಕೊಳ್ಳುತ್ತೀರಿ, ಬೀದಿ ಪಾಲುಗುತ್ತೀರಿ ಎನ್ನುವ ಸ್ಥಿತಿ ಬಂದಾಗ ನಿಮ್ಮ ಬಗ್ಗೆ ನೀವೇನು ಯೋಚನೆ ಮಾಡುತ್ತಿದ್ದಿರಿ. ಇವತ್ತು ಈ ಒಂದು ಆಲಮಟ್ಟಿ ಜಲಾಶಯ ಪೂರ್ಣವಾಗುವಂತಹ ಕಾಲದಲ್ಲಿ ಎಷ್ಟು ಪ್ರದೇಶಗಳು ಮುಳುಗಡೆಯಾಗುತ್ತವೆ? ಎಷ್ಟು ಕುಟುಂಬಗಳು ಬೀದಿಪಾಲಾಗುತ್ತವೆ? ಎಂಬ ಬಗ್ಗೆ ಒಂದು ಬಾರಿ ಸರ್ವೆ ಮಾಡಿ, ಅವನಿಗೆ ಒಂದೇ ಗಂಟಿನಲ್ಲಿ ಒಂದು ಪರಿಹಾರವನ್ನು ಕೊಡುವಂತಹ ಪ್ರಯತ್ನ ಕಳೆದ 13-14 ವರ್ಷಗಳಿಂದ ಆಗಲೇ ಇಲ್ಲ. ಅದರ ವಿವರಕ್ಕೆ ನಾನೀಗ ಬರುತ್ತೇನೆ. ಈಗಲಾದರೂ ಅದನ್ನು ಮಾಡುತ್ತೀರಾ? ನಾನು ನಿಮಗೆ ಇವತ್ತು ಒಂದು ಉದಾಹರಣೆ ಕೊಡುತ್ತೇನೆ. ಯಾವ ಪರಿಸ್ಥಿತಿ ಬಂದಿದೆ ಎಂಬ ಬಗ್ಗೆ ಲೇಟೆಸ್ಟ್ ಒಂದು ಉದಾಹರಣೆಯನ್ನು ನಿಮಗೆ ಕೊಟ್ಟು ವಿವರ ನೀಡುತ್ತೇನೆ. ಬಾಗಲಕೋಟೆ ಹತ್ತಿರ ಮಲ್ಲಾಪುರ ಎಂಬ ಒಂದು ಗ್ರಾಮ ಇದೆ. ಇದುವರಿವಿಗೂ ನಿಮ್ಮ ಅಧಿಕಾರಿಗಳು ಲೆಕ್ಕಾಚಾರ ಹಾಕಿರುವ ಪ್ರಕಾರ ಅದು ಮುಳುಗಡೆ ಯಾಗುತ್ತದೆ ಎಂದು ಗೊತ್ತಿರ್ಲಲಿಲ್ಲ. ಈಗ ನೀವು ಫೋನ್ ಮಾಡಿ ರಿಪೋರ್ಟ್ ತರಿಸಿಕೊಳ್ಳಿ. ಈಗ ಆ ಗ್ರಾಮ ಮುಳುಗಡೆಯಾಗುತ್ತದೆ. ಅಂದರೆ ನೀವು ಮಾಡಿರುವಂತಹ ಸರ್ವೆ ಕೆಲಸ ಸರಿಯಾಗಿಲ್ಲ. ಎಲ್ಲೆಲ್ಲಿ ಮುಳುಗಡೆಯಾಗುತ್ತಿದೆ, ಎಷ್ಟು ಮುಳುಗಡೆಯಾಗುತ್ತದೆ ಅಂತ ಹೇಳಿ. ನೀವು ನಿಮ್ಮ ದಾಖಲೆಗಳನ್ನು ತಮ್ಮಲ್ಲಿ ಏನು ಇಟ್ಟುಕೊಂಡಿರುತ್ತೀರೋ ಅದು ಸರಿಯಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ತಮಗೆ ಗೊತ್ತಿರುವ ಪ್ರಕಾರ ಇವತ್ತು ಆಲಮಟ್ಟಿಯಲ್ಲಿ 513.40 ಮೀಟರ್ ಎತ್ತರಕ್ಕೆ ನೀರು ಇದೆ. ಮಾನ್ಯ ನಾಗೇಗೌಡರೇ, ಆ ಹಿನ್ನೀರಿನಿಂದ ಇವತ್ತು 8-10 ಸಾವಿರ ಎಕರೆ ಪ್ರದೇಶ 4(1), 6(1) ನೋಟಿಫಿಕೇಷನ್ ಆಗದೇ ಇರುವಂಥಾದ್ದು ಮುಳುಗಡೆಯಾಗಿದೆ. 4(1), 6(1) ನೋಟಿಫಿಕೇಷನ್ ಆಗದೇ ಮುಳುಗಡೆಯಾಗುತ್ತದೆ ಎಂದು ನೀವು ಅಂದುಕೊಳ್ಳದೇ ಇರುವಂತಹ ಪ್ರದೇಶ 8-10 ಸಾವಿರ ಎಕರೆ ಮುಳುಗಡೆಯಾಗಿದೆ. ಅಲ್ಲಿ ಸೂರ್ಯಕಾಂತಿ ಬೆಳೆ ಸೇರಿ ಇನ್ನಿತರ ಬೆಳೆಗಳಿವೆ, ಬೋರ್‌ವೆಲ್ಸ್ ಇವೆ, ಅವರಿಗೆ ಏನಾದರೂ ಪರಿಹಾರ ನೀಡುವ ಬಗ್ಗೆ ಯೋಚನೆ ಮಾಡಿದ್ದೀರಾ? ನಿಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಬಂದಿದ್ದಾರಾ? ಇದರ ಬಗ್ಗೆ ಒಂದು ಸ್ಪಷ್ಟವಾಗಿ ನಾನು ಮಲ್ಲಾಪುರ ಗ್ರಾಮದ ಉದಾಹರಣೆ ಕೊಡುತ್ತಿದ್ದೇನೆ. ಈ ರೀತಿ ಮುಳುಗಡೆ ಆಗುತ್ತಿರುವಂತಹ ರೈತರ ಗತಿ

ಏನು? ನಿಮ್ಮ ಜಾಮ್‌ದಾರ್‌ರವರ ಬಗ್ಗೆ ಪುರ್ನವಸತಿ ಕೆಲಸ ಕೈಗೊಂಡ ಬಗ್ಗೆ ವರ್ಲ್ಡ್ ಬ್ಯಾಂಕ್ ಅಧಿಕಾರಿಗಳು ಅಪ್ರಿಷಿಯೇಟ್ ಮಾಡಿದ್ದಾರೆ. ತುಂಬಾ ಸಂತೋಷದ ವಿಷಯ. ಅಲ್ಲಿ. ಅವರೊಬ್ಬ ಪ್ರಾಮಾಣಿಕ ಅಧಿಕಾರಿ, ಒಳ್ಳೆಯ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಆದರೆ ಪ್ರಾಮಾಣಿಕರಾದ್ದಂತಹ ನಮ್ಮ ಐ.ಪಿ.ಎಸ್. ಹಾಗೂ ಐ.ಎ.ಎಸ್ ಅಧಿಕಾರಿಗಳೇನಿದ್ದಾರೆ ಅವರು ಕಾನೂನು ಚೌಕಟ್ಟು ಬಿಟ್ಟು ಆ ಕಡೆ ಈ ಕಡೆ ಅಲ್ಲಾಡುವುದಿಲ್ಲ. ಈ ರೀತಿ ಆದರೆ ಆಗುವುದಿಲ್ಲ. ಮಾನವೀಯ ದೃಷ್ಟಿಯಿಂದ ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಂಡು ಒಂದು ರಿಪೋರ್ಟ್ ಮಾಡಿ ತಕ್ಷಣ ಪರಿಹಾರ ಕೊಡುವಂತಹ ಧೈರ್ಯವನ್ನು ತೋರಿಸಿದಾಗ ಮಾತ್ರ ನಾವು ಅವರನ್ನು ಅಪ್ರಿಷಿಯೇಟ್ ಮಾಡಬಹುದು. ಆದರೆ ಈ ರೀತಿ ಆಗುತ್ತಿಲ್ಲ. ಕಾನೂನು ಬಿಟ್ಟು ಸ್ವಲ್ಪ ಆ ಕಡೆ ಈ ಕಡೆ ಹೋದರೆ ಅದು ಎಲ್ಲಿ ನಮ್ಮ ಮೈಮೇಲೆ ಬರುತ್ತದೋ ಎಂಬ ದೃಷ್ಟಿಯಿಂದ ಅವರು ಇವತ್ತು ಕಾನೂನು ಚೌಕಟ್ಟಿನಲ್ಲೇ ಕೆಲಸ ಮಾಡುತ್ತಿದ್ದಾರೆ. ಇವತ್ತು ಕಳೆದ ಒಂದು ವರ್ಷದ ಪ್ರೋಗ್ರೆಸ್ ನೋಡಿದರೆ ಅಲ್ಲಿ ಏನು ಲೋಪವಾಗಿದೆ? ಏನು ದೋಷವಾಗಿದೆ? ಅಲ್ಲಿ ಏನು ಆರೋಪಗಳಿವೆ, ಅಲ್ಲಿ ಕಾಂಟ್ರಾಕ್ಟರ್‌ಗಳು ಎಷ್ಟು ತಿಂದಿದ್ದಾರೆ, ಎಷ್ಟು ಲೂಟಿ ಮಾಡಿದ್ದಾರೆ, ಎಂಬುದೆಲ್ಲಾ ಗೊತ್ತಾಗುತ್ತದೆ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ, ಈ ವರ್ಷ ಯಾವುದೇ ಕಾರಣಕ್ಕೂ ನೀವು ಹೋದ ವರ್ಷದ ಪ್ರೋಗ್ರೆಸ್ ತೋರಿಸುವುದಕ್ಕಾಗುವುದಿಲ್ಲ. ಪ್ರಾಮಾಣಿಕ ಐ.ಎ.ಎಸ್. ಅಧಿಕಾರಿಗಳಿಂದ ಬಹಳ ವರ್ಷಗಳಿಂದ ಇರುವ ಆ ಕಾಂಟ್ರಾಕ್ಟರ್ ನಾಟಕ ಮಾಡಿಕೊಂಡು ತಿಂದು ತೇಗಿ ಅಜೀರ್ಣವಾಗುವಂತೆ ಏನಿರುತ್ತಾರೆ ಅಂತಹವರನ್ನು ಇವರಿಗೆ ಹ್ಯಾಂಡಲ್ ಮಾಡುವುದಕ್ಕಾಗುವುದಿಲ್ಲ. ಇದು ಬಹಳ ಕಷ್ಟುವಾದುದು. ಅದಕ್ಕೆ ನಾನೇನು ಹೇಳುತ್ತೇನೆ ಎಂದರೆ, ಇವತ್ತು, ಏನೊಂದು ಪ್ರೋಗ್ರೆಸ್ ಆಗಿದೆ, ಅದಕ್ಕಿಂತ 10 ಹೆಜ್ಜೆ ಮುಂದೆ ಈ ವರ್ಷ ಹೋಗುತ್ತೇವೆ ಎಂದು ನೀವು ಹೇಳುವುದಾದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಇಲ್ಲದಿದ್ದರೆ ಟೆಕ್ನಿಕಲ್ ಪರ್ಸೋನಲ್ ಅನ್ನು ಅವರ ಜೊತೆಗೆ ಕೊಟ್ಟು ಅಲ್ಲಿ ಪ್ರೋಗ್ರೆಸ್ ಆಗುವ ಹಾಗೆ ನೋಡಿಕೊಳ್ಳಿ. ಇಲ್ಲದಿದ್ದರೆ ಏನೋ ಒಂದು ಕೊಟ್ಟಿದ್ದನ್ನೇ ಮುಂದಿನ ವರ್ಷದಲ್ಲಿ ಚರ್ಚೆ ಮಾಡುವಂತಹ ಕಾಲದಲ್ಲಿ ಹೇಳಿದರೆ ಸರ್ವನಾಶವಾಗುತ್ತದೆ. ಅದಕ್ಕೋಸ್ಕರ ಈಗಾಗಲೇ ನಾನು ಈ ಎಚ್ಚರಿಕೆಯನ್ನು ಸನ್ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಆಲಮಟ್ಟಿ ಅಣೆಕಟ್ಟು ಜಲಾಶಯ ನಿರ್ಮಾಣವಾಗುವಂತಹ ಕಾಲದಲ್ಲಿ ಕೊನೆಯ ಹಂತದಲ್ಲಿ ಮುಕ್ಕಾಲು ಭಾಗ ಬಾಗಲಕೋಟೆ ಮುಳುಗಡೆಯಾಗುತ್ತದೆ ಎಂಬುದು ನಿಮಗೆ ಗೊತ್ತಿದೆ. ನನಗೆ ಸಿಕ್ಕಿರುವ ಅಂಕಿ ಅಂಶಗಳ ಪ್ರಕಾರ ಕೊನೆಯ ಹಂತದಲ್ಲಿ ಮುಳುಗಲಿರುವಂತಹ ಕಟ್ಟಡಗಳು ಸುಮಾರು 12 ಸಾವಿರ ಆಗಿದೆ. ಬೀದಿ ಪಾಲಾಗಿರುವ ಕುಟುಂಬಗಳು ಸುಮಾರು 15 ಸಾವಿರ ಇದ್ದರೆ ಜನ ವಸತಿಗೆ ತೊಂದರೆಯಾಗಲಿರುವುದು 50-60 ಸಾವಿರ ಜನಸಂಖ್ಯೆಯಾಗಿದೆ. ಜಾಸ್ತಿ ಎಂದರೆ ಇದು ಪೂರ್ಣಗೊಳ್ಳಲು 2-3 ವರ್ಷಗಳಷ್ಟೇ ಆಗುತ್ತದೆ ಅಲ್ಲವೇ? ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ, ನನಗೆ ಮನೆ ಇದೆ, ಕೊನೆಯ ಪಕ್ಷ ನೀವು ವೆಲ್ ಇನ್ ಅಡ್ವಾನ್ಸ್ ಆಗಿ, ಒಂದು ಸೈಟು ಕೊಟ್ಟು, ಪರಿಹಾರ ನಿಧಾನವಾಗಿ ಕೊಡಿ, ಪರವಾಗಿಲ್ಲ, ನನಗೆ ಏನೋ ಒಂದು ಸ್ವಲ್ಪ ಇದೆ, ನಾನು ಮನೆ ಕಟ್ಟಿಕೊಂಡು ನಾನು ಬದುಕಿಕೊಳ್ಳುತ್ತೇನೆ. ಆದರೆ ಸನ್ಮಾನ್ಯ ಅಧ್ಯಕ್ಷರೇ, ಇದುವರೆವಿಗೂ ಆಲಮಟ್ಟಿ ನೀರಿನಿಂದಾಗಿ ಯಾವ್ಯಾವುದು

ಮುಳುಗಡೆಯಾಗುತ್ತದೆ? ಯಾರ್‍ಯಾರು ಮನೆಗಳನ್ನು ಕಳೆದುಕೊಳ್ಳುತ್ತಾರೆ ಎನ್ನುವುದು ಸರ್ಕಾರಕ್ಕೆ ಗೊತ್ತಿದ್ದರೂ ಸಹ ಇವತ್ತು ನಿವೇಶನಗಳನ್ನು ಕೊಡುವಂತಹ ವ್ಯವಸ್ಥೆ ಸರಿಯಾಗಿ ಮಾಡುತ್ತಿಲ್ಲ. ಈ ವರ್ಷ ನಿಮ್ಮ ಪ್ರಕಾರ 600 ಮನೆಗಳು ಮುಳುಗಡೆಯಾಗುತ್ತವೆ ಎಂದು ಹೇಳಿದ್ದೀರಿ. ಎರಡು ವರ್ಷದಿಂದ ನೀವು ಮನೆಗಳಿಗೆ ಪರಿಹಾರ ಕೊಟ್ಟಿದ್ದೀರಿ. ಆದರೆ ಅವರಿಗೆ ನೀವು ಸೈಟು ಯಾವಾಗಿನಿಂದ ಕೊಡುತ್ತಿದ್ದೀರಿ? ಕೇವಲ ಎರಡು ತಿಂಗಳಿಂದ ಮಾತ್ರ ನೀವು ಅವರಿಗೆ ಸೈಟು ಕೊಡುತ್ತಿದ್ದೀರಿ. ಅದರಲ್ಲೂ ಇನ್ನೂ 100-150 ಜನರಿಗೆ ಸೈಟುಗಳನ್ನು ಕೊಟ್ಟಿಲ್ಲ. ಯಾರಿಗೆ ಈ ಫಸ್ಟ್ ಸ್ಟೇಜ್‌ನಲ್ಲಿ 600 ಮನೆಗಳು ಮುಳುಗಡೆಯಾಗುತ್ತವೆ ಎಂದು ನೀವು ಹೇಳುತ್ತೀರೋ ಆ ಎಲ್ಲಾ ಜನರಿಗೆ ಈಗಲೂ ನೀವು ಸೈಟು ಕೊಟ್ಟಿಲ್ಲ, ಆದರೆ ಪರಿಹಾರ ಕೊಟ್ಟಿದೀರಿ. ದುಡ್ಡನ್ನು ಅವರು ಖರ್ಚು ಮಾಡಿಕೊಂಡಿರುತ್ತಾರೆ, ಹೀಗಿರುವಾಗ ಅವನು ಮನೆ ಹೇಗೆ ಕಟ್ಟಿಕೊಳ್ಳುತ್ತಾನೆ, ಎಲ್ಲಿಂದ ದುಡ್ಡು ತರುತ್ತಾನೆ? ಅದಕ್ಕೆ ನಾನು ಹೇಳುವಂಥಾದ್ದು ಏನೆಂದರೆ ಕೊನೆ ಹಂತದಲ್ಲಿ ಬಾಗಲಕೋಟೆಯ ಮುಕ್ಕಾಲು ಭಾಗ ಮುಳುಗಡೆಯಾಗುತ್ತದೆ ಎಂದು ನೀವೇನು ಅಂದುಕೊಂಡಿದ್ದೀರೋ ಆ ಎಲ್ಲರಿಗೂ ಸಹಾ ಒಂದೇ ಬಾರಿ ಆ ಒಂದು ಸೈಟುಗಳನ್ನು ಕೊಡುವಂತಹ ಪ್ರಯತ್ನ ಮಾಡಿ, ಒಂದೇ ಗಂಟಿನಲ್ಲಿ ಪರಿಹಾರ ಕೊಡುವಂತಹ ವ್ಯವಸ್ಥೆ ಮಾಡಿ. ಆಗ ಈ ಪುನರವಸತಿಗೆ ಒಂದು ಅರ್ಥ ಬರುತ್ತದೆ, ಅವನು ಮನೆ ಮಠಗಳನ್ನು ಕಳೆದುಕೊಂಡಿದ್ದಕ್ಕೆ ಗೌರವದಿಂದ ಬದುಕುವಂತಹ ವ್ಯವಸ್ಥೆಯಾಗುತ್ತದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಾವು 1983ರಲ್ಲಿ ಬಾಗಲಕೋಟೆ ಟೌನ್ ಡೆವಲೆಪ್‌ಮೆಂಟ್ ಅಥಾರಿಟಿ ಎಂದು ರಚನೆ ಮಾಡಿದಿರಿ. ಆ ಸಮಯದಲ್ಲಿ ನಾಲ್ಕೂವರೆ ಸಾವಿರ ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಂಡಿರಿ. ಎಂದರೆ ನಾಲ್ಕೂವರೆ ಸಾವಿರ ಜಮೀನು ಭೂಸ್ವಾಧೀನ ಮಾಡಿಕೊಂಡರೂ ಸಹ, ಅದಕ್ಕೆ ಡೆವಲೆಪ್‌ಮೆಂಟ್ ಅಥಾರಿಟಿ ಮಾಡಿದರೂ ಸಹ ಆ ಜಮೀನಿನಲ್ಲಿ ಪೂರ್ಣ ಭಾಗವನ್ನು ಹಂಚಿ ನಿರಾಶ್ರಿತರಿಗೆ ಮನೆಮಠ ಕಳೆದುಕೊಂಡವರಿಗೆ ಸೈಟ್ ಕೊಡುವುದಕ್ಕೆ ನಿಮಗೆ ತೊಂದರೆ ಏನಾಗಿದೆ? ಒಂದು ಅಂದಾಜಿನ ಪ್ರಕಾರ ಹೊಸ ಬಾಗಲಕೋಟೆ ಕಟ್ಟುವುದಕ್ಕೆ 900 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದು ಜಾಸ್ತಿಯಾಗುತ್ತಾ ಹೋಗುತ್ತದೆ. ಆದರೆ ಆ ಲೆಕ್ಕದಲ್ಲಿ ಮಾಡಿದರೂ ಸಹ ತಿಂಗಳಿಗೆ ಸುಮಾರು 75 ಕೋಟಿ ರೂಪಾಯಿಗಳು ಅಥವಾ ದಿನಕ್ಕೆ ಎರಡೂವರೆ ಕೋಟಿ ರೂಪಾಯಿಗಳಂತೆ ಖರ್ಚು ಮಾಡಬೇಕಾಗುತ್ತದೆ. ಆ ರಭಸದಲ್ಲಿ ಕೆಲಸವಾಗಬೇಕು. ಇವತ್ತು ಬಾಗಲಕೋಟೆಯಲ್ಲಿ 48 ಸೆಕ್ಟಾರ್‌ನ ಎರಡು ನಗರವನ್ನು ಕಟ್ಟಬೇಕು ಎಂದು ಯೋಜನೆ ಮಾಡಿದ್ದೀರಿ. ಆದರೆ ಒಂದು ಸೆಕ್ಟಾರ್‌ನಲ್ಲಿ ಸುಮಾರು 500 ಗುಂಟೆ ಜಮೀನು ಎಂದರೆ ಈ ರೀತಿಯಾಗಿ 98 ಸೆಕ್ಟಾರ್‌ಗಳು ಎಂದು ಪ್ಲಾನ್ ಮಾಡಿದ್ದೀರಿ. ಆದರೆ, ಇದುವರೆವಿಗೂ ಆದಂತಹ ಪ್ರೋಗ್ರೆಸ್ ಏನು? ಒಂದು ಭಾಗದಲ್ಲಿ ಕೇವಲ ಆರು ಸೆಕ್ಟಾರ್ ಮಾತ್ರ ಮಾಡಿಕೊಂಡಿದ್ದೀರಿ. ಉಳಿಯುವಂಥಾದ್ದು ಸುಮಾರು 90 ಪರ್ಸೆಂಟ್ ಕೆಲಸ. ಆ ಹಿನ್ನೆಲೆಯಲ್ಲಿ ಆ ಪುನರ್ ವಸತಿ ಮಾಡುವುದಕ್ಕೆ ವಿಶೇಷವಾಗಿ ಬಾಗಲಕೋಟೆಯಲ್ಲಿ ಮುಳುಗಡೆ ಆಗುವಂತಹ ಜನರಿಗೆ ನೀವು ಏನೂ ಮಾಡಿಲ್ಲ. ಅದರ ಕಡೆ ಗಮನ ಕೊಡಿ. ಕಳೆದ 10-12 ವರ್ಷದ ಈಚೆಗೆ ಯಾರು ದೊಡ್ಡವರು ಇದ್ದರು, ಮನೆಮಠ ಬಿಟ್ಟರು, ಬೇರೆ ಬೇರೆ ಕಾರಣಕ್ಕೋಸ್ಕರ ಅಲ್ಲಿ ಮನೆಗಳನ್ನು

ಕಟ್ಟಿಕೊಂಡು ಸಣ್ಣಪುಟ್ಟ ವ್ಯವಸ್ಥೆ ಮಾಡಿಕೊಂಡು ಬದುಕುತ್ತಿದ್ದಾರೆ. ಬದುಕುವುದಕ್ಕೆ ಏನಾದರೂ ಒಂದು ದಾರಿ ಬೇಕಲ್ಲ. ಆದರೆ ಅವರಿಗೆ ನೀವು ಏನು ಹೇಳುತ್ತೀರಿ ಅವತ್ತು ಮುಳುಗಡೆ ಆಗುವ ಸಮಯದಲ್ಲಿ ನಾವು ಏನು ಸರ್ವೇ ಮಾಡಿದ್ದೆವು, ಆ ಕಾಲದಲ್ಲಿ ನಿನ್ನ ಹೆಸರು ಇರಲಿಲ್ಲವೆಂದು ಹೇಳುತ್ತೀರಿ ಆದರೆ ಓಟರ್ ಲಿಸ್ಟ್‌ನಲ್ಲಿ ಅವನ ಹೆಸರು ಇದೆ. ಅವನು ಯಾವುದೋ ಕಾರಣಕ್ಕೆ ಮನೆ ಬಿಟ್ಟು ಬೇರೆ ಕಡೆ ಮನೆ ಮಾಡಿಕೊಂಡಿದ್ದಾನೆ. ನಿಮ್ಮ ಅಧಿಕಾರಿಗಳು ಏನು ಹೇಳುತ್ತಾರೆಂದರೆ ಅದಕ್ಕೆ ದಾಖಲೆ ತೆಗೆದುಕೊಂಡು ಬಾ ಎಂದು ಹೇಳುತ್ತಾರೆ. ಓಟರ್ ಲಿಸ್ಟ್‌ನಲ್ಲಿ ಹೆಸರಿದ್ದು, ಹಾಲಿ ಅಲ್ಲಿ ಅವನ ಜಮೀನು ಇದೆ. ಅವನು ಪರಿಹಾರ ತೆಗೆದುಕೊಳ್ಳುವುದಕ್ಕೋಸ್ಕರ ಶೆಡ್ ಹಾಕಿಕೊಂಡರೆ ಅವನಿಗೆ ಕೊಡಬೇಡಿ. ಬಾಗಲಕೋಟೆ ನಗರದಲ್ಲಿ ಕಳೆದ 10-12 ವರ್ಷಗಳ ಈಚೆಗೆ ಕೆಲವು ಕುಟುಂಬಗಳು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಂಗಡಿ ಮುಗ್ಗಟ್ಟನ್ನು ಹಾಕಿಕೊಂಡಿದ್ದಾರೆ. ಅವರಿಗೆ ಸಾಧ್ಯವಿಲ್ಲವೆಂದು ಹೇಳುತ್ತೀರಿ. ನೀವು ಬೇರೆಯವರಿಗೆ ಕೊಡುವಂತಹ ರೀತಿಯಲ್ಲೇ ಅವನಿಗೆ ಪರಿಹಾರ ಕೊಡಬೇಕು. ಅವನಿಗೂ ಇವನಿಗೂ ಡಿಸ್ಟಿಂಗ್‌ವಿಷ್ ಮಾಡಬೇಡಿ. ಇದು ಭಿಕ್ಷೆ ಆಗಬಾರದು. ಅವನು ಬದುಕುವುದಕ್ಕೆ ಆಧಾರವಾಗಬೇಕು. ನೀವೇನು ಉಪಕಾರ ಮಾಡುತ್ತಿದ್ದೀರಾ? ಅಲ್ಲಿ ಮುಳುಗಡೆ ಆಗುತ್ತದೆ, ಮನೆ ಮಠ ಕಳೆದುಕೊಳ್ಳುತ್ತಾರೆ ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ. ಅವನು ಸ್ಯಾಕ್ರಿಫೈ ಮಾಡುತ್ತಾನೆ. ಅವನಿಗೆ ಏನು ಬೇಕೋ ಅದನ್ನು ಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಬಾಗಲಕೋಟೆಯಲ್ಲಿ ಅನಧಿಕೃವಾಗಿ ಕಟ್ಟಿರುವಂತಹ 200 ಮನೆಗಳು ಬರುತ್ತವೆ. ಆ ಮನೆಗಳನ್ನು ಏನು ಕಟ್ಟಿದ್ದಾರೆ, ಆ ಜಾಗದಲ್ಲಿ ಮನೆಗಳನ್ನು ಕಟ್ಟಬೇಡಿ ಎಂದು ನೋಟಿಫೈ ಮಾಡಿದ್ದರೂ ಕಟ್ಟಿದ್ದಾರೆ. ಇದಕ್ಕೆ ಪರಿಹಾರ ಕೊಡುವ ರೀತಿಯಲ್ಲಿ ಆದರೂ ತಾವು ಮಾಡಬೇಕೆಂದು ಹೇಳಿದಿರಿ. ಇದರ ಬಗ್ಗೆ ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ತೀರ್ಮಾನ ಮಾಡಿ ಕ್ಯಾಬಿನೆಟ್ ಮುಂದೆ ತರಬೇಕೆಂದು ಆಲೋಚನೆ ಮಾಡಿಕೊಂಡಿದ್ದೇವೆ, ಅದರ ಬಗ್ಗೆ ಮಾಡಬೇಕು ಎಂದು ಯೋಚನೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಟ್ಟಿದ್ದಾರೆ, ನಾನು ಹೇಳುವುದು ಸಾಮಾನ್ಯ ಜನರು ಬದುಕುವುದಕ್ಕೆ ಜಾಗ ಬೇಕಲ್ಲ. 20 ವರ್ಷಕ್ಕೆ ಏನಾಗಬಹುದು ಎಂದು ಅಲ್ಲಿ ಕಟ್ಟಿದ್ದಾರೆ. ಅದರಲ್ಲಿ ಬೇರೆ ಕಾರಣ ಏನೂ ಇಲ್ಲ. ತಾವೇನಾದರೂ ದೊಡ್ಡ ಪ್ರಮಾಣದಲ್ಲಿ ಈ ಒಂದು ಪುನರ್ವಸತಿ ಮಾಡುವಂತಹ ಭಾಗದಲ್ಲಿ ಆಯಿತು, ಹೊಸ ಟೌನ್‌ಶಿಪ್ ಮಾಡುವಂತಹ ಕಡೆಗಳಲ್ಲಿ ಗ್ರೂಪ್ ಹೌಸಿಂಗ್ ಸ್ಕೀಮ್ ಬಗ್ಗೆ ಯೋಜನೆ ಮಾಡಬಹುದೇ? ತಾವು ಅದರ ಬಗ್ಗೆ ಯೋಚನೆ ಮಾಡಿ. ಮತ್ತೆ ಇಲ್ಲಿ ಏನಾದರೂ ಒಂದು ಇಂಡಸ್ಟ್ರಿಯಲ್ ಗ್ರೋಥ್ ಸೆಂಟರ್ ಮಾಡುಬಹುದೇ? ಆಗ ಇಂಡಸ್ಟ್ರಿ ಪ್ರಾರಂಭ ಮಾಡುವುದಕ್ಕೆ ತಾವು ಎನ್‌ಕರೇಜ್‌ಮೆಂಟ್ ಕೊಟ್ಟ ಹಾಗೆ ಆಗುತ್ತದೆ. ಹೆಚ್ಚು ಜನ ಇಲ್ಲಿ ಬರುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ಇಂಡಸ್ಟ್ರಿಯಲ್ ಗ್ರೋಥ್ ಸೆಂಟರ್‌ಗೆ ಎನ್‌ಕರೇಜ್ ಮಾಡುವ ದೃಷ್ಟಿಯಿಂದ ಎಲ್ಲೆಲ್ಲೋ ಮಾಡುವವರಿಗೆ ಅಲ್ಲಿ ಬಂದು ಮಾಡುವವರಿಗೆ ಹೆಚ್ಚಿನ ಇನ್‌ಸೆಂಟೀವ್ ಕೊಟ್ಟು, ಅದರಲ್ಲಿ ಮಾಡಿ ಎಂದರೆ ಅಲ್ಲಿ ಜನರಿಗೆ ಉದ್ಯೋಗ ಮಾಡುವುದಕ್ಕೆ

ಅನುಕೂಲವಾಗುತ್ತದೆ. ಇಲ್ಲಿ ಮಾನ್ಯ ರೆವಿನ್ಯೂ ಸಚಿವರು ಇದ್ದಾರೆ, ಈ ಪುನರ್ವಸತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಾಗಾರಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡಿ. ಏಕೆಂದರೆ ಈ ಹಳ್ಳಿಗಳಲ್ಲಿ ಮನೆ ಮಠಗಳನ್ನು ಕಳೆದುಕೊಂಡವರು ಕೆಲವು ಕುಶಲಕರ್ಮಿಗಳು ಕೆಲಸ ಮಾಡುವಂತಹವರು ಒಬ್ಬ ಕಾರ್ಪೆಂಟರ್, ಪ್ಲಂಬರ್, ಒಬ್ಬ ಎಲೆಕ್ಟ್ರಿಷಿಯನ್, ಗಾರೆ ಕೆಲಸ ಮಾಡಬಹುದು. ಒಬ್ಬ ವೆಲ್ಡರ್ ಆಗಬಹುದು, ಈ ರೀತಿಯ ಒಂದು ಟ್ರೈನಿಂಗ್ ಕೊಟ್ಟರೆ, ಅವರಲ್ಲಿ ಜಮೀನು ಕಳೆದುಕೊಂಡಿರುವವರು, ಅಥವಾ ಜಮೀನು ಮನೆ ಮಠ ಇಲ್ಲದೆ ಇರುವವರು ಇದ್ದಾರೆ. ಅವನು ಅವನ ಕಾಲಮೇಲೆ ನಿಲ್ಲುವಂತಹ ಸ್ಥಿತಿಯನ್ನು ತಾವು ಮಾಡಿಕೊಟ್ಟಹಾಗೆ ಆಗುತ್ತದೆ. ಅದಕ್ಕಾಗಿ ಈ ಒಂದು ತರಬೇತಿ ಕಾರ್ಯಾಗಾರವನ್ನು ಮಾಡುವುದರ ಬಗ್ಗೆ ಯೋಚನೆ ಮಾಡಬೇಕು. ಎರಡನೆಯದು ಇಂಡಸ್ಟ್ರಿಯಲ್ ಗ್ರೋಥ್ ಸೆಂಟರ್ ಮಾಡುವ ಬಗ್ಗೆ, ಮತ್ತು ಗ್ರೂಪ್ ಹೌಸಿಂಗ್ ಸ್ಕೀಮ್ ಬಗ್ಗೆ ತಾವು ಗಮನವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಸನ್ಮಾನ್ಯ ಖರ್ಗೆಯವರು ಒಂದು ವಿಚಾರ ಪ್ರಸ್ತಾಪ ಮಾಡಿದರು. ಬಾಗಲಕೋಟೆಯಲ್ಲಿ ರಸ್ತೆ ನಿರ್ಮಾಣ ಮಾಡುವುದಕ್ಕೆ ಸುಮಾರು 63 ಲಕ್ಷ ರೂಪಾಯಿಗಳಷ್ಟು ಹಣ ಒಂದು ಕಿಲೋಮೀಟರಗೆ ಖರ್ಚು ಮಾಡಿದ್ದಾರೆ. ನಿಮಗೆ ಆಶ್ಚರ್ಯ ಆಗಬಹುದು. ಬಾಗಲಕೋಟೆ ಹೊಸ ನಗರ ಎಂದು ನಿರ್ಮಾಣ ಮಾಡಿದ್ದಾರೆ, ನಾನು ಅಲ್ಲಿ ಹೋಗಿ ಬಂದಿದ್ದೇನೆ, ತಾವೂ ಹೋಗಿ ನೋಡಿಕೊಂಡು ಬನ್ನಿ. ನ್ಯೂ ಟೌನ್‌ಶಿಪ್‌ನಲ್ಲಿ ಡಾಂಬರೀಕರಣ ಮಾಡದೇ ಹೊಸ ರಸ್ತೆಗಳನ್ನು ನಿರ್ಮಾಣ ಮಾಡುವುದನ್ನು ನಾವು ನಂಬುವುದಕ್ಕೆ ಆಗುವುದಿಲ್ಲ, ಒಟ್ಟು 60-63 ಲಕ್ಷ ರೂಪಾಯಿಗಳನ್ನು ಒಂದು ಕಿಲೋಮೀಟರ್‌ಗೆ ಖರ್ಚು ಮಾಡಿದ್ದಾರೆ. ಅಸ್‌ಫಾಲ್ಟ್ ಮಾಡಿಲ್ಲ. ದುಡ್ಡು ತೆಗೆದುಕೊಂಡು ಹೋಗಿದ್ದಾನೆ. ಮಾನ್ಯ ನಾಗೇಗೌಡರೆ ಈಗ ಒಂದು ಕಿಲೋಮೀಟರ್‌ಗೆ ಕೇವಲ 27 ಲಕ್ಷ ರೂಪಾಯಿಗೆ ಒಂದು ಟೆಂಡರ್ ಕರೆದಿದ್ದಾರೆ. 27 ಲಕ್ಷ ರೂಪಾಯಿಗಳಿಗೆ ಮೂರು ವರ್ಷದ ನಂತರ ಮಾಡುವಂತಾದ್ದನ್ನು, ಆ ಕಾಲದಲ್ಲಿ 63 ಲಕ್ಷ ರೂಪಾಯಿಗಳಿಗೆ ಒಂದು ಕಿಲೋಮೀಟರ್‌ಗೆ ಕೊಟ್ಟಿದ್ದಾರೆ ಎಂದರೆ ಆ ಭೂಪ ಯಾರು? ಆ ಅಧಿಕಾರಿ ಯಾರು? ಅದಕ್ಕೆ ಬೆಂಬಲ ಕೊಟ್ಟಿರುವವರು ಯಾರು? ದುಡ್ಡು ಡ್ರಾ ಮಾಡಿಕೊಂಡು ಹೊರಟು ಹೋಗಿದ್ದಾರೆ. ಈಗ ಬಂದಿರುವವರು ವರದಿಯನ್ನು ಇಟ್ಟುಕೊಂಡು ಮೀನಮೇಷ ಎಣಿಸುತ್ತಿದ್ದಾರೆ. ಆ ಅಧಿಕಾರಿ ರಿಟೈರ್ಡ್ ಆಗಿದ್ದಾರೆ. ಅವನ ಮನೆ ಜಫ್ತಿ ಮಾಡಿ, ಅವನ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಿ. ಅದನ್ನು ಮಾಡಲಿಲ್ಲ ಎಂದರೆ ನನಗೆ ಅನಿಸುತ್ತದೆ, ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂದು.

ಶ್ರೀ ಕೆ.ಎನ್. ನಾಗೇಗೌಡ : ಎಲ್ಲಾ ತಾವೇ ಹೇಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಹೇಳುತ್ತಾರೋ, ಏನೋ. ಇನ್ನೊಂದು ವಿವರವನ್ನು ನಾನು ನಿಮಗೆ ಕೊಡುತ್ತೇನೆ, ಗಮನಿಸಬೇಕು. ನನ್ನ ಹತ್ತಿರ ಲಿಸ್ಟ್ ಇದೆ ಕೊಡುತ್ತೇನೆ, ಅದಕ್ಕೆ ಹೋಗುವುದಕ್ಕೆ ಮೊದಲು ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೆ ಎಂದರೆ ಒಂದು ಮನೆತನದಲ್ಲಿ ಇವತ್ತು ಸಂತ್ರಸ್ತ ಕುಟುಂಬದ ಮುಖ್ಯಸ್ಥನ ಎಲ್ಲಾ ವಯಸ್ಕರ ಮಕ್ಕಳಿಗೆ ತಾವು ಸೈಟ್ ಕೊಟ್ಟಿದ್ದೀರಿ. ಅದರಲ್ಲಿ ಎರಡು ಮಾತಿಲ್ಲ. ಉದಾಹರಣೆಗೆ ಅಣ್ಣ ತಮ್ಮಂದಿರು ವಾಸ ಮಾಡುತ್ತಿದ್ದರು. ನನಗೆ

ಹಿರಿಯ ಮಕ್ಕಳು ಇದ್ದಾರೆ. ನನಗೆ ಕೊಟ್ಟರಿ, ನನ್ನ ಹಿರಿ ಮಕ್ಕಳಿಗೆ ಕೊಟ್ಟರಿ. ನನ್ನ ತಮ್ಮ ವಾಸ ಮಾಡುತ್ತಿದ್ದಾನೆ ಎಂದರೆ ನನ್ನ ಸಹೋದರ. ಅವನ ಮಕ್ಕಳು 18-20 ವರ್ಷದವರು ಇದ್ದಾರೆ. ನನ್ನ ತಮ್ಮನಿಗೆ ಇಲ್ಲ, ನಾವೆಲ್ಲಾ ಒಂದೇ ಮನೆಯಲ್ಲಿ ಇದ್ದೇವೆ. ಇಲ್ಲಿ ನಾಲ್ಕು ಸೈಟ್ ಹೊಡೆದುಕೊಳ್ಳುವುದಕ್ಕೆ ಅಲ್ಲ. ನಾನು ಅಡ್ರೆಸ್ ಕೊಡುತ್ತೇನೆ, ಡೀಟೈಲ್ ಆಗಿ ನೋಡಿಕೊಂಡು ಬಂದಿದ್ದೇನೆ. ಈ ಫೈಲ್ ನಿಮಗೆ ಕಳುಹಿಸಿಕೊಡುತ್ತೇನೆ. ವಿವರವನ್ನು ನಾನು ತಮಗೆ ಕೊಡುತ್ತೇನೆ. ಪತ್ರಿಕೆಯಲ್ಲಿ ಹೆಸರು ಬರಲಿ ಎಂದು ಇದನ್ನು ನಾನು ಹೇಳುತ್ತಿಲ್ಲ. ಒಂದು ಕುಟುಂಬದಲ್ಲಿ ಅಣ್ಣತಮ್ಮಂದಿರು ಇಬ್ಬರು ದೊಡ್ಡವರು ಇದ್ದರೆ, ಅವರ ಹಿರಿ ಮಕ್ಕಳು ಮೇಲಾಗಿ ಯಜಮಾನ ಆಗುತ್ತಾನೆ. ದೊಡ್ಡವನಿಗೆ ಎಲ್ಲಾ ಕೊಟ್ಟರಿ. ಇನ್ನೊಬ್ಬ ಚಿಕ್ಕಪ್ಪ, ಎಂದರೆ ತಮ್ಮ ಅವನಿಗೆ ಏನೂ ಕೊಡಲಿಲ್ಲ. ಈಗ ಎರಡು ಸೈಟ್ ಕೊಟ್ಟಿದ್ದಾರೆ, ಹಿರಿ ಮಗ ಇದ್ದಾರೆ, ಅವರ ಅಪ್ಪ ಇದ್ದಾನೆ ಎಂದು ಈಗ ಅವರು ಬಡಿದಾಡುತ್ತಿದ್ದಾರೆ. ಇದು ಹೌದೋ ಅಲ್ಲವೋ ಎಂದು ಪರಿಶೀಲನೆ ಮಾಡಿ. ನಾನು ಮಾಹಿತಿಯನ್ನು ನಿಮಗೆ ಕೊಡುತ್ತೇನೆ. ನೋಡಿಬಿಟ್ಟು ತಾವು ಇದಕ್ಕೆ ಪರಿಹಾರ ಕೊಡಿ. ಇನ್ನು ಪಂಚಾಯತ್ ದಾಖಲೆಗಳಲ್ಲಿ ಕೆಲವು ಹಳ್ಳಿಗಳಲ್ಲಿ ದಾಖಲೆಗಳು ಇಲ್ಲ. ಬಿಟ್ಟ ಹೋಗಿವೆ. ಭೂಸ್ವಾಧೀನ ಪ್ರಕ್ರಿಯೆ ಸಂದರ್ಭದಲ್ಲಿ ವಿಳಂಭವಾಗದೇ ಅದರಲ್ಲಿಯೂ ಸಹ ಪರಿಹಾರ ಕೊಡುವಂತಹ ವ್ಯವಸ್ಥೆಯಾಗಬೇಕು. ದಾಖಲೆಗಳು ಇಲ್ಲ ಎಂದರೆ ಏನು ಮಾಡುವುದು? ಬದುಕಿದ್ದಾರಲ್ಲ, ಗುಡಿಸಲುಗಳು ಇದೆಯಲ್ಲ. RR 5 & 6 ದಾಖಲೆಗಳು ಬಾಗಲಕೋಟೆಯಲ್ಲಿ ಇರಬೇಕಾಗುತ್ತದೆ. ದಾಖಲೆಗಳು ಇಲ್ಲದೇ ಇರಬಹುದು. ಅವನು ಇದ್ದಾನೆ ಅಂದಮೇಲೆ ಐಡೆಂಟಿಫೈ ಮಾಡಿ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ನಾನು ಹೇಳುತ್ತೇನೆ, ಹಳ್ಳಿಯಲ್ಲಿ ಹೊಲ ಮನೆ ಇಲ್ಲ, ಹೇಗೋ ಗುಡಿಸಲುಗಳಲ್ಲಿ ಜೀವನ ಮಾಡಿಕೊಂಡು ಇದ್ದಾರೆ, ಅವನಿಗೆ ಮನೆ ಕಟ್ಟುವುದಕ್ಕೆ 22 ಸಾವಿರ ಡೆಪಾಸಿಟ್ ಇಟ್ಟಿದ್ದೀರಿ. ದಾಖಲೆ ತೆಗೆದುಕೊಂಡು ಬನ್ನಿ ಎಂದು ಹಣ ಕೊಡುತ್ತಾ ಇಲ್ಲ. ಅವತ್ತು ಐಡೆಂಟಿಫೈ ಮಾಡಿದ್ದೀರಿ. ಉದಾಹರಣೆಗೆ ಬೀಳಗಿ ತಾಲ್ಲೂಕಿನ ಹಬ್ಬೂರು, ಬೆದರಿಹಾಳ್, ಹೊನ್ನೆಹಾಳ್, ಇರುಕಲ್, ಬೀರಕಟ್ಟೆ ಒಂದು 15-20 ಕುಟುಂಬಗಳು ಪ್ರತಿ ಹಳ್ಳಿಯಲ್ಲಿ ಈ ತರಹ ಇವೆ. ಈ ಜಂಟಿ ಪರಿಹಾರದ ಹಿರಿಯನಿಗೆ, ಅವನ ಮಕ್ಕಳಿಗೆ ಕೊಟ್ಟಿದ್ದೀರಿ, ಅವನ ತಮ್ಮನಿಗೆ ಇಲ್ಲ. ನಾನು ವಿವರ ಕೊಡುತ್ತೇನೆ, ಇದರ ಬಗ್ಗೆ ಯೋಚನೆ ಮಾಡಿ. ಉದಾಹರಣೆಗೆ ನಾನು ಹೋದಂತಹ ಹಳ್ಳಿಗಳಲ್ಲಿ ಲಿಂಗಾಪುರ, ಬೀರಕಟ್ಟೆ, ಕದ್ರಿಹಾಳ್, ಹಿರೇಕಲ್ಲು ಆ ಭಾಗದಲ್ಲಿ ನಾನು ಹೋದಾಗ ಆ ಮನೆಗಳ ವ್ಯಕ್ತಿಗಳ ಅಡ್ರೆಸ್‌ನ್ನು ತೆಗೆದುಕೊಂಡು ಬಂದಿದ್ದೇನೆ. ಮತ್ತೆ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವು ಜಮೀನು ಇದೆ. ಉದಾಹರಣೆಗೆ ಎಡೆಹಳ್ಳಿ ಗ್ರಾಮದಲ್ಲಿ ಸರ್ವೆ ನಂ.225ರಲ್ಲಿ 3,600 ಎಕರೆ ಜಮೀನು ಇದೆ. ಅಲ್ಲಿ ಉಳುಮೆ ಮಾಡುವುದಕ್ಕೆ ಅನುಕೂಲವಾಗತ್ತದೆ. ಅಲ್ಲಿ ಕಾಡು ಇಲ್ಲ. ಇದು ಅರಣ್ಯ ಇಲಾಖೆಗೆ ಸೇರಿದೆ. ಆದುದರಿಂದ ಇಂಥಾದ್ದನ್ನು ನಿರಾಶ್ರಿತರ ಶಿಬಿರದಲ್ಲಿ ಇರುವಂತಹ ಪುನರ್ವಸತಿ ಕೇಂದ್ರದಲ್ಲಿ ಇರುವಂತಹ ಪ್ರತಿ ಕುಟುಂಬದವರಿಗೆ ಎರಡು ಎಕರೆ ಎಂದು ನಿಗದಿ ಮಾಡಿ ಕೊಡಿ. ಯಾರು ಉಳುಮೆ ಮಾಡುವುದಕ್ಕೆ ತಯಾರಿದ್ದಾರೆ ಅವರಿಗೆ ಕೊಡಿ. ಮಂಡುದೂರಿನಲ್ಲಿ ಸರ್ವೆ ನಂ.111ರಲ್ಲಿ 184 ಎಕರೆ ಜಮೀನು ಇದೆ. ಸಿದ್ಧಾಪುರದಲ್ಲಿ ಸರ್ವೆ ನಂ. 150ರಲ್ಲಿ 298

ಎಕರೆ ಜಮೀನು ಇದೆ. ಎಡವಳ್ಳಿ ಗ್ರಾಮದಲ್ಲಿ ಸರ್ವೆ ನಂ.220ರಲ್ಲಿ 3,618 ಎಕರೆ ಜಮೀನು ಇದೆ. ನನ್ನ ಹತ್ತಿರ ಫೈಲ್ ಇದೆ, ಕಳುಹಿಸಿ ಕೊಡುತ್ತೇನೆ. ಕಾಡು ಕಡಿದು ಮಾಡಲಿಕ್ಕೆ ಹೊರಟ್ಟಿದ್ದೇವೆ. ಮನೆಮಠ ಕಳೆದುಕೊಂಡವರಿಗೆ ಜಮೀನು ಕೊಡಲಿಕ್ಕೆ ಏನು ಕಷ್ಟ. C & D ಲ್ಯಾಂಡ್‌ಅನ್ನು ಬಿಡುಗಡೆ ಮಾಡಿ ಕಾಡು ಬೆಳಸಲಿಕ್ಕೆ ಹೊರಟಿಲ್ಲವೊ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : ಕೇಂದ್ರ ಸರ್ಕಾರದಿಂದ ಮನೆ ಕಟ್ಟುವ ಸಲುವಾಗಿ ಕಾರಾವಾರದಿಂದ ಕಳುಹಿಸಿದ್ದ ಅರ್ಜಿ ವಾಪಸ್ಸು ಬಂದಿದೆ. ಆ ಆ್ಯಕ್ಟ್ ಪ್ರಕಾರ ಯಾರಿಗೆ ಅಲ್ಲಿ ಮನೆ ಕಟ್ಟಲಿಕ್ಕೆ ಆಗುವುದಿಲ್ಲ. ಮನೆ ಕಟ್ಟುವ ಸಲುವಾಗಿ ಕಳುಹಿಸಿದ್ದುದು ವಾಪಸ್ಸು ಬಂದಿದೆ. ಬಾಗಲಕೋಟೆಯಲ್ಲಿ ಮನೆ ಕಟ್ಟಲಿಕ್ಕೆ ಕಲ್ಲುಗಳು ಬೇಕು ಎಂದು ಕೇಳಿಕೊಂಡು ಬಂದಿದ್ದರು. ಅವರು ಕಲ್ಲುಗಳನ್ನು ತೆಗೆದುಕೊಂಡು ಹೋಗಲಿ ಎಂದು ಸುಮ್ಮನಾದೆವು ಅವರಿಗೆ ಏನು ಅಡ್ಡಿ ಮಾಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುವುದು ಏನೆಂದರೆ, ಇವತ್ತು ಕೇಂದ್ರ ಸರ್ಕಾರ ಕೂಡ ನಿಮ್ಮದೇ ಇದೆ. ನಿಮ್ಮ ಅರಣ್ಯ ಇಲಾಖೆಯಲ್ಲಿ ಇದ್ದಂತಹ ಜಮೀನ್ನು C & D ಜಮೀನುಗಳನ್ನಾಗಿ ಮಾಡಲಿಕ್ಕೆ ಲಕ್ಷಾಂತರ ರೂಪಾಯಿಗಳು ಆಗಿದೆ. ಅದರ ಬಗ್ಗೆ ಇಲ್ಲಿ ದೊಡ್ಡ ಚರ್ಚೆ ಆಗಿದೆ. ಅರಣ್ಯವನ್ನು ಬೆಳಸಬೇಕು ಎಂದು ಹೇಳುವ ನಿಮಗೆ ಅದಕ್ಕೆ ಬೇಕಾದಂತಹ ಜಮೀನುಗಳನ್ನು ಕೊಳ್ಳುವುದಕ್ಕೆ ಸಾಧ್ಯ ಇದೆ. ನಿರಾಶ್ರಿತರ ಪುನರ್‌ವಸತಿ ಕೇಂದ್ರಗಳಲ್ಲಿ ಒಂದು ಕುರುಚಲು ಗಿಡಾನು ಬೆಳೆದಿಲ್ಲಾ. ಬೇಕಾದರೆ ಹೋಗಿ ನೋಡಿ ಆ ಜಮೀನನ್ನಾದರೂ ಬಿಡುಗಡೆ ಮಾಡಿಕೊಂಡು ಬಡವರಿಗೆ ಒಂದೆರಡು ಎಕರೆ ಜಮೀನು ಕೊಡಿ ಎಂದರೆ ಕೊಡಲ್ಲ ಎಂದರೆ ಏನು? ಕೇಂದ್ರ ಸರ್ಕಾರದವರೇನು ಆಕಾಶದಿಂದ ಇಳಿದು ಬಂದಿಲ್ಲ. ಅವರಿಗೆ ಮಾನವೀಯತೆಯ ಇಲ್ಲವೇ? ನೀವು ಅವರಿಗೆ ಹೇಳಿ ಒಂದು ಎಕರೆ ಜಮೀನನ್ನೂ ನಾವು ಹೊಸದಾಗಿ ಅರಣ್ಯ ಮಾಡುವುದಕ್ಕೆ ಕೊಡಲ್ಲ ಎಂದು ಹೇಳಿ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ನಿರಾಶ್ರಿತರ ಜನ ಹಿಂದುಳಿದ ವರ್ಗದವರು ಮತ್ತು ಎಸ್.ಸಿ, ಎಸ್.ಟಿ ಜನಾಂಗದವರಿಗೆ ಅರಣ್ಯದ ಜಮೀನನ್ನು ಖಾಯಂ ಮಾಡಲಿಕ್ಕೆ ನಾವೊಂದು ಕಮಿಟಿ ಮಾಡಿದ್ದೇವೆ. ನೀವು ಪುನರ್‌ವಸತಿ ಕೇಂದ್ರ ಎಂದು ಏನು ಮಾಡಿದ್ದೀರಿ, ಅಲ್ಲಿ ರಸ್ತೆ ಚೆನ್ನಾಗಿ ಇದೆ. ನೀರು ಇದೆ. ದೀಪ ಇದೆ. ಆದರೆ ಅವನ ಕೈಯಲ್ಲಿ ಕೆಲಸ ಇಲ್ಲ. ಅವನು ಹೇಗೆ ಬದುಕಬೇಕು ಸ್ವಾಮಿ? ಅವನಿಗೆ ಬೇರೆ ಜಮೀನು ಇಲ್ಲ. 8-10 ವರ್ಷಗಳ ಹಿಂದೆ ಜಮೀನಿಗೆ ಇಷ್ಟು ಎಂದು ಪರಿಹಾರ ನೀವು ಕೊಟ್ಟಿದ್ದೀರಿ ಆದರೆ ಅದನ್ನು ಅವನು ಖರ್ಚು ಮಾಡಿಕೊಂಡಿದ್ದಾನೆ. ಅವನು ಬದುಕುವುದು ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆದ ಮೇಲೆ ಅರಣ್ಯೇತರ ಜಮೀನುಗಳನ್ನು ಕೊಡಲಿಕ್ಕೆ ಬರುವುದಿಲ್ಲ. ಇದರಿಂದಾಗಿ ಈ ಎಲ್ಲಾ ತಾಪತ್ರಯ ಬಂದಿದೆ. ಇದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಹಾಕಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಈಗ ಮನೆ ಇಲ್ಲದವರಿಗೆ ಮನೆ ಪ್ಲಾಟ್ ಕಟ್ಟಿಸಿಕೊಡಲಿಕ್ಕೆ 22,000 ರೂಪಾಯಿ ಕೊಡಬೇಕು ಅನ್ನೋ ಪಟ್ಟಿ ಇದೆ. ಆದರೆ, ಲಿಂಗಾಪುರದ

ಮೂರು ನಾಲ್ಕು ಸ್ಯಾಂಪಲ್ ಹೇಳುತ್ತೇನೆ. ಶಿವಲಿಂಗಪ್ಪ ಗುರಪ್ಪ ಮತ್ತು ಸೋಮಪ್ಪ ಎಂಬುವವರನ್ನು ಭೇಟಿ ಮಾಡಿ ಬಂದಿದ್ದೇನೆ. ಅವರಿಗೆ ಇವತ್ತಿಗೂ ದುಡ್ಡು ಕೊಟ್ಟಿಲ್ಲ. ಇನ್ನು ಹೆಬ್ಬೂರಿನಲ್ಲಿ ಹನುಮಪ್ಪ, ವೆಂಕಪ್ಪ, ಬಸಪ್ಪ ಮತ್ತು ಹನುಮಂತ ಎನ್ನುವ ನಾಲ್ಕು ಜನರಿಗೆ ಇದೂವರೆವಿಗೂ ದುಡ್ಡು ಕೊಟ್ಟಿಲ್ಲ. ಅದೇ ರೀತಿ ಹದ್ರಿಹಾಳ ಮತ್ತು ಪನ್ನಿಹಾಳದಲ್ಲಿ ಇನ್ನು ಕೊಡತಕ್ಕ 22,000 ರೂಪಾಯಿಗಳ ಪರಿಹಾರ ಕೊಟ್ಟಿಲ್ಲ. ಜಂಟಿ ಪರಿವಾರದ ಹಿರಿಯರಿಗೆ ಮನೆ ಕಟ್ಟಿಲಿಕ್ಕೆ ಹಣ ಕೊಡದೆ, ಅಣ್ಣತಮ್ಮಂದಿರ ಹೆಸರಿಗೆ ಮಾತ್ರ ಅವರಿಗೆ ಕೊಡದೇ ಇರುವುದಕ್ಕೆ ವಿವರವನ್ನು ನಾನು ಕೇಳಿದೆ. ಇಲ್ಲ ಎಂದು ಹೇಳಿದಿರಿ ಲಿಂಗಾಪುರದಲ್ಲಿ ಇದರ ಬಗ್ಗೆ ನನ್ನ ಹತ್ತಿರ ವಿವರ ಇದೆ.

ಒಬ್ಬ ಸದಸ್ಯರು : ಅರಣ್ಯ ಸಚಿವರು ಹೇಳಿದರು, ಕೇಂದ್ರ ಸರ್ಕಾರದವರು ಮನೆ ಕಟ್ಟಲಿಕ್ಕೆ ಕೊಡುವುದಿಲ್ಲ ಎಂದು ನಮಗೆ ಮನೆ ಕಟ್ಟಲಿಕ್ಕೆ ಪ್ರಾಶಸ್ತ್ಯವಾದ ಭೂಮಿಯನ್ನು ಅದಕ್ಕೆ ಪರ್ಯಾಯವಾಗಿ ಕಂದಾಯ ಇಲಾಖೆಯಿಂದ ಸರ್ಕಾರ ಕೊಡಲಿಕ್ಕೆ ಒಪ್ಪಿದ್ದರೆ, ಅದಕ್ಕೆ ಪ್ರಾಶಸ್ತ್ಯ ಕೊಡುತ್ತಾರೆ ಎಂದು ನಾವು ಚರ್ಚೆಯಲ್ಲಿ ಭಾಗವಹಿಸಿದ್ದುದು ಇದೆ. ನಿವೇಶನಗಳಿಗೆ ಅರಣ್ಯದ ಭೂಮಿಯನ್ನು ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳುತ್ತೀರಿ,

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) : C & D ಲ್ಯಾಂಡ್ ಕೊಡುವುದಕ್ಕೆ ಏನೂ ಅಭ್ಯಂತರ ಇಲ್ಲ. ಆದರೆ ಅರಣ್ಯದ ಭೂಮಿಯನ್ನು ಸುಪ್ರೀಂ ಕೋರ್ಟ್‌ನ ತೀರ್ಮಾನದ ಪ್ರಕಾರ ಅರಣ್ಯೇತರ ಬೇರೆ ವ್ಯವಹಾರಗಳ ಸಲುವಾಗಿ ಅರಣ್ಯದ ಭೂಮಿಯನ್ನು ಕೊಡುವುದಕ್ಕೆ ಬರುವುದಿಲ್ಲ. ಕಾರವಾರದಲ್ಲಿ ಮನೆ ಕಟ್ಟಲಿಕ್ಕೆ ಅನುಮತಿಗಾಗಿ ನಾನು ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆ, ಕೇಂದ್ರ ಸರ್ಕಾರದವರು ಅದನ್ನು ರಿಜೆಕ್ಟ್ ಮಾಡಿದರು. ಅದನ್ನು ವಾಪಸ್ಸು ಕಳುಹಿಸಿದ್ದಾರೆ. ನಮಗೆ ಅನುಮತಿ ನೀಡಿಲ್ಲ. ಸುಪ್ರೀಂ ಕೋರ್ಟ್‌ನವರು ಅರಣ್ಯ ಬಿಟ್ಟು ಬೇರೆ ವ್ಯವಹಾರಕ್ಕೆ ಭೂಮಿ ಕೊಡುವುದಿಲ್ಲ ಎಂದು ಹೇಳಿದ್ದಾರೆ. ನಾವು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಹಾಕಿದ್ದೇವೆ. ಮನೆ ಇಲ್ಲದವರಿಗೆ, ತೊಂದರೆಯಲ್ಲಿ ಇರುವವರಿಗೆ ಪರಿಹಾರ ನೀಡಬೇಕು ಎಂದು ಕೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗೆ ಮಾಡಿ ಸ್ವಾಮಿ, ನಾನು ಇಲ್ಲಿ ವಿವರವನ್ನು ಮಾನ್ಯ ಕಂದಾಯ ಸಚಿವರಿಗೆ ಕಳುಹಿಸಿಕೊಟ್ಟಿದ್ದೇನೆ. ಸ್ವತಃ ರೆವಿನ್ಯೂ ಇನ್ಸ್‌ಪೆಕ್ಟರ್ ಮೂಲಕ ನಾವು ಫೋರ್ ಒನ್ ಮತ್ತು ಸಿಕ್ಸ್ ಒನ್ ನೋಟಿಫಿಕೇಶನ್ ಆದ ಮೇಲೆ ಕೈಬಿಟ್ಟು ಹೋಗಿರತಕ್ಕ ಕುಟುಂಬಗಳ ವಿವರವನ್ನು ನಾವು ಕೇಳಿದ್ದೇವೆ. ಬೆನ್ನೂರಿನಲ್ಲಿ ಸುಮಾರ 46 ಕುಟುಂಬಗಳಿಗೆ ನೋಟಿಫಿಕೇಶನ್ ಆದ ಮೇಲೆ ಕೈಬಿಟ್ಟುಹೋಗಿದೆ. ಇದರ ಬಗ್ಗೆ ನಮ್ಮಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಸೀಲ್ ಹಾಕಿದ ದಾಖಲೆಗಳು ಇವೆ. ಆದುದರಿಂದ ಈ ವಿವರವನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಎಲ್ಲರಿಗೂ ಪುನರ್‌ವಸತಿ ಕೊಡುವ ಬಗ್ಗೆ ಗಮನ ಹರಿಸಬೇಕು. ಮಾನ್ಯ ನಗೇಗೌಡರು ಈ ವಿಷಯದ ಬಗ್ಗೆ ಗಮನ ಹರಿಸಬೇಕು. ಮೊದಲು ವೀರಪ್ಪನನ್ನು ಹಿಡಿಯಲಿ ಆಮೇಲೆ ಅದರ ಬಗ್ಗೆ ತಲೆಕೆಡಿಸಿಕೊಳ್ಳಿ. ಏಕೆ ಇಷ್ಟು ಗಲಾಟೆ ಮಾಡಿಕೊಳ್ಳುತ್ತೀರೋ ಗೊತ್ತಿಲ್ಲ, ಇವತ್ತು ನೀವು ಅಧಿಕಾರದಲ್ಲಿ ಇದ್ದೀರಿ, ಅವರಿಗೆ ಮನೆಮಠಗಳನ್ನು ಬಿಡುಗಡೆ ಮಾಡಿಸಿಕೊಡಿ ನಿಮಗೂ ಪುಣ್ಯ ಬರುತ್ತದೆ.

ಮಕ್ಕಳು ಮರಿಗೂ ಪುಣ ಬರುತ್ತದೆ. ಇಲ್ಲ ಅವರು ಹೇಗಾದರೂ ಮನೆಮಠ ಇಲ್ಲದೆ ರಸ್ತೆಯಲ್ಲಿ ತಿರುಗಲಿ ಎನ್ನುವದೇ ನಿಮ್ಮ ಧೋರಣೆ ಆದರೆ ನಾವು ಏನೂ ಹೇಳಲ್ಲ. ಹೇಳಬೇಕಾದ್ದು ನಮ್ಮ ಕರ್ತವ್ಯ ಹೇಳಿದ್ದೇವೆ. ಸ್ವಾಮಿ ಇನ್ನು ಕೊನೆಯದಾಗಿ ಎರಡು ಮೂರು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ನಿಮ್ಮ ಪರಿಹಾರ ನೀತಿ ಯಾವ ರೀತಿ ಇದೆ. ನಾಲ್ಕು ವರ್ಷದ ತೆಂಗಿಗೆ 97 ರೂಪಾಯಿ ಪರಿಹಾರ ಕೊಡುತ್ತೀರಿ, ದೇವರು ಮೆಚ್ಚುತ್ತಾನಾ ಇದನ್ನು ಮೂರು ವರ್ಷದ ದಾಳಿಂಬೆಗೆ 299 ರೂಪಾಯಿ ಕೊಟ್ಟಿದ್ದೀರಿ, ಒಂದು ದಾಳಿಂಬೆ ಗಿಡದ ಉತ್ಪನ್ನ 500 ಕೊಡುವುದಾದರೆ ಪರಿಹಾರ 299 ರೂಪಾಯಿ, ಐದು ವರ್ಷದ ನಿಂಬೆಗೆ 140 ರೂಪಾಯಿ, 40 ವರ್ಷದ ಮಾವಿನ ಗಿಡಕ್ಕೆ 500 ರೂಪಾಯಿ, ಕೊಡುತ್ತಿದ್ದೀರಿ, ಅದೇರೀತಿ 15 ವರ್ಷದ ಹುಣಸೆ ಹಣ್ಣಿನ ಗಿಡಕ್ಕೆ 300 ರೂಪಾಯಿ, ಇದರಿಂದ ಅವನು ಹೇಗೆ ಬದುಕಬೇಕು? ಅವನು ಸರ್ವನಾಶವಾಗುತ್ತಿದ್ದಾನೆ. ಇದು ಮಾನವೀಯತೆ ಇರತಕ್ಕ ಸರ್ಕಾರ ನಡೆದುಕೊಳ್ಳುವಂತಹ ರೀತಿ ಅಲ್ಲ. ಈ ರೀತಿಯ ಭಿಕ್ಷೆ ಕೊಡಬೇಡಿ. ಉತ್ತರ ಕರ್ನಾಟಕದ ಜನ ನಮಗೆ ಅನ್ಯಾಯ ಆಗುತ್ತಿದೆ ಎಂದು ಬೊಬ್ಬೆ ಹಾಕುತ್ತಿದ್ದಾರೆ. ನಾನು ಹೇಳುತ್ತೇನೆ ಎಂದು ಕೇಳಬೇಡಿ, ನೀವು ಅಗ್ರಿಕಲ್ಚರ್ ಎಕ್ಸ್‌ಪರ್ಟ್‌ಗಳನ್ನು ಕರೆದುಕೊಂಡು ಹೋಗಿ ಅವರಿಗೆ ಇದರಿಂದ ಎಷ್ಟು ಆದಾಯ ಬರುತ್ತದೆ ಎಂದು ನೋಡಿ. ತೋಟಗಾರಿಕೆ ಇಲಾಖೆಯವರನ್ನು ಕರೆದುಕೊಂಡು ಹೋಗಿ ನೋಡಿ. ಅವರ ಹೆಂಡತಿ ಮಕ್ಕಳು ಎಲ್ಲಾ ಸೇರಿಕೊಂಡು ತೋಟಗಳನ್ನು ಮಕ್ಕಳ ಹಾಗೆ ಸಾಕಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಹಾರ್ಟಿಕಲ್ಚರ್‌ಗೆ ಏನು ಪರಿಹಾರ ಕೊಡುತ್ತಿದ್ದಾರೆ, ಅದು 1991-92ರ ಸಾಲಿನಲ್ಲಿ ಮಾಡಿದ್ದುದು. 1991-92ರಲ್ಲಿ ಮಾಡಿದಂತಹ ಪರಿಹಾರ ನೀತಿ ಸರಿ ಇಲ್ಲವೆಂದು ನಾನು ಆಗಲೇ ಹಾರ್ಟಿಕಲ್ಚರ್ ಡೈರೆಕ್ಟರ್‌ರವರನ್ನು ಕರೆಸಿ ಅದನ್ನು ರಿವೈಸ್ ಮಾಡಲಿಕ್ಕೆ ಹೇಳಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ರಿವೈಸ್‌ಆಗಿ ಬಂದದ್ದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಗಾಗಲೇ ಕೊಟ್ಟಿರುವುದರ ಬಗ್ಗೆ ಹೇಳುತ್ತಿದ್ದೇನೆ. ಕೊಡುವುದರ ಬಗ್ಗೆ ಹೇಳುತ್ತಿಲ್ಲ. ಕೊನೆಯಪಕ್ಷ, ತೆಂಗಿನ ಮರಕ್ಕೆ 500 ರೂಪಾಯಿ ಕೊಡಿ, ದಾಳಿಂಬೆಗೆ 500 ರೂಪಾಯಿ, 5 ವರ್ಷದ ನಿಂಬೆಗಿಡಕ್ಕೆ ನೀವು ಕನಿಷ್ಠ 350 ರೂಪಾಯಿ ಮತ್ತು ಮಾವಿನ ಗಿಡಕ್ಕಂತೂ ನೀವು ಸಾವಿರ ಸಾವಿರದೈನೂರು ರೂಪಾಯಿಗಳನ್ನು ಕೊಡಲೇಬೇಕು. ನನಗೆ ಗೊತ್ತಿದೆ ಸರ್ಕಾರಕ್ಕೆ ಕಷ್ಟವಾಗುತ್ತದೆ ಅದಕ್ಕೂ ಇತಿಮಿತಿ ಇದೆ ಎಂದು ಆದರೂ ಈ ಮನೆಯಲ್ಲಿ ನಾನು ನಿಮ್ಮಿಂದ ಭರವಸೆ ಕೇಳುತ್ತಿದೇನೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) : ಯಡಿಯೂರಪ್ಪನವರು ಮಾವಿನ ಗಿಡಕ್ಕೆ 500 ರೂಪಾಯಿ ಕೊಡಿ ಎಂದು ಹೇಳಿದರು. ನನಗನಿಸುತ್ತದೆ ಅದು ಸಹ ಕಡಿಮೆ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಉತ್ತರ ಕೊಡುವ ಕಾಲದಲ್ಲಿ ಹೇಳಿದಂತಹ ವಿಷಯದಿಂದ ನನಗೆ ಬಹಳ ಸಂತೋಷವಾಯ್ತು. ದಯವಿಟ್ಟು ಮಾವು, ತೆಂಗು, ನಿಂಬೆ, ಇವುಗಳಿಗೆ

ಜಾಸ್ತಿ ಪರಿಹಾರವನ್ನು ನೀಡಬೇಕು. ನೀವು ರೈತರ ಮಕ್ಕಳು ಅವರಿಗಿಂತ ಜಾಸ್ತಿ ಕಳಕಳಿ ನಿಮಗೆ ಇರಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ನಮಗೆ ಎಲ್ಲಾ ಅರ್ಥ ಆಗುತ್ತದೆ. ಜನರ ಸಂಕಟನೂ ಅರ್ಥವಾಗುತ್ತದೆ. ಆದರೆ ಏನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಬೇಕು. ಇಲ್ಲಿ ನಿಮಗೆ ಸುಮ್ಮನೆ 1,000 ರೂಪಾಯಿಗಳನ್ನು ಕೊಡುತ್ತೇವೆ ಎಂದರೆ ಆಗುವುದಿಲ್ಲ. ಎಲ್ಲಾ ನೋಡಿಕೊಂಡು ಮಾಡಬೇಕಾಗುತ್ತದೆ. ನಮಗೂ ಕಳಕಳಿ ಇದೆ. ನಮ್ಮ ಇಡಿ ದೇಶದಲ್ಲಿ ಯಾವ ಪ್ರಾಜೆಕ್ಟ್‌ಗಳಿಗೂ ಈ ವಿಷಯದ ಬಗ್ಗೆ ನಾವು ಕೊಟ್ಟಿರುವ ಹಾಗೆ ಪರಿಹಾರವನ್ನು ಕೊಟ್ಟಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮ್ಮ ಜಂಟಿ ಜವಾಬ್ದಾರಿಯನ್ನು ಹೊಂದಿರತಕ್ಕಂಥ ಸಚಿವರು ಎದ್ದು ನಿಂತು ಹೇಳುತ್ತಾರೆ ಇನ್ನು ಹೆಚ್ಚು ಕೊಡಬೇಕು ಎಂದು.

ಶ್ರೀ ಡಿ.ಟಿ. ಜಯಕುಮಾರ್ : ಯಾವ ರೀತಿ ಈ ಪರಿಹಾರ ನೀತಿ ಮಾಡಬೇಕೆಂದು ಒಂದು ಫಾರ್ಮುಲ ಇದೆ. ಹಾಗೆಯೇ ನಾವು ಫಾಲೋ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಆ ಹೊಸ ಫಾರ್ಮುಲದಿಂದಲೇ ಎಲ್ಲಾ ಸರ್ವನಾಶ ಆಗುತ್ತಿರುವುದು ಮತ್ತು ಎಲ್ಲಾ ನೆಗೆದು ಬೀಳುತ್ತಿರುವುದು.

ಶ್ರೀ ಡಿ.ಟಿ. ಜಯಕುಮಾರ್ : ನೀವು ಕೇಳಿದ ತಕ್ಷಣ ಕೊಡಲಿಕ್ಕೆ ಆಗುತ್ತದಾ? ಅದಕ್ಕೂ ಒಂದು ಫಾರ್ಮುಲಾಟೀಸ್ ಇದೆ. ಯಾವ ರೀತಿ ಕೊಡಬೇಕು, 5 ವರ್ಷದ ಗಿಡಕ್ಕೆ ಎಷ್ಟು ಕೊಡಬೇಕು, 10 ವರ್ಷದ ಗಿಡಕ್ಕೆ ಎಷ್ಟು ಕೊಡಬೇಕು ಮತ್ತು ಗಿಡದ ವಯಸ್ಸು ಎಲ್ಲಾ ಲೆಕ್ಕ ಹಾಕಿ ಪರಿಹಾರವನ್ನು ಕೊಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ಹಾರ್ಟಿಕಲ್ಚರ್ ಡೈರಕ್ಟರ್‌ರವರನ್ನು ಕರೆಸಿ ಮಾತನಾಡಿದ್ದೇನೆ.

12.50 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡುಮ್ಮೂರು ವರ್ಷಗಳ ಹಿಂದೆಯೆ ಮುಳುಗಡೆಯಾದಂಥ ಜಾಗದಲ್ಲಿ ಜನರು ಜಮೀನು ಕಳೆದುಕೊಂಡಿದ್ದಾರೆ, ಅವರು ಎರಡು ಮೂರು ವರ್ಷಗಳಿಂದ ಬೀದಿ ಪಾಲಾಗಿದ್ದಾರೆ. ಅವರು ಬೆಳೆದ ದಾಳಿಂಬೆ, ತೆಂಗಿನಮರ, ಮಾವಿನ ಮರ, ಹುಣಸೇಮರ ಹೋಗಿದೆ. ಜವಾಬ್ದಾರಿ ಇರುವ ಸರ್ಕಾರ ಇವರುಗಳು ಶಿಫ್ಟ್ ಮಾಡುವ ಮುಂಚೆಯೇ ಇವರಿಗೆ ಪರಿಹಾರವನ್ನು ಕೊಡಬೇಕಾಗಿತ್ತು. ಮೂರ್‍ನಾಲ್ಕು ವರ್ಷಗಳ ಹಿಂದೆಯೇ ಕೊಟ್ಟಿದ್ದರೆ ಆತ ನಾಲ್ಕು ಎಕರೆ ಜಮೀನು ತೆಗೆದುಕೊಂಡು ತೋಟವನ್ನು ಬೆಳೆಸಿಕೊಳ್ಳುತ್ತಿದ್ದ. ತೋಟ ಬೆಳೆದುಕೊಂಡು ಇವೊತ್ತು ನೆಮ್ಮದಿಯಾಗಿರಬೇಕಿದ್ದ ಆತನನ್ನು ನಿಮ್ಮ ಶಾಪದಿಂದ ಜಮೀನು ಕಳೆದುಕೊಂಡು ಇವೊತ್ತು ನೆಮ್ಮದಿಯಾಗಿರಬೇಕಿದ್ದ ಆತನನ್ನು ನಿಮ್ಮ ಶಾಪದಿಂದ ಜಮೀನು ಕಳೆದುಕೊಂಡ ರಸ್ತೆಯಲ್ಲಿ ಅಲಿಯುವಂಥ

ದುಸ್ಥಿತಿಗೆ ತಂದಿಟ್ಟಿದ್ದೀರಿ. ನಮಗೆ ಟೈಮ್ ಬೇಕು ಎಂದು ಇವೊತ್ತು ಮತ್ತೆ ಹೇಳುತ್ತೀರಿ. ಜವಾಬ್ದಾರಿಯಿರುವ ಸರ್ಕಾರ ಮಾತನಾಡುವ ರೀತಿಯೇ ಇದು? ಈಗ ನಮಗೆ ಕಂದಾಯ ಮಂತ್ರಿಗಳು ಅಥವಾ ನೀರಾವರಿ ಸಚಿವರು ಹೇಳಬೇಕು, ಆ ರೈತನಿಗೆ ಒಬ್ಲೈಸ್ ಮಾಡಬೇಕು, ಜನ ಶಾಂತ ರೀತಿಯಿಂದ ಇರಬೇಕೆಂದು ಬಯಸುವುದಾದರೆ, ಯಾವ ಯಾವ ಗಿಡಗಳಿಗೆ ಎಷ್ಟೆಷ್ಟು ಪರಿಹಾರವನ್ನು ಕೊಡಬೇಕು ಎಂಬ ಬಗ್ಗೆ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ವರದಿ ಏನಿದೆಯೋ ಅದರ ಪ್ರಕಾರ ಪರಿಹಾರ ಕೊಡಬೇಕು. ಇದರ ಬಗ್ಗೆ ನೀವೇನೂ ಹೊಸದಾಗಿ ಮಾಡಬೇಕಾಗಿದೆಯೇ? ಆ ರೀತಿಯಿಂದ ನೀವು ಪರಿಹಾರವನ್ನು ಕೊಟ್ಟೇಕೊಡುತ್ತೇವೆಂದು ಇಲ್ಲಿ ಹೇಳಬೇಕು. ಅದನ್ನು ಮಾಡದಿದ್ದರೆ ಇಲ್ಲಿ ಚರ್ಚೆ ಮಾಡಿ ಏನು ಉಪಯೋಗ? ಕಳೆದ ಹತ್ತು ವರ್ಷಗಳಿಂದಲೂ ಈ ಕರ್ಮಕಥೆಯನ್ನು ಹೇಳುತ್ತಲೇ ಬಂದಿದ್ದೇವೆ. ಅವರುಗಳು ಜಮೀನು ಮನೆಮಠಗಳನ್ನು ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ನೀವಾದರೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೇನೋ ಎಂದು ಕೊಂಡಿದ್ದೆ. ನಮ್ಮ ಕಾಂಗ್ರೆಸ್‌ನವರಿಗಂತೂ ಸದ್ಬುದ್ಧಿ ಬರಲಿಲ್ಲ, ಅವರು ಮಾಡಲೂ ಇಲ್ಲ. ಜನರು ನಿಮಗೆ ಓಟು ಕೊಟ್ಟಿದ್ದಾರೆ, ಕೊನೆಯ ಪಕ್ಷ ಇನ್ನು ನಾಲ್ಕಾರು ತಿಂಗಳುಗಳಿರುವಾಗಲಾದರೂ ಈ ಕೆಲಸ ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಹೇಳಿದರೆ ಅದನ್ನು ಕೇಳದೆ ನಾವು ಹೀಗೆ ಇರುತ್ತೇವೆ ಎಂದು ಹೇಳಿದರೆ ನಾವೇನು ಮಾಡುವುದಕ್ಕಾಗುತ್ತದೆ, ಅನುಭವಿಸಿ. ಆದರೆ, ದಯಮಾಡಿ ನಾನು ಕೇಳಿದ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ. ಏಕೆಂದರೆ, ನಾವು ಹೆಚ್ಚು ಮಾತನಾಡಿದರೆ ಉಪಯೋಗ ಇಲ್ಲ, ನೀವು ಕಡಿಮೆ ಮಾತನಾಡಿ ನಾವು ಕೇಳಿದಂಥ ಪ್ರಶ್ನೆಗೆ ಸರಿಯಾದಂಥ ಪರಿಹಾರವನ್ನು ಕಂದಾಯ ಮಂತ್ರಿಗಳು ಮತ್ತು ನೀರಾವರಿ ಸಚಿವರು ಸೇರಿ ಸದನದಲ್ಲಿ ಪರಿಹಾರ ಕೊಡುವ ಬಗ್ಗೆ ಅನೌನ್ಸ್ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡ್ಮೂರು ಭಾಗಗಳು ಇವೆ. ಪುನರ್ವಸತಿಗೆ ಮತ್ತು ಮತ್ತೊಂದಕ್ಕೆ ಹಣ ಕೊಡತಕ್ಕಂಥವರು ನೀರಾವರಿ ಇಲಾಖೆಯವರು, ಆದರೆ, ಆ ಕಾರ್ಯಕ್ರಮವನ್ನು ಮಾಡತಕ್ಕಂಥವರು ಕಂದಾಯ ಇಲಾಖೆಯವರಾದ್ದರಿಂದ ಅವರು ಏನೇನು ಕಾರ್ಯಕ್ರಮಗಳನ್ನು ಪುನರ್ವಸತಿ ಸಲುವಾಗಿ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಕಂದಾಯ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ. ಇನ್ನು ಪ್ರಾಜೆಕ್ಟ್ ಬಗ್ಗೆ, ನೀರಾವರಿ ಬಗ್ಗೆ, ಆಲಮಟ್ಟಿ ಬಗ್ಗೆ, ಕೆನಾಲ್ಸ್, ಪ್ಲಾನ್ ಬಗ್ಗೆ ಮತ್ತು 2,000 ಇಸವಿಯವರೆಗೆ ಏನೇನು ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದೇವೆ ಎಂಬ ಬಗ್ಗೆ ನೀರಾವರಿ ಇಲಾಖೆಯವರು ಉತ್ತರ ಹೇಳಬೇಕಾಗುತ್ತದೆ. ಮೊದಲು ಪುನರ್ವಸತಿ ಬಗ್ಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ಖರ್ಗೆಯವರು ಕೇಳಿರುವುದಕ್ಕೆ ಸಂಬಂಧಪಟ್ಟಂತೆ ಈಗ ಕಂದಾಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತಾರೆ ಅನಂತರ ಅದರ ಬಗ್ಗೆ ವಿವರ ಕೊಡುತ್ತೇನೆ.

ಶ್ರೀ ಬಿ.ಎಸ್ .ಯಡಿಯೂರಪ್ಪ ; ನೀವು ಸ್ಟೇಟ್‌ಮೆಂಟ್ ಮಾಡಿಕೊಂಡು ಬಂದು ಬಿಟ್ಟಿರಿ ಆದರೆ ನಾನು ಇನ್ನೂ ಮಾತನಾಡಿ ಮುಗಿಸಿಲ್ಲ. ಈಗ ಖರ್ಗೆಯವರಿಗೆ ಮಾತ್ರ ಉತ್ತರ ಕೊಡುತ್ತೀರೋ ಅಥವಾ ನಾನು ಇಷ್ಟು ಹೊತ್ತು ಮಾತನಾಡಿದೆನಲ್ಲಾ ಅದಕ್ಕೆ ಉತ್ತರ ಕೊಡುತ್ತೀರೋ? ನನಗೇನೂ ಅರ್ಥವಾಗಿಲಿಲ್ಲ. ನಾನು ಮಾತನಾಡುವುದಕ್ಕೆ ಮುಂಚೆಯೇ ರೆಡಿಮೇಡ್ ಉತ್ತರ ಮಾಡಿಕೊಂಡು ಬಂದಿದ್ದೀರಿ. ಅಂಥ ಸ್ಟೇಟ್‌ಮೆಂಟ್‌ನ್ನು ನಾವು ಒಪ್ಪುವುದಿಲ್ಲ. ನೀವು ಅದನ್ನು ಓದುವ ಅಗತ್ಯವೇ ಇಲ್ಲ. ನಿಮ್ಮದು ಯಾವಾಗಲೂ ಒಂದು ರೆಡಿಮೇಡ್ ಉತ್ತರ ಇದ್ದೇ ಇರುತ್ತದೆ.

ಶ್ರೀ ಕೆ.ಎನ್.ನಾಗೇಗೌಡ : ನೀವು ಕೇಳಿದ ಎಲ್ಲಾ ಪ್ರಶ್ನೆಗಳಿಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ ; ನೀವು ಯಾವಾಗಲೂ ರೆಡಿಮೇಡ್ ಉತ್ತರ ಮಾಡಿಕೊಂಡೇ ಇರುತ್ತೀರಿ. ನಾವು ಏನೇನು ಪ್ರಸ್ತಾಪ ಮಾಡಿದ್ದೇವೆ, ಅದರ ಬಗ್ಗೆ ಮಾಹಿತಿಯಿಲ್ಲ. ನೀವು ಸ್ಟೇಟ್‌ಮೆಂಟ್ ರೆಡಿ ಮಾಡಿಕೊಂಡು ಇಲ್ಲಿ ಓದುತ್ತೇನೆ ಎನ್ನುವುದಾದರೆ ಯಾರಿಗೆ ಬೇಕು ನಿಮ್ಮ ಸ್ಟೇಟ್‌ಮೆಂಟ್, ನಿಮ್ಮ ಸ್ಟೇಟ್‌ಮೆಂಟ್ ತೆಗೆದುಕೊಂಡು ಹೋಗಿ ತಿಪ್ಪೆಗೆ, ಹರಿದು ಬಿಸಾಕಿ.

ಶ್ರೀ ಕೆ.ಎನ್. ನಾಗೇಗೌಡ : ಒಂದು ನಿಮಿಷ ಯಡಿಯೂರಪ್ಪನವರೇ, ಒಂದು ಗಂಟೆ ಬೇಕಾದರೂ ಸಂಪೂರ್ಣವಾಗಿ ಇದರ ಬಗ್ಗೆ ಎಲ್ಲಾ ವಿವರಗಳನ್ನು, ಮಾಹಿತಿಗಳನ್ನು ಕೊಡುತ್ತೇವೆ. ನೀವು ಮೊದಲು ರಿಪ್ಲೈ ಕೇಳಿ. ಅವರು ರಿಪ್ಲೈ ಕೇಳುವ ಬಗ್ಗೆ ನಮ್ಮದು ಯಾವ ಅಭ್ಯಂತರವೂ ಇಲ್ಲ. ಫಾರ್ಮಲ್ ರೀತಿಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇವೆ. ಅದರ ಬಗ್ಗೆ ಯಾವುದೇ ವಿವರ ಕೇಳಲಿ, ಯಾವುದೇ ಪ್ರಶ್ನೆ ಕೇಳಲಿ, ಎಲ್ಲದಕ್ಕೂ ನಮ್ಮ ಹತ್ತಿರ ಮಾಹಿತಿ ಇದೆ, ನಾವು ಓಡಿಹೋಗುವುಂಥ ಪ್ರಶ್ನೆಯಿಲ್ಲ. ಉತ್ತರವನ್ನೂ ಕೊಡೋಣ, ಪರಿಹಾರವನ್ನೂ ಕಂಡುಹಿಡಿಯೋಣ ಮತ್ತು ಇಲ್ಲಿ ಕುಳಿತು ಕೆಲಸವನ್ನೂ ಮಾಡೋಣ.

ಅಧ್ಯಕ್ಷರು : ನನ್ನ ಕಷ್ಟ ಇಲ್ಲಿ ಏನು ಎಂದರೆ ಈಗಾಗಲೇ ಸದನ ಬೆಳಿಗ್ಗೆ 10-25ಕ್ಕೆ ಪ್ರಾರಂಭವಾಗಿದೆ. ಈಗ ಒಂದು ಗಂಟೆಗೆ ಇನ್ನೂ ಐದು ನಿಮಿಷ ಬಾಕಿ ಇದೆ. ಅವರು ಉತ್ತರವನ್ನು ಇನ್ನೂ ಎಷ್ಟು ಹೊತ್ತು ಕೊಡುತ್ತಾರೋ ಗೊತ್ತಿಲ್ಲ. ಆಮೇಲೆ ಪ್ರಶ್ನೋತ್ತರ ಬೇರೆ ಇನ್ನೂ ಬಾಕಿ ಇದೆ. ಸದನ ನಾಳೆ ಮತ್ತು ನಾಳಿದ್ದು ಸೇರಿದಂತೆ ಒಟ್ಟು ನಾಲ್ಕು ದಿನಗಳು ಸಮಾವೇಶಗೊಳ್ಳುವುದಿಲ್ಲ. ಅದಕ್ಕೇ ನಾನು ಹೇಳಿದ್ದು ಈಗ ಮುಳುಗಡೆಯಲ್ಲಿದ್ದೇವೆ, ಇನ್ನು ತೇಲುವುದು ಯಾವಾಗ ಎಂದು ನನ್ನ ಪ್ರಶ್ನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದೂ ಅದೇ ಪ್ರಶ್ನೆ ಅಧ್ಯಕ್ಷರೇ, ತಮ್ಮ ಒಂದು ಧಾರಾಳತನದಿಂದ ಇವೊತ್ತು ಈ ಪ್ರಮುಖವಾದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಇಷ್ಟು ಸಮಯ ಕೊಟ್ಟಿದ್ದೀರಿ. ನಿಜವಾಗಿಯೂ ಆ ಭಾಗದ ಲಕ್ಷಾಂತರ ಜನರಿಗೆ ಸಂಬಂಧಪಟ್ಟಂಥ ಪ್ರಮುಖವಾದ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅವರು ಪರಿಹಾರ ಕೊಟ್ಟರೆ ನಮಗೆ ಅಷ್ಟೇ ಸಾಕು.

ಅಧ್ಯಕ್ಷರು : ನಮ್ಮದೇನೂ ತಕರಾರಿಲ್ಲ. ನಿಮ್ಮಿಬ್ಬರಿಗೂ ಸೇರಿ ಅಂದಾಜು ಎಷ್ಟು ಸಮಯ ಬೇಕಾಗುತ್ತದೆ ಎಂಬುದು ನನ್ನ ಪ್ರಶ್ನೆ. ಏಕೆಂದರೆ ನಾವು ಮಾನಸಿಕವಾಗಿ ತಯಾರಾಗಬೇಕಲ್ಲ. ನಾವು ಮತ್ತು ಉಪಾಧ್ಯಕ್ಷರು ತಯಾರಾಗಬೇಕು.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ, ಎರಡು ಗಂಟೆಯೊಳಗೆ ಎಲ್ಲವನ್ನೂ ಮುಗಿಸಿಬಿಡೋಣ. ಇದರ ಬಗ್ಗೆ ಏನು ಸೂಚನೆ ಬಂದಿದೆ, ಅದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಕ್ಲಾರಿಫಿಕೇಶನ್ 2 ಗಂಟೆಯೊಳಗೆ ಮುಗಿಸಿಬಿಡುತ್ತೇವೆ.

ಅಧ್ಯಕ್ಷರು : ಸನ್ಮಾನ್ಯ ಕಂದಾಯ ಮಂತ್ರಿಗಳು ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಸರ್ಕಾರದ ಉತ್ತರವನ್ನು ಹೇಳಬೇಕು.

ಮಂತ್ರಿಗಳ ಹೇಳಿಕೆ

ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳ ವಿಳಂಬ ಹಾಗೂ ಅಸಮರ್ಪಕ ಪುನರ್ವಸತಿಯಿಂದಾಗಿ ಬಾಗಲಕೋಟೆ ಪಟ್ಟಣದ ಮುಳುಗಡೆ.

+ ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಜ್ಯದ ಪ್ರತಿಷ್ಠಿತ ಯೋಜನೆಯಾಗಿದ್ದು ಈ ಯೋಜನೆಯಲ್ಲಿ ವಿವಿಧ ಕಾಮಗಾರಿಗಳು ವೇಗದಿಂದ ನಡೆಯಲು ಸರ್ಕಾರವು ಗಮನಿಸಿದ್ದು, ಯೋಜನೆ ಕಾರ್ಯವನ್ನು ಪ್ರಗತಿಯಲ್ಲಿದ್ದೆ.

ಕಾಮಗಾರಿಗಳ ಬಗ್ಗೆ ಹೇಳುವುದಾರೆ, ಈ ಯೋಜನೆಯ ಕಾಮಗಾರಿಗಳು ತ್ವರಿತಗತಿಯಲ್ಲಿ ಸಾಗುತ್ತಿದೆ. ಈ ಕಾಮಗಾರಿಗೆ ಬೇಕಾಗಿರುವ ಅರ್ಥಿಕ ಸಹಾಯವನ್ನು ಗಮನದಲ್ಲಿ ಇಟ್ಟುಕೊಂಡು ರಾಜ್ಯವು ಈಗಾಗಲೇ ಕೃಷ್ಣಾ ಭಾಗ್ಯ ಜಲ ನಿಗಮ ಎಂಬ ನಿಯಮಿತ ಸಂಸ್ಥೆಯನ್ನು ಸ್ಥಾಪಿಸಿದ್ದು ಈ ನಿಗಮದಿಂದ ಕಳೆದ ಎರಡು ವರ್ಷಗಳಲ್ಲಿ ರೂ. 698.00 ಕೋಟಿಗಳನ್ನು ಸಂಗ್ರಹಿಸಲಾಗಿದೆ. ಈ ಪೈಕಿ ರೂ. 670.86 ಕೋಟಿಗಳನ್ನು ಖರ್ಚು ಮಾಡಲಾಗಿದೆ. 1997-98ನೇ ಸಾಲಿನಲ್ಲಿ ರೂ. 750-00 ಕೋಟಿಗಳನ್ನು ನಿಗಮದ ಮೂಲಕ ಸಂಗ್ರಹಿಸುವ ಗುರಿ ಇದ್ದು ಈಗಾಗಲೇ ರೂ. 400.00 ಕೋಟಿಗಳನ್ನು ಕ್ರೋಡೀಕರಿಸಲಾಗಿದೆ. ಇದರೊಂದಿಗೆ 1996-97ನೇ ಸಾಲಿನಿಂದ ಕೇಂದ್ರ ಸರ್ಕಾರದ "ತ್ವರಿತ ನೀರಾವರಿ ಲಾಭ ಯೋಜನೆ ಅಡಿಯಲ್ಲಿ" ಪ್ರಗತಿಯಲ್ಲಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1ರ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಸಾಲದೆಂದು ರೂ. 114.00 ಕೋಟಿಗಳ ಸಾಲ ಮಂಜೂರಾಗಿದೆ. ಇದರಲ್ಲಿ ಇದುವರೆವಿಗೂ ರೂ. 57.00 ಕೋಟಿಯನ್ನು ಪಡೆಯಲಾಗಿದೆ. 1997-98 ನೇ ಸಾಲಿನಲ್ಲಿ ಈ ಯೋಜನೆಯ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ರೂ. 100.00 ಕೋಟಿಗಳ ಸಾಲ ಸೌಲಭ್ಯವನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಈ ಯೋಜನೆಗಾಗಿ ಜೂನ್ 97ರ ಅಂತ್ಯದವರೆವಿಗೆ ರೂ. 2558.87 ಕೋಟಿಗಳು ಖರ್ಚಾಗಿರುತ್ತದೆ. ಈ ಯೋಜನೆಯಡಿ